ಸಂಪುಟ: 04 ಸಂಚಿಕೆ: 361 ಪುಟಗಳು: 08 ಶುಕ್ರವಾರ 14 ಮಾರ್ಚ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

**ಮುಂಜಾನೆ ಮಾತು**

ನೀವು ಇತರರಿಗೆ ಸಹಾಯ ಮಾಡಿದರೆ, ನೀವು ನಿಜವಾದ ಯಶಸ್ಸನ್ನು ಸಾಧಿಸಿದ್ದೀರಿ ಎಂದರ್ಥ. ಹಾಗಾಗಿ ಅಗತ್ಯವಿರುವವರಿಗೆ ಸಹಾಯ ಮಾಡಿ

# ಉದಯ ವಾಹಿನಿ
UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

# ಚೀನಾಗೆ ನಮೋ ಸಡ್ಡು

- ಮಹಾಸಾಗರ್ ಎಂಬ ಹೊಸ ಪರಿಕಲ್ಪನೆ ಘೋಷಿಸಿದ ಪ್ರಧಾನಿ ಮೋದಿ
- ಚೀನಾದ ಸಾಗರದಾಹದ ವಿರುದ್ಧ ಮೋದಿ ಮಹಾಸಾಗರ ಸಡ್ಡು...!
- ಕಡಲ ಸುರಕ್ಷತೆಗೆ ಹೊಸ ಕಲ್ಪನೆ ತಂದ ಪ್ರಧಾನಿ..? ಹಿಂದೂ ಮಹಾಸಾಗರ ಯಾರದ್ದು..?
- ಮಾರಿಷಸ್‌ನಲ್ಲಿ ಹೊಸ ಸಂಸತ್ ನಿರ್ಮಾಣಕ್ಕೆ ಭಾರತದ ಸಹಕಾರ

1 ಎರಡು ದಿನಗಳ ಪ್ರವಾಸಕ್ಕಾಗಿ ಮಾರಿಷಸ್‌ಗೆ ತೆರಳಿದ್ದ ಪ್ರಧಾನಿ

2 ಜಗತ್ತಿನಲ್ಲಿರುವ ಲಕ್ಷಾಂತರ ಹಿಂದುಗಳಿಗೆ ತ್ರಿವೇಣಿ ಸಂಗಮದ ಜಲ ವಿಶೇಷ

3 ವಿಶ್ವದ ಮೂರನೇ ಅತಿದೊಡ್ಡ ಸಾಗರ

ಹಿಂದೂ ಮಹಾಸಾಗರ ಏಷ್ಯಾ, ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ಖಂಡಗಳ ನಡುವೆ ಬರುತ್ತದೆ. ಭಾರತದ ತುತ್ತ ತುದಿಯಿಂದ ಶುರುವಾಗುವ ಹಿಂದೂ ಮಹಾಸಾಗರ ಸುಮಾರು 10 ಸಾವಿರ ಕಿಲೋ ಮೀಟರ್ ಅಗಲ ಹೊಂದಿದ್ದು, 7 ಕೋಟಿಗೂ ಅಧಿಕ ಚದರ ಕಿಲೋ ಮೀಟರ್ ವಿಸ್ತೀರ್ಣವನ್ನು ಹೊಂದಿದೆ. ವಿಶ್ವದ ಮೂರನೇ ಅತಿದೊಡ್ಡ ಸಾಗರವಾಗಿದ್ದು, ಇಲ್ಲಿ ಪ್ರಾಬಲ್ಯ ಸ್ಥಾಪಿಸಲು ವಿಶ್ವದ ಅನೇಕ ರಾಷ್ಟ್ರಗಳು ಹವಣಿಸುತ್ತಿವೆ.

- **ಉದಯವಾಹಿನಿ, ಬೆಂಗಳೂರು**

ಹಿಂದೂ ಮಹಾಸಾಗರದಲ್ಲಿ ಕಮ್ಯುನಿಸ್ಟ್ ಚೀನಾದ ಅಧಿಪತ್ಯ ಸ್ಥಾಪಿಸಲು ನಡೆಸಿರುವ ಯತ್ನವನ್ನು ತಡೆಯಲು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸುರಕ್ಷತೆ ಮತ್ತು ಭದ್ರತೆಗಾಗಿ ಪ್ರಧಾನಿ ಮೋದಿ ಅವರು ದ್ವೀಪರಾಷ್ಟ್ರ ಮಾರಿಷಸ್‌ನಲ್ಲಿ 'ಮಹಾಸಾಗರ್' ಎಂಬ ಹೊಸ ಪರಿಕಲ್ಪನೆಯನ್ನು ಘೋಷಿಸಿದ್ದಾರೆ. ಜತೆಗೆ, ಕಡಲ ಭದ್ರತೆ, ವ್ಯಾಪಾರಕ್ಕೆ ಸಂಬಂಧಿಸಿ ಎಂಟು ಒಪ್ಪಂದಗಳಿಗೆ ಮಾರಿಷಸ್ ಪ್ರಧಾನಿ ನವೀನ್ ಚಂದ್ರ ರಾಮಗೂಲಂ ಅವರ ಜತೆಗೆ ಇದೇ ವೇಳೆ ಸಹಿಹಾಕಿದ್ದಾರೆ. ಗ್ಲೋಬಲ್ ಸೌತ್ (ಬೆಳೆಯುತ್ತಿರುವ ದೇಶಗಳು) ಸಮಗ್ರ ಅಭಿವೃದ್ಧಿ ಮತ್ತು ಭದ್ರತೆಗಾಗಿ ಮಹತ್ವಾಕಾಂಕ್ಷೆಯ ಮಹಾಸಾಗರ್ ಎಲ್ಲಾ ಕ್ಷೇತ್ರಗಳಲ್ಲಿ ಭದ್ರತೆ ಮತ್ತು ಬೆಳವಣಿಗೆಗಾಗಿ ಪರಸ್ಪರ ಸಮಗ್ರ ಪ್ರಗತಿ- ಪರಿಕಲ್ಪನೆ ಘೋಷಣೆ ಮಾಡಿದ ಅವರು, ವ್ಯಾಪಾರಕ್ಕಾಗಿ ಅಭಿವೃದ್ಧಿ, ಸುಸ್ಥಿರ ಪ್ರಗತಿಗಾಗಿ ಸಾಮರ್ಥ್ಯವೃದ್ಧಿ ಮತ್ತು ಭವಿಷ್ಯಕ್ಕಾಗಿ ಪರಸ್ಪರ ಭದ್ರತೆಯ ಮೇಲೆ ನಮ್ಮ ಈ ನೂತನ ಪರಿಕಲ್ಪನೆಯು ಗಮನ ಕೇಂದ್ರೀಕರಿಸುತ್ತದೆ ಎಂದು ಹೇಳಿದರು. ಇದೇ ವೇಳೆ ಅವರು ಮಾರಿಷಸ್ ಅನ್ನು ಭಾರತದ ಪ್ರಮುಖ ಪಾಲುದಾರ ಎಂದು ಕರೆದ ಅವರು, ಭಾರತದ ಸಾಗರ್ ಚಿಂತನೆಗೆ 10 ವರ್ಷಗಳ ಹಿಂದೆ ಮಾರಿಷಸ್‌ನಲ್ಲಿ ಹೇಗೆ ಬುನಾದಿ ಹಾಕಲಾಯಿತು ಎಂಬುದನ್ನು ಸ್ಮರಿಸಿದರು.

**8 ಒಪ್ಪಂದಗಳಿಗೆ ಸಹಿ:** ಇದೇ ವೇಳೆ ಭಾರತವು ಕಡಲ ಭದ್ರತೆ, ವ್ಯಾಪಾರ ಸೇರಿ ಹಲವು ಕ್ಷೇತ್ರಗಳಲ್ಲಿ ಸಹಕಾರ, ಉತ್ತೇಜನ ನೀಡುವ ಎಂಟು ಒಪ್ಪಂದಗಳಿಗೆ ಮಾರಿಷಸ್ ಜತೆಗೆ ಸಹಿಹಾಕಿದೆ. ಗಡಿಯಾಚೆಗಿನ ವ್ಯವಹಾರದಲ್ಲಿ ರಾಷ್ಟ್ರೀಯ ಕರೆನ್ಸಿ ಬಳಕೆ, ಕಡಲ ಕುರಿತ ಮಾಹಿತಿ ವಿನಿಮಯ, ಅಕ್ರಮ ಹಣ ವರ್ಗಾವಣೆ ತಡೆಗೆ ಜಂಟಿ ಕೆಲಸ, ಸಣ್ಣ, ಅತೀ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಕ್ಷೇತ್ರದಲ್ಲಿ ಸಹಭಾಗಿತ್ವಕ್ಕೆ ಉತ್ತೇಜನ ನೀಡುವ ಉದ್ದೇಶಗಳನ್ನು ಈ ಒಪ್ಪಂದಗಳು ಹೊಂದಿವೆ.

**ಪೋರ್ಟ್ ಲೂಯಿಸ್ :** ಪ್ರಧಾನಿ ಮೋದಿ ಅವರಿಗೆ ಮಾರಿಷಸ್‌ನ ಅತ್ಯುನ್ನತ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎರಡು ದಿನಗಳ ಮಾರಿಷಸ್ ಪ್ರವಾಸದಲ್ಲಿರುವ ಮೋದಿ ಅವರಿಗೆ ಕೊನೆಯ ದಿನವಾದ ಬುಧವಾರ ಪೋರ್ಟ್ ಲೂಯಿಸ್‌ನಲ್ಲಿ ನಡೆದ ರಾಷ್ಟ್ರೀಯ ದಿನಾಚರಣೆಯಲ್ಲಿ ''ದಿ ಗ್ರ್ಯಾಂಡ್ ಕಮಾಂಡ್ ಆಫ್ ದಿ ಸ್ಟಾರ್ ಅಂಡ್ ಕೀ ಆಫ್ ದಿ ಇಂಡಿಯನ್ ಓಷಿಯನ್'' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ರೀತಿ ಮಾರಿಷಸ್‌ನ ಅತ್ಯುನ್ನತ ಗೌರವ ಪಡೆದ ಮೊದಲ ಭಾರತೀಯ ಹಾಗೂ ಆರನೇ ವಿದೇಶಿಗ ಮೋದಿ ಆಗಿದ್ದಾರೆ.



### ಭಾರತವನ್ನು ಕಟ್ಟಿ ಹಾಕಲು ಚೀನಾ ಏನೆಲ್ಲಾ ಮಾಡ್ತಿದೆ...

ಸಮುದ್ರ ಮಾರ್ಗದಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ಚೀನಾ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಭಾರತದ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಶ್ರೀಲಂಕಾ, ಮ್ಯಾನ್ಮಾರ್ ಹಾಗೂ ಬಾಂಗ್ಲಾದೇಶದ ಬಂದರುಗಳ ಅಭಿವೃದ್ಧಿಗೆ ಹಣಕಾಸಿ ನೆರವನ್ನು ನೀಡಿದೆ. ಈಗಾಗಲೇ ಪಾಕಿಸ್ತಾನದ ಗ್ವಾದರ್ ಬಂದರು, ಶ್ರೀಲಂಕಾದ ಹಂಬಂಟೋಟ ಬಂದರು, ಮ್ಯಾನ್ಮಾರ್‌ನ ಸಿಟ್ವೆ ಬಂದರು ಹಾಗೂ ಬಾಂಗ್ಲಾದೇಶದ ಚಿತ್ತಗಾಂಗ್ ಬಂದರುಗಳಲ್ಲಿ ಚೀನಾ ಪ್ರಾಬಲ್ಯ ಸಾಧಿಸಿದೆ. ಇತ್ತ ಮಾಲ್ಡೀವ್ಸ್‌ಗೂ ಕೂಡ ಚೀನಾ ಮಿಲಿಟರಿ ನೆರವನ್ನು ನೀಡುತ್ತಿದ್ದು, ಈ ದೇಶಗಳಿಗೆ ಆರ್ಥಿಕ ಹಾಗೂ ವ್ಯಾಪಾರದ ನೆರವನ್ನು ಚೀನಾ ನೀಡುತ್ತಿದ್ದು, ಭಾರತದ ವಿರುದ್ಧ ಈ ದೇಶಗಳನ್ನು ಎತ್ತಿಕಟ್ಟುತ್ತಾ ಬಂದಿದೆ. ಮಾರಿಷಸ್ ಮೇಲೂ ಚೀನಾ ಕಣ್ಣು ಬಿದ್ದಿದ್ದು, ಅಲ್ಲಿಯೂ ಒಪ್ಪಂದ ಮಾಡಿಕೊಳ್ಳಲು ಡ್ರ್ಯಾಗನ್ ಮುಂದಾಗಿದೆ. ಆದರೆ, ಭಾರತದ ಕಡೆ ಮಾರಿಷಸ್ ಹೆಚ್ಚಿನ ಒಲವನ್ನು ತೋರಿಸಿದೆ.

### ಹಿಂದೂ ಮಹಾಸಾಗರ ಯಾರದ್ದು

ಹಿಂದೂ ಮಹಾಸಾಗರದ ಮೇಲೆ ಮೊದಲಿನಿಂದಲೂ ಭಾರತದ ಪ್ರಾಬಲ್ಯ ಇದ್ದು, ಭಾರತಕ್ಕೆ ಹಲವು ಕಾರಣಕ್ಕೆ ಇಂಡಿಯನ್ ಓಷನ್ ಪ್ರಮುಖವಾಗಿದೆ. ವ್ಯಾಪಾರ, ಭದ್ರತೆ ಮತ್ತು ಸಂಪನ್ಮೂಲಗಳ ಕಾರಣಕ್ಕೆ ಭಾರತ ಹಿಂದೂ ಮಹಾಸಾಗರಕ್ಕೆ ಬೇರೆ ಪ್ರಬಲ ರಾಷ್ಟ್ರಗಳ ಪ್ರವೇಶವನ್ನು ವಿರೋಧಿಸುತ್ತಾ ಬಂದಿದೆ. ಅದಲ್ಲದೇ ಪೂರ್ತಿ ಹಿಂದೂ ಮಹಾಸಾಗರಕ್ಕೆ ಭಾರತವೇ ಮಾಲೀಕ ಎಂದು ಹೇಳಲಾಗುತ್ತಿದ್ದು, ಭಾರತ ಕೂಡ ಇಂಡಿಯನ್ ಓಷನ್ ಪೂರ್ತಿ ತನ್ನದೆಂದು ಹೇಳುತ್ತಾ ಬಂದಿದೆ. ಭಾರತೀಯ ನೌಕಾಪಡೆ ಇಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

**ಎರಡು ದಿನದ ಮಾರಿಷಸ್ ಪ್ರವಾಸ ಮುಗಿಸಿ ಭಾರತಕ್ಕೆ ಮರಳಿದ ಮೋದಿ:** ಎರಡು ದಿನಗಳ ಪ್ರವಾಸಕ್ಕಾಗಿ ಮಾರಿಷಸ್‌ಗೆ ತೆರಳಿದ್ದ ಪ್ರಧಾನಿ ನರೇಂದ್ರ ಮೋದಿ ರಾಷ್ಟ್ರ ರಾಜಧಾನಿ ನವದೆಹಲಿಗೆ ಮರಳಿದರು. ಮಾರಿಷನ್‌ನ ರಾಷ್ಟ್ರೀಯ ದಿನದ ಮುಖ್ಯ ಅತಿಥಿಯಾಗಿ ಅವರು ಪಾಲ್ಗೊಂಡಿದ್ದರು. 2015ರಲ್ಲೂ ಕೂಡ ಆಹ್ವಾನದ ಮೇರೆಗೆ ಮೋದಿ ಮಾರಿಷಸ್‌ಗೆ ಭೇಟಿ ನೀಡಿದ್ದರು. ಮಾರಿಷಸ್ ಪ್ರಧಾನಿ, ಜನರು ಮತ್ತು ಮಾರಿಷಸ್ ಸರ್ಕಾರದ ಪ್ರೀತಿಗಾಗಿ ಧನ್ಯವಾದ ಸಲ್ಲಿಸಿ ಮೋದಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಹಾಗೆಯೇ ತಮ್ಮ ಪ್ರವಾಸದ ವಿಡಿಯೋವನ್ನು ಹಂಚಿಕೊಂಡಿದ್ದಾರೆ. ಈ ಪ್ರವಾಸದ ವೇಳೆ ಮೋದಿ ಮಾರಿಷಸ್‌ನಲ್ಲಿರುವ ಭಾರತೀಯ ಸಮುದಾಯದವರು ಹಾಗೂ ಮಾರಿಷಸ್ ನಾಯಕರ ಜೊತೆಗೆ ಸಭೆ ನಡೆಸಿದ್ದರು. ಅಲ್ಲಿನ ಗಂಗಾ ತಲಾವ್‌ಗೆ ಭೇಟಿ ನೀಡಿ, ಮಹಾಕುಂಭದಿಂದ ತೆಗೆದುಕೊಂಡು ಹೋಗಿದ್ದ ಪವಿತ್ರ ಗಂಗಾ ಜಲವನ್ನು ಅದಕ್ಕೆ ಮಿಶ್ರಣ ಮಾಡಿದ್ದರು.

ಮಾರಿಷಸ್‌ನ ಗಂಗಾ ತಲಾವೊನಲ್ಲಿ ತ್ರಿವೇಣಿ ಸಂಗಮದ ಪವಿತ್ರ ಜಲವನ್ನು ಅರ್ಪಿಸಿದೆ. ಜಗತ್ತಿನಲ್ಲಿರುವ ಲಕ್ಷಾಂತರ ಹಿಂದುಗಳಿಗೆ ತ್ರಿವೇಣಿ ಸಂಗಮದ ಜಲ ವಿಶೇಷವಾಗಿದೆ. ಈ ಬಾರಿಯ ಮಹಾ ಕುಂಭಮೇಳ ಮಾರಿಷಸ್ ಸೇರಿದಂತೆ ಜಗತ್ತಿನ ಎಲ್ಲೆಡೆಯ ಯಾತ್ರಿಕರನ್ನು ಸೆಳೆದಿದೆ. ಈ ನೀರನ್ನು ಸೇರಿಸುವ ಮೂಲಕ ಗಂಗಾ, ಯಮುನಾ ಮತ್ತು ಸರಸ್ವತಿಯ ಆಶೀರ್ವಾದ ನಿಮ್ಮ ಮೇಲೆ ಸದಾ ಉಳಿಯಲಿ ಎಂದು ಮೋದಿ ಆಶಿಸಿದ್ದಾರೆ.

### ಭಾರತಕ್ಕೆ ಚಿಕ್ಕರಾಷ್ಟ್ರ ಮಾರಿಷಸ್ ಮುಖ್ಯ?

ಇನ್ನೂ ಹಿಂದೂ ಮಹಾಸಾಗರದಲ್ಲಿ ಮಾರಿಷಸ್ ಸಣ್ಣ ರಾಷ್ಟ್ರವಾಗಿದ್ದರು ಕೂಡ ಅದು ಭಾರತಕ್ಕೆ ಭಾರೀ ಮಹತ್ವದ್ದಾಗಿದೆ. ಸಾಗರದ ವಾಣಿಜ್ಯ ಮಾರ್ಗದಲ್ಲಿ ಚೀನಾ ಪ್ರಾಬಲ್ಯ ತಗ್ಗಿಸಲು ಭಾರತಕ್ಕೆ ಮಾರಿಷಸ್ ಅತ್ಯಗತ್ಯ. ಚೀನಾ ಈಗಾಗಲೇ ಪಾಕ್‌ನ ಗ್ವಾದರ್, ಶ್ರೀಲಂಕಾದ ಹಂಬಂಟೋಟಾದಿಂದ ಆಫ್ರಿಕಾದ ದೇಶಗಳವರೆಗೆ ಬಂದರು ಸ್ಥಾಪಿಸಿದೆ. ಇದಕ್ಕೆ ಪ್ರತಿಯಾಗಿ ಭಾರತ 2015ರಿಂದ 'ಸಾಗರ್' ಯೋಜನೆ ಕೈಗೊಂಡಿದೆ. ಇದರಡಿಯಲ್ಲಿ ಮಾರಿಷಸ್ ತನ್ನ ಅಗಾಲೇಗಾ ಪ್ರದೇಶವನ್ನು ಭಾರತಕ್ಕೆ ಬಿಟ್ಟುಕೊಟ್ಟಿದೆ. ಇಲ್ಲಿ ಭಾರತೀಯ ಸೇನೆ ನೌಕಾ, ವಾಯುನೆಲೆ ಸ್ಥಾಪಿಸಿದೆ. ಹಿಂದೂ ಮಹಾಸಾಗರದಲ್ಲಿ ಚೀನಾದ ಮಿಲಿಟರಿ ಹಡಗುಗಳು ಮತ್ತು ಜಲಾಂತರ್ಗಾಮಿ ನೌಕೆಗಳ ಮೇಲೆ ಜಂಟಿಯಾಗಿ ಕಣ್ಣಿಡಲು ಇದರಿಂದ ಸಾಧ್ಯ. ಈಗ ಅದನ್ನು ಮಹಾಸಾಗರ್ ಎಂದು ಮೋದಿ ಅಪ್‌ಡೇಟ್ ಮಾಡಿದ್ದಾರೆ.

## ಏ.1ರಿಂದ ಟಿಡಿಎಸ್ ನಿಯಮಗಳಲ್ಲಿ ಭಾರಿ ಬದಲಾವಣೆ

- **ಉದಯವಾಹಿನಿ, ಬೆಂಗಳೂರು**

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2025ರ ಕೇಂದ್ರ ಬಜೆಟ್‌ನಲ್ಲಿ ಟಿಡಿಎಸ್ (ಮೂಲದಲ್ಲಿ ತೆರಿಗೆ ಕಡಿತ) ನಿಯಮಗಳಲ್ಲಿ ಮಹತ್ವದ ಬದಲಾವಣೆಗಳನ್ನು ಘೋಷಿಸಿದ್ದರು. ಹೊಸ ನಿಯಮಗಳು ಇದೇ ಏಪ್ರಿಲ್ 1, 2025ರಿಂದ ಜಾರಿಗೆ ಬರಲಿವೆ. ಬಜೆಟ್ ಘೋಷಣೆಗಳು ಹಿರಿಯ ನಾಗರಿಕರು, ಹೂಡಿಕೆದಾರರು ಮತ್ತು ಕಮಿಷನ್ ಗಳಿಸುವವರು ಸೇರಿದಂತೆ ವಿವಿಧ ತೆರಿಗೆದಾರರ ವರ್ಗಗಳಿಗೆ ಲಾಭ ನೀಡಲಿದೆ. ಇದರ ಜೊತೆಗೆ ಲಾಟರಿ, ಜೂಜು ಗೆಲುವುಗಳು, ವಿಮಾ ಕಮಿಷನ್‌ಗಳು ಮತ್ತು ಹೂಡಿಕೆ ಆದಾಯದ ಮೇಲಿನ ಟಿಡಿಎಸ್ ನಿಯಮಗಳನ್ನು ಸರಳಗೊಳಿಸಲಾಗಿದೆ. ಬಜೆಟ್‌ನಲ್ಲಿ ಘೋಷಿಸಿದ ಬದಲಾವಣೆಗಳು ಮಧ್ಯಮ ವರ್ಗ ಮತ್ತು ಹಿರಿಯ ನಾಗರಿಕರಿಗೆ ಹೆಚ್ಚಿನ ಆದಾಯವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಹಿರಿಯ ನಾಗರಿಕರಿಗೆ ಟಿಡಿಎಸ್ ಮಿತಿಯನ್ನು ಹೆಚ್ಚಿಸಲಾಗಿದ್ದು, ನಿಶ್ಚಿತ ಠೇವಣಿ (ಎಫ್‌ಡಿ)ಗಳು, ಆರ್‌ಡಿಗಳು ಮತ್ತು ಇಂತಹುದೇ ಮೂಲದಿಂದ ಬರುವ ಬಡ್ಡಿ ಆದಾಯದ ಒಟ್ಟು ಮೊತ್ತವು ಹಣಕಾಸು ವರ್ಷದಲ್ಲಿ 1 ಲಕ್ಷ ರೂ. ಅನ್ನು ಮೀರಿದಾಗ ಮಾತ್ರ, ಟಿಡಿಎಸ್ ಕಡಿತವು ಅನ್ವಯವಾಗುತ್ತದೆ. 1 ಲಕ್ಷ ರೂ.ಗಿಂತ ಕಡಿಮೆ ಬಡ್ಡಿ ಆದಾಯವನ್ನು ಹೊಂದಿರುವ ಹಿರಿಯ ನಾಗರಿಕರಿಗೆ ಬ್ಯಾಂಕ್ ಟಿಡಿಎಸ್ ಕಡಿತಗಳಿಂದ ವಿನಾಯಿತಿ ನೀಡಲಾಗಿದೆ. ಇದರಿಂದ ಹಿರಿಯ ನಾಗರಿಕರಿಗೆ ಹೆಚ್ಚಿನ ಹಣ ಉಳಿತಾಯವಾಗಲಿದೆ.

## ಕಸಕ್ಕೂ ಹೊಸ ತೆರಿಗೆ: ಮತ್ತೊಂದು ಬೆಲೆ ಏರಿಕೆಯ ಬರಸಿಡಿಲು

- **ಉದಯವಾಹಿನಿ, ಬೆಂಗಳೂರು**

ಸರ್ಕಾರ ಜನಸಾಮಾನ್ಯರಿಗೆ ಮತ್ತೊಂದು ಬೆಲೆ ಏರಿಕೆ ಶಾಕ್ ನೀಡಲಿದೆ. ಬೆಂಗಳೂರಿನಲ್ಲಿ ಏಪ್ರಿಲ್ 1 ರಿಂದ ಆಸ್ತಿ ತೆರಿಗೆ ಹೆಚ್ಚಾಗುವ ಸಾಧ್ಯತೆ ಇದೆ. ಪ್ರತಿ ಮನೆಯಿಂದ ಸಂಗ್ರಹಿಸುವ ಕಸಕ್ಕೂ ಶುಲ್ಕ ವಸೂಲಿಗೆ ಸರಕಾರ ಅನುಮೋದನೆ ನೀಡಿದೆ. ಈ ಕಸ ಉತ್ಪತ್ತಿ ಮಾಡುವ ಬಳಕೆದಾರ ಶುಲ್ಕವನ್ನು ಆಸ್ತಿ ತೆರಿಗೆ ಜೊತೆಗೆ ಸೇರಿಸುವುದರಿಂದ ಜನರಿಗೆ ಮತ್ತಷ್ಟು ಹೊರೆಯಾಗಲಿದೆ. ಈಗಾಗಲೇ ಜನರ ತಿಂಗಳ ಖರ್ಚುಗಳು ಕೈಮೀರಿ ಹೋಗಿವೆ, ಒಂದೆಡೆ ನಮ್ಮ ಮೆಟ್ರೋ ದರವನ್ನು ಶೇ.45 ರಿಂದ 50 ರಷ್ಟು ಹೆಚ್ಚಿಸಿ ಭಾರೀ ವಿರೋಧ ವ್ಯಕ್ತವಾದ ಒಂದು ತಿಂಗಳ ನಂತರ ಮತ್ತೆ ಈ ಬೆಳವಣಿಗೆ ನಡೆದಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಕಳೆದ ವರ್ಷ ನವೆಂಬರ್‌ನಲ್ಲಿ ಬಳಕೆದಾರ ಶುಲ್ಕ ವಿಧಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಆದರೆ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದ್ದು, ಇನ್ನೂ ಅಧಿಕೃತ ಆದೇಶ ಹೊರಡಿಸಿಲ್ಲ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ನಗರಾಭಿವೃದ್ಧಿ ಇಲಾಖೆ ಬಳಕೆದಾರ ಶುಲ್ಕ ವಿಧಿಸಲು ಸಮ್ಮತಿಸಿದೆ. ಘನತ್ಯಾಜ್ಯ ನಿರ್ವಹಣೆ ಕಂಪನಿಯು, ನಗರದ ಪ್ರತೀ ಮನೆ ಬಾಗಿಲಿಗೆ ಬಂದು ತ್ಯಾಜ್ಯ ಸಂಗ್ರಹಿಸುವುದು ಮತ್ತು ವಿಲೇವಾರಿ ಮಾಡುವುದರಿಂದ ಈ ಶುಲ್ಕ ವಿಧಿಸಲಾಗುತ್ತಿದೆ.

## ಪಟ್ಟಿ ಕೊಡಿ, ಕೆಲಸ ಮಾಡದಿದ್ದರೆ ವೋಟೇ ಹಾಕಬೇಡಿ

- **ಉದಯವಾಹಿನಿ, ರಾಮನಗರ**

ರಾಜಕಾರಣದಲ್ಲಿ ಎದುರಾಳಿ ವಿರುದ್ಧ ನೇರವಾಗಿ ಫೈಟ್ ಮಾಡಿಕೊಂಡು ಬಂದವನು ನಾನು. ಸಾಮಾಜಿಕ ಜಾಲತಾಣದಲ್ಲಿ ಇಲ್ಲ ಸಲ್ಲದ ಟೀಕೆಗಳನ್ನು ಮಾಡುವವರು ನೇರವಾಗಿ ಚರ್ಚೆಗೆ ಬನ್ನಿ. ಹೀಗೆಂದು ಶಾಸಕ ಎಚ್.ಸಿ. ಬಾಲಕೃಷ್ಣ ತಮ್ಮ ವಿರೋಧಿಗಳ ವಿರುದ್ಧ ಗುಡುಗಿದರು.

ಕೂಟಗಲ್ ಹೋಬಳಿ ಶ್ಯಾನುಭೋಗನಹಳ್ಳಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಕಳೆದ 25-30 ವರ್ಷಗಳ ರಾಜಕೀಯ ಜೀವನದಲ್ಲಿ ಸವಾಲುಗಳನ್ನು ಎದುರಿಸಿಯೇ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ. ವಾಟ್ಸ್ ಆಪ್ ಫೇಸ್‌ಬುಕ್‌ಗಳಲ್ಲಿ ಟೀಕೆ ಮಾಡುವವರು ಧೈರ್ಯವಿದ್ದರೇ ಎದುರಿಗೆ ಬಂದು ಯಾವ ಕೆಲಸವಾಗಬೇಕೆಂದು ಪಟ್ಟಿಕೊಡಿ. ಕೆಲಸ ಮಾಡದಿದ್ದರೇ ವೋಟು ಹಾಕಬೇಡಿ ಎಂದು ಪಂಥಾಹ್ವಾನ ನೀಡಿದರು.



ಜೆಡಿಎಸ್ ಸ್ವಂತ ಬಲದಿಂದ ಅಧಿಕಾರಕ್ಕೆ ಬರುವುದಿಲ್ಲ. ಕ್ಷೇತ್ರ ಅಭಿವೃದ್ಧಿಯಾಗುವುದಿಲ್ಲ. ಜನರಿಂದ ನಿಂದನೆ ತಪ್ಪುವುದಿಲ್ಲವೆಂದು ಖಾತರಿಯಾಗಿ ಕಾಂಗ್ರೆಸ್ ಸೇರಿ ಶಾಸಕನಾಗಿದ್ದೇನೆ. ಇದೀಗ ಪಕ್ಷ ಅಧಿಕಾರದಲ್ಲಿದ್ದು, ನನಗೆ ಶಕ್ತಿ ಬಂದಿದೆ. ನಮ್ಮ ಜಿಲ್ಲೆಯ ಮಗ ಡಿ.ಕೆ. ಶಿವಕುಮಾರ್ ಸರಕಾರದಲ್ಲಿ ಉಪಮುಖ್ಯಮಂತ್ರಿ ಆಗಿದ್ದಾರೆ. ನಾನು ಏನು ಕೇಳಿದರೂ ಅವರು ಇಲ್ಲ ಎನ್ನುವುದಿಲ್ಲ ಎಂದರು. ಈ ಭಾಗದ ಕೆಲವು ಜ್ವಲಂತ ಸಮಸ್ಯೆಗಳಿಗೆ ಮಾರ್ಗೋಪಾಯ ಕಂಡು ಹಿಡಿದಿದ್ದು, ವೈ.ಜಿ. ಗುಡ್ಡ ಜಲಾಶಯದಿಂದ ಕೂಟಗಲ್ ಹೋಬಳಿಯ ಕೆರೆಗಳಿಗೆ ನೀರು ತುಂಬಿಸುವ ಜತೆಗೆ ಕಣ್ವ ನದಿಯಲ್ಲಿ ನೀರು ಹರಿಸುವ ಮಹತ್ತರ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು. ಸತ್ತೇಗಾಲದಿಂದ ವೈ.ಜಿ. ಗುಡ್ಡ ಜಲಾಶಯಕ್ಕೆ ಪೈಪ್‌ಲೈನ್ ಮುಖಾಂತರ ನೀರು ಹರಿದು ಹೋಗುತ್ತಿದೆ. ಎಲ್ಲೆಲ್ಲಿ ವೆಂಟ್ ಪಾಯಿಂಟ್ ಮಾಡಬೇಕು, ಯಾವ ರೀತಿ ನೀರು ತರಬೇಕೆಂದು ಆಲೋಚನೆ ಮಾಡುತ್ತಿರುವುದಾಗಿ ತಿಳಿಸಿದರು. ಕಣ್ವ ಹೊಳೆಯಲ್ಲಿ ಹರಿಯುವ ನೀರಿಗೆ ಅಲ್ಲಲ್ಲಿ ಚೆಕ್ ಡ್ಯಾಂಗಳನ್ನು ನಿರ್ಮಿಸಿ ಕೂಟಗಲ್, ಶ್ಯಾನುಭೋಗನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಅನುಕೂಲ ಕಲ್ಪಿಸಲಾಗುವುದು ಎಂದರು.

**ಪಂಥಾಹ್ವಾನ ನೀಡಿದ ಕಾಂಗ್ರೆಸ್ ಶಾಸಕ**

> ಮುಂದಿನ ಚುನಾವಣೆ ವೇಳೆಗೆ ಕೂಟಗಲ್ ಹೋಬಳಿ ಮಾಗಡಿ ಕ್ಷೇತ್ರದಿಂದ ಬೇರ್ಪಡಲಿದೆ. ಹಾಗಾಗಿ ಬಾಲಕೃಷ್ಣರವರು ನಮ್ಮ ಭಾಗದ ಅಭಿವೃದ್ಧಿಗೆ ಹೆಚ್ಚು ಗಮನಹರಿಸುತ್ತಿಲ್ಲ ಎಂಬ ವದಂತಿಗಳು ಹರಿದಾಡುತ್ತಿವೆ. ಅದಕ್ಕೆಲ್ಲಾ ಯಾರೂ ಕಿವಿಗೊಡಬಾರದು. ಅಭಿವೃದ್ಧಿಯಿಂದ ನಾನು ಹಿಂದೆ ಸರಿಯುವುದಿಲ್ಲ. ಈ ಬಾಲಕೃಷ್ಣ ನಿಮ್ಮನ್ನು ಬಿಟ್ಟು ಎಲ್ಲೂ ಹೋಗುವುದಿಲ್ಲ.
>
> -ಎಚ್.ಸಿ. ಬಾಲಕೃಷ್ಣ ಶಾಸಕ

## ಬಿಸಿಬಿಸಿ ಚರ್ಚೆ ನಡುವೆ ಎಸ್‌ಟಿಎಸ್, ಹೆಬ್ಬಾರ್ ಪರ್ಸನಲ್ ಟಾಕ್!

■ ಬಿಜೆಪಿಯಲ್ಲಿದ್ದುಕೊಂಡೇ ಪಕ್ಷದ ವಿರುದ್ಧ ಮಾತನಾಡುತ್ತಿರುವ ಎಸ್‌ಟಿಎಸ್ ಕಾಂಗ್ರೆಸ್‌ನತ್ತ ಕಾಲಿಡುವುದು ಬಹುತೇಕ ಖಚಿತ

- **ಉದಯವಾಹಿನಿ, ಬೆಂಗಳೂರು**

ಬಿಜೆಪಿ ಶಾಸಕರಾದ ಎಸ್ ಟಿ ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಅವರ ಮುಂದಿನ ನಡೆ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಬಿಜೆಪಿಯಲ್ಲಿದ್ದುಕೊಂಡೇ ಪಕ್ಷದ ವಿರುದ್ಧ ಮಾತನಾಡುತ್ತಿರುವ ಎಸ್‌ಟಿಎಸ್ ಕಾಂಗ್ರೆಸ್‌ನತ್ತ ಕಾಲಿಡುವುದು ಬಹುತೇಕ ಖಚಿತವಾಗಿದೆ. ಈ ನಡುವೆ ಬಿಜೆಪಿಯ ವಿರುದ್ಧವೇ ಒಂದಲ್ಲಾ ಒಂದು ರೀತಿಯಲ್ಲಿ ಅವರು ಮಾತನಾಡುತ್ತಿದ್ದು, ಸರ್ಕಾರವನ್ನು ಸದನದ ಒಳಗೂ, ಹೊರಗೂ ಸಮರ್ಥನೆ ಮಾಡುತ್ತಿದ್ದಾರೆ.

ಈ ನಡುವೆ ಗುರುವಾರ ವಿಧಾನಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಯ ಸಂದರ್ಭದಲ್ಲಿ ಎಸ್‌ಟಿ ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಗುಸು ಗುಸು ಮಾತುಕತೆ ಗಮನ ಸೆಳೆಯುವಂತಿತ್ತು. ವಿಧಾನಸಭೆಯಲ್ಲಿ ಕರಾವಳಿಯ ಬಗ್ಗೆ ನಿಯಮ 69 ಅಡಿಯಲ್ಲಿ ಸುನೀಲ್ ಕುಮಾರ್ ಮಾತನಾಡುತ್ತಿದ್ದರು. ಈ ವೇಳೆ ಎಸ್‌ಟಿ ಸೋಮಶೇಖರ್ ಪಕ್ಕದಲ್ಲಿ ಬಂದು ಕುಳಿತ ಶಿವರಾಂ ಹೆಬ್ಬಾರ್ ಕೆಲ ಹೊತ್ತು ಗುಸು ಗುಸು ಮಾತುಕತೆ ನಡೆಸಿದರು.



**ಗಮನ ಸೆಳೆದ ಗುಸು ಗುಸು ಮಾತುಕತೆ**

ಎಸ್ ಟಿ ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಬಿಜೆಪಿಯಲ್ಲಿ ಈಗಲೂ ತಾಂತ್ರಿಕವಾಗಿ ಶಾಸಕರಾಗಿದ್ದಾರೆ. ಆದರೆ ಪಕ್ಷದ ಯಾವುದೇ ಚಟುವಟಿಕೆಗಳಲ್ಲಿ ಅವರು ಭಾಗಿಯಾಗುತ್ತಿಲ್ಲ. ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲೂ ಅವರು ಕಾಣಿಸಿಕೊಳ್ಳುತ್ತಿಲ್ಲ. ಇದರ ಬದಲಾಗಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ನಿವಾಸಕ್ಕೆ ಕೆಲವೊಮ್ಮೆ ತೆರಳಿ ಮಾತುಕತೆ ನಡೆಸುವ ಮೂಲಕ ಗಮನ ಸೆಳೆಯುತ್ತಿದ್ದಾರೆ.

### ಶೀಘ್ರದಲ್ಲೇ ಶಿಸ್ತು ಕ್ರಮ?

ಎಸ್‌ಟಿ ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ವಿರುದ್ಧ ಶೀಘ್ರದಲ್ಲೇ ಬಿಜೆಪಿ ಹೈಕಮಾಂಡ್ ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ಬಿಜೆಪಿ ರಾಜ್ಯ ನಾಯಕರು ಹೈಕಮಾಂಡ್ ಸೂಚನೆಗೆ ಕಾಯುತ್ತಿದ್ದು, ಹೈಕಮಾಂಡ್ ಕ್ರಮ ಕೈಗೊಳ್ಳುವ ಸೂಚನೆ ನೀಡಿದ್ದಲ್ಲಿ ಶಿಸ್ತು ಕ್ರಮ ಜರಗಿಸುವ ಸಾಧ್ಯತೆ ಇದೆ. ಹೀಗಾದಲ್ಲಿ ಎಸ್‌ಟಿಎಸ್ ಹಾಗೂ ಹೆಬ್ಬಾರ್ ಅಧಿಕೃತವಾಗಿ ತಮ್ಮ ಮುಂದಿನ ಹೆಜ್ಜೆಯನ್ನು ಇಡಲಿದ್ದಾರೆ.


**ರನ್ಯಾ ರಾವ್ ಪ್ರಕರಣದಲ್ಲೂ ಬಿಜೆಪಿ ವಿರುದ್ಧ ಮಾತನಾಡಿದ್ದ ಎಸ್‌ಟಿಎಸ್!**

ಇನ್ನು ರನ್ಯಾ ರಾವ್ ಪ್ರಕರಣದಲ್ಲಿ ಎಸ್‌ಟಿ ಸೋಮಶೇಖರ್ ಬಿಜೆಪಿಯ ವಿರುದ್ಧನೇ ಮಾತನಾಡಿದ್ದರು. ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರ ಪಾತ್ರದ ಬಗ್ಗೆ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ್ದ ಸೋಮಶೇಖರ್ ಬಿಜೆಪಿ ನಾಯಕರೇ ಇರಬಹುದು ಎಂದು ತಿರುಗೇಟು ನೀಡಿದ್ದರು.

ಇದೇ ವಿಚಾರವಾಗಿ ಮಾತನಾಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ''ಅವರು ಏಕೆ ಈ ರೀತಿಯಲ್ಲಿ ಮಾತನಾಡಿದ್ದಾರೆ ಎಂಬುದು ಗೊತ್ತಿದೆ. ಸೋಮಶೇಖರ್ ಬಗ್ಗೆ ಬಿಜೆಪಿ ಹೈಕಮಾಂಡ್‌ಗೆ ಎಲ್ಲಾ ಮಾಹಿತಿಯನ್ನು ನೀಡಿದ್ದೇವೆ. ಅವರ ನಿರ್ಧಾರಕ್ಕೆ ಕಾಯುತ್ತಿದ್ದೇವೆ ಎಂದಿದ್ದರು.

## ಒಂದು ಕಡೆ ಗ್ಯಾರಂಟಿ ವಿರೋಧ ಇನ್ನೊಂದು ಕಡೆ ಕೊಡುವುದು

- **ಉದಯವಾಹಿನಿ, ಬೆಂಗಳೂರು**



ಕಾಂಗ್ರೆಸ್ ಸರ್ಕಾರದ ಕೈಯಲ್ಲಿ ಗ್ಯಾರಂಟಿಗಳನ್ನು ಜಾರಿ ಮಾಡಲು ಆಗುವುದಿಲ್ಲ ಎಂದು ವಿಪಕ್ಷಗಳು ಹೇಳಿದವು. ಪ್ರಧಾನಿಗಳು ಸಹ ಕರ್ನಾಟಕ ಸರ್ಕಾರ ದಿವಾಳಿಯಾಗುತ್ತದೆ ಎಂದರು. ಆದರೆ ಈಗ ಬಿಜೆಪಿ ಆಡಳಿತವಿರುವ ರಾಜ್ಯಗಳೇ ಗ್ಯಾರಂಟಿ ನೀಡುತ್ತಿವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್, ವಿಪಕ್ಷಗಳ ಕಾಲೆಳೆದರು.

ನಮ್ಮ ರಾಜ್ಯದಲ್ಲಿ ಗ್ಯಾರಂಟಿ ಜಾರಿಯಾದ ಮೇಲೆ ಮಧ್ಯಪ್ರದೇಶ, ಮಹಾರಾಷ್ಟ್ರ, ದೆಹಲಿಯಲ್ಲಿಯೂ ಗ್ಯಾರಂಟಿಗಳನ್ನು ನೀಡಲಾಯಿತು. ನಮ್ಮ ಯಾವ ಮಧ್ಯವರ್ತಿಗಳೂ ಇಲ್ಲದೇ ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ಹಾಕುತ್ತಿದೆ ಎಂದು ಹೇಳಿದರು. ಬ್ಯಾಂಕ್ ನಿಂದ ಫಲಾನುಭವಿಗಳ ಖಾತೆಗೆ ಹಣ ಸರಿಯಾಗಿ ಹೋಗುತ್ತಿದೆಯೇ ಎಂದು ಪರಿಶೀಲಿಸಲು ಎಂದು ಒಂದಷ್ಟು ಏಜೆನ್ಸಿಗಳಿಗೆ ಜವಾಬ್ದಾರಿಗಳನ್ನು ನೀಡಲಾಯಿತು. ಜನರಿಗೆ ಸರಿಯಾಗಿ ಹಣ ತಲುಪಿದೆಯೇ ಇಲ್ಲವೇ ಎಂದು ತಿಳಿಯಲು ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಮಾಹಿತಿ ಪಡೆದುಕೊಳ್ಳಿ ಎಂದು ಅವರಿಗೆ ಜವಾಬ್ದಾರಿ ನೀಡಲಾಗಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,858/Gram24ct ₹8,120/Gram22ct | ಬೆಳ್ಳಿ: ₹101.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

# ಪೂಜಯೇದಶನಂ ನಿತ್ಯಂ

ಮನುಸ್ಮೃತಿಯ ಎರಡನೇ ಅಧ್ಯಾಯದ ಮಾತು. ಆಹಾರದ ವಿವರಣೆ. ಆಹಾರವನ್ನು ಪೂಜಿಸಬೇಕು, ದೇವರಿಗೆ ನೈವೇದ್ಯ ಬಡಬಗ್ಗರು ವಿದ್ಯಾರ್ಥಿ ಗುರು ಹಿರಿಯರಿಗೆ ಅನ್ನದಾನ ಮಾಡುತ್ತಾ ಆಹಾರವನ್ನು ಪ್ರಸಾದವೆಂದು ತಿಳಿದು ಸ್ವೀಕರಿಸಬೇಕು. ಪವಿತ್ರ ಭಾವನೆಯಿಂದ ಸ್ವೀಕರಿಸಿದ ಆಹಾರ ನಮ್ಮಲ್ಲಿ ಪವಿತ್ರ ಭಾವಗಳನ್ನು ಬೆಳೆಸುತ್ತದೆ. ಪೂಜಿಸಿದ ಪೂಜ್ಯಭಾವನೆಯಿಂದ ಸ್ವೀಕರಿಸುವ ಆಹಾರ ಸಾಮರ್ಥ್ಯವನ್ನು ವೀರ್ಯವನ್ನು ಹೆಚ್ಚಿಸುವುದು. ಹೊಟ್ಟೆ ತುಂಬಿಸಲು ನಾಲಿಗೆ ತಣಿಸಲು ತಿನ್ನುವ ಆಹಾರ = ಕೂಳು ಈ ಎರಡನ್ನೂ ನಾಶಪಡಿಸುವುದು. ಸಿದ್ಧಾರೂಢರು ದೇಶ ಸಂಚಾರದಲ್ಲಿದ್ದಾಗ ಓರಿಸ್ಸಾದ ವಿಜಯನಗರ ದುರ್ಗದಲ್ಲಿ ಭೈರಾಗಿಗಳೊಂದಿಗಿದ್ದಾಗ ಅವರಿಗೆ ಅನ್ನದ ಮಹತ್ತ್ವವನ್ನು ತಿಳಿಸಿ ಭಗವಂತನ ನಾಮ ಸ್ಮರಣೆಯೊಂದಿಗೆ ಆಹಾರ ಸ್ವೀಕರಿಸುವುದರಿಂದ ಅನ್ನದಾತನಿಗೂ ಅನ್ನ ಉಣ್ಣುವವನಿಗೂ ಶ್ರೇಯಸ್ಸು ಎಂದು ಹೇಳಿರುವುದು ಇದಕ್ಕೆ ಪೂರಕ. ಎಂಜಲನ್ನು ಸ್ವೀಕರಿಸಬಾರದು ಕೊಡಬಾರದು. ವೈಜ್ಞಾನಿಕ ಕಾರಣಗಳನ್ನು ಇಲ್ಲಿ ಮನಗಾಣಬೇಕು. ಆದರೆ ಗುರುವು ಶಿಷ್ಯನಿಗೆ ಕೊಡುವ ಎಂಜಲು ಪ್ರಸಾದ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ದೇಹಾಭಿಮಾನ ತೊರೆಯಲು ಇದೂ ಒಂದು ಸಾಧನ. ಬ್ರಾಹ್ಮಣೇ ಗವಿ ಹಸ್ತಿನಿ ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ = ಬ್ರಾಹ್ಮಣ ಹಸು ನಾಯಿ ನಾಯಿಮಾಂಸದಲ್ಲಿಯೂ ತಿಳಿದವನು ಸಮಭಾವದಿಂದ ಇರುವನು ಎನ್ನುವುದು ಭಗವದ್ಗೀತೆ

# ಬೆಂಗಳೂರಿನ ಈ ಭಾಗದಲ್ಲಿ ಸಂಚಾರ ಸಮಯ 60 ನಿಮಿಷದಿಂದ 10 ನಿಮಿಷಕ್ಕೆ ಇಳಿಕೆ!

• ಉದಯವಾಹಿನಿ, ಬೆಂಗಳೂರು

ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲಕ ಹಾದು ಹೋಗುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಟೋಲ್ -ಫ್ರೀ ಮೇಜರ್ ಆರ್ಟೀರಿಯಲ್ ರಸ್ತೆ ಶೀಘ್ರವೇ ಪೂರ್ಣಗೊಳ್ಳಲಿದ್ದು, ಈ ಪ್ರದೇಶದಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಟ್ರಾಫಿಕ್ ಕಿರಿಕಿರಿಯಿಂದ ದೊಡ್ಡ ಪರಿಹಾರ ಸಿಗಲಿದೆ.

ಇದು ದಕ್ಷಿಣ ಮತ್ತು ಪಶ್ಚಿಮ ಬೆಂಗಳೂರಿನ ನಡುವಿನ ಪ್ರಯಾಣದ ಸಮಯವನ್ನು 60 ನಿಮಿಷಗಳಿಂದ ಕೇವಲ 10 ನಿಮಿಷಗಳಿಗೆ ಇಳಿಸುತ್ತದೆ. ಈ ಯೋಜನೆಯ ಭಾಗವಾಗಿ ಸುಳಿಕೆರೆ ಕಾಡಿನ ಮೂಲಕ ರಸ್ತೆ ಹಾದುಹೋಗುವುದಕ್ಕೆ ಅರಣ್ಯ ಇಲಾಖೆ ಅನುಮತಿ ನೀಡಲು ಒಪ್ಪಿಕೊಂಡಿದೆ. 100 ಮೀಟರ್ ಅಗಲದ ಈ ದಶಪಥ ರಸ್ತೆ ಮೈಸೂರು ರಸ್ತೆಯನ್ನು ಮಾಗಡಿ ರಸ್ತೆಯೊಂದಿಗೆ ಸಂಪರ್ಕಿಸುತ್ತದೆ. ಇದು ಪ್ರತಿ ದಿಕ್ಕಿನಲ್ಲಿ ಮೂರು ಪಥಗಳು ಮತ್ತು ನಾಲ್ಕು ಸರ್ವಿಸ್ ರೋಡ್ ಗಳನ್ನು ಈ ರಸ್ತೆ ಹೊಂದಿರಲಿದ್ದು, ಪ್ರಸ್ತುತ ಸಿಗ್ನಲ್ ಮುಕ್ತವಾಗಿದೆ. ಆದರೆ ಭವಿಷ್ಯದಲ್ಲಿ ಸಿಗ್ನಲ್ ಗಳನ್ನು ಸ್ಥಾಪಿಸಲಾಗುತ್ತದೆ. ಉದ್ದೇಶಿತ 10.77 ಕಿಮೀ ಒಂಟಿ ರಸ್ತೆಯಲ್ಲಿ 10.3 ಕಿಮೀ ರಸ್ತೆಯನ್ನು ಈಗ ನಿರ್ಮಿಸಲಾಗುವುದು ಮತ್ತು ಉಳಿದದ್ದನ್ನು ಬೆಂಗಳೂರು ಮೆಟ್ರೋ ತನ್ನ ಚಲ್ಲಘಟ್ಟ ಡಿಪೋ ಬಳಿ ನಿರ್ಮಿಸಲಿದೆ ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಾವು 95% ರಸ್ತೆಯ ಕಾಮಗಾರಿಯನ್ನು ಪೂರ್ಣಗೊಳಿಸಿದ್ದೇವೆ. ಆದಾಗ್ಯೂ, ನಡುವೆ ಕೆಲವು ಕಾಮಗಾರಿ ಮತ್ತು 180 ಮೀಟರ್ ರಸ್ತೆಯನ್ನು ನಿರ್ಮಿಸಲು ಅರಣ್ಯ ಇಲಾಖೆಯಿಂದ ನಮಗೆ ಅಗತ್ಯವಿರುವ ಸಣ್ಣ ತುಂಡು ಭೂಮಿಯನ್ನು ತಡೆಹಿಡಿಯಲಾಗಿದೆ. ಇದು ಮೈಸೂರು ರಸ್ತೆಯ ತುದಿಯಿಂದ 4 ಕಿ.ಮೀ ದೂರದಲ್ಲಿದೆ. ಇದು ಹಸ್ತಾಂತರದ ಪ್ರಕ್ರಿಯೆಯಲ್ಲಿದೆ. ಅರಣ್ಯ ಇಲಾಖೆ ಈ ಹಿಂದೆ ತನ್ನ ಪ್ರದೇಶದ ಮೂಲಕ ರಸ್ತೆ ಹಾದುಹೋಗಲು ಅನುಮತಿ ನೀಡಲು ನಿರಾಕರಿಸಿತ್ತು ಎಂದು ಬಿಡಿಎ ಅಧಿಕಾರಿಯೊಬ್ಬರು ವಿವರಿಸಿದರು. ಬದಿಯಲ್ಲಿ 90 ಪ್ರತಿಶತ ಅರಣ್ಯವನ್ನು ಇನ್ನೊಂದು



ಬದಿಯಲ್ಲಿ ಹತ್ತು ಪ್ರತಿಶತ ಅರಣ್ಯವನ್ನು ವಿಭಜಿಸುತ್ತದೆ ಎಂದು ಹೇಳಿದರು. ಅರಣ್ಯ ಇಲಾಖೆ ಒಪ್ಪಿಗೆಯಲ್ಲಿನ ವಿಳಂಬ ನಮ್ಮ ರಸ್ತೆಯನ್ನು ಪೂರ್ಣಗೊಳಿಸುವುದನ್ನು ಬಹಳ ಸಮಯದಿಂದ ತಡೆಹಿಡಿಯಿತು. ನಾವು ಈಗ ಪಿಡಬ್ಲ್ಯೂಡಿ ಬಹಳ ಹಿಂದೆಯೇ ನಿರ್ಮಿಸಿದ ಭೂಮಿಯನ್ನು ಗುರುತಿಸಿದ್ದೇವೆ, ಅದು 90% ಭಾಗ ಇರುವ ಭಾಗದಲ್ಲಿದೆ. ನಮ್ಮ ರಸ್ತೆಯನ್ನು ಅಸ್ತಿತ್ವದಲ್ಲಿರುವ ರಸ್ತೆಗೆ ಸಂಪರ್ಕಿಸುವ ರೀತಿಯಲ್ಲಿ ನಿರ್ಮಿಸುತ್ತೇವೆ. ನಾವು ನಮ್ಮ ಯೋಜನೆಯನ್ನು ಅರಣ್ಯ ಇಲಾಖೆಗೆ ವಿವರಿಸಿದ್ದೇವೆ ಮತ್ತು ಅವರು ಯೋಜನೆಗೆ ಒಪ್ಪಿಗೆ ಸೂಚಿಸಿದ್ದಾರೆ,'' ಎಂದು ಅವರು ಹೇಳಿದ್ದಾರೆ. ಈಗ ಅರಣ್ಯ ಇಲಾಖೆಗೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅರಣ್ಯ ಇಲಾಖೆಯಿಂದ ಲಿಖಿತ ಒಪ್ಪಿಗೆ ಸಿಕ್ಕ ತಕ್ಷಣ ರಸ್ತೆಯನ್ನು ಪೂರ್ಣಗೊಳಿಸಲು ನಾವು ಆಶಿಸುತ್ತೇವೆ ಎಂದು ಮತ್ತೊಬ್ಬ ಅಧಿಕಾರಿ ಹೇಳಿದರು.

# ಡಬಲ್ ಡೆಕ್ಕರ್ ಎಲಿವೇಟೆಡ್ ಕಾರಿಡಾರ್‌ಗಳ ಮೂಲಕ ಪರಿಹಾರ

## ಬೆಂಗಳೂರಿನ ಸಮಸ್ಯೆ, ಜನಸಂಖ್ಯೆ ದಟ್ಟಣೆ ವಿಚಾರವಾಗಿ ಸದಸ್ಯರಾದ ಸುಧಾಮ್ ದಾಸ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗಾಗಿ ರಾಜ್ಯ ಸರ್ಕಾರವು ಟನಲ್ ರಸ್ತೆ, ಡಬಲ್ ಡೆಕ್ಕರ್ ಮೇಲ್ಸೇತುವೆ, ಬಫರ್ ರೋಡ್, ಎಲಿವೇಟೆಡ್ ಕಾರಿಡಾರ್, ಬೆಂಗಳೂರು ಬಿಸಿನೆಸ್ ಕಾರಿಡಾರ್ ಸೇರಿದಂತೆ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

**320 ಕಿ.ಮೀ ಹೊಸ ರಸ್ತೆ ನಿರ್ಮಾಣ**

ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯರಾದ ಸುಧಾಮ್ ದಾಸ್ ಅವರು ಬೆಂಗಳೂರಿನ ಸಂಚಾರಿ ದಟ್ಟಣೆ ಸಮಸ್ಯೆ ನಿವಾರಣೆಗೆ ಕೈಗೊಂಡಿರುವ ಯೋಜನೆಗಳ ಬಗ್ಗೆ ಗುರುವಾರ ಪ್ರಶ್ನೆ ಕೇಳಿದರು. ಇದಕ್ಕೆ ಉತ್ತರ ನೀಡಿದ ಶಿವಕುಮಾರ್ ಅವರು, ''ಬೆಂಗಳೂರಿನ ಸಮಸ್ಯೆ, ಜನಸಂಖ್ಯೆ ದಟ್ಟಣೆ ವಿಚಾರವಾಗಿ ಸದಸ್ಯರಾದ ಸುಧಾಮ್ ದಾಸ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ನಾನು ಬಹಳ ಗಂಭೀರವಾಗಿ ಬೆಂಗಳೂರಿನ ಜವಾಬ್ದಾರಿ ವಹಿಸಿಕೊಂಡಿದ್ದೇನೆ. ಬೆಂಗಳೂರು ನವದೆಹಲಿ ರೀತಿ ಯೋಜಿತ ನಗರವಲ್ಲ. ಮಲ್ಲೇಶ್ವರ, ಜಯನಗರ, ಇಂದಿರಾನಗರದಂತಹ ಕೆಲವು ಬಡಾವಣೆಗಳು ಮಾತ್ರ ಯೋಜಿತವಾಗಿ ರೂಪುಗೊಂಡಿವೆ. ಈ ಹಿಂದೆ ಬಿಎಂಐಸಿಪಿ ರಸ್ತೆ ಆದ ಕಾರಣ ಸಂಚಾರ ದಟ್ಟಣೆ ಸ್ವಲ್ಪ ಮಟ್ಟಿಗೆ ನಿಯಂತ್ರಣವಾಗಿದೆ. ಇಲ್ಲದಿದ್ದರೆ ಪರಿಸ್ಥಿತಿ ಇನ್ನು ಹದಗೆಡುತ್ತಿತ್ತು. ಈಗ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪಿಆರ್ ಆರ್ ಯೋಜನೆ ಮಾಡಲು 2006ರಲ್ಲಿ ಅಧಿಸೂಚನೆ ಹೊರಡಿಸಿದ್ದರೂ ನಂತರ ಅದು ಮುಂದಕ್ಕೆ ಸಾಗಲಿಲ್ಲ. ಆಗಲೇ ಮಾಡಿದ್ದರೆ 2-3 ಸಾವಿರ ಕೋಟಿಯಲ್ಲಿ ಯೋಜನೆ ಪೂರ್ಣಗೊಳ್ಳುತ್ತಿತ್ತು ಎಂದರು. ಈಗ ಪಿಆರ್ ಆರ್ ಯೋಜನೆಗೆ ಹುಡ್ಕೋ ಮೂಲಕ 26 ಸಾವಿರ ಕೋಟಿ ಸಾಲ ಪಡೆದು ರೈತರನ್ನು ಒಪ್ಪಿಸಿ ಬೆಂಗಳೂರು ಬಿಸಿನೆಸ್ ಕಾರಿಡಾರ್ ಮಾಡಲು ಮುಂದಾಗಿದ್ದೇವೆ.

ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಸಲು ರಸ್ತೆ ಅಗಲೀಕರಣ ಮಾಡಬಹುದೆ, ಅಥವಾ ಬೇರೆ ಅವಕಾಶಗಳಿವೆಯೇ ಎಂದು ಆಲೋಚನೆ ಮಾಡಿದ್ದೇವೆ. ಈ ಹಿಂದೆ ಜಾರ್ಜ್ ಅವರು ಸಚಿವರಾಗಿದ್ದಾಗ ಸ್ಟೀಲ್ ಬ್ರಿಡ್ಜ್ ಮಾಡಲು ಹೋದಾಗ ಗಲಾಟೆ ಮಾಡಿ ಅದನ್ನು ನಿಲ್ಲಿಸಿದರು. ಈಗ ಅದರ ತೊಂದರೆ ಅನುಭವಿಸುತ್ತಿದ್ದೇವೆ.

ಇನ್ನು ಬೆಂಗಳೂರಿನಲ್ಲಿ ಹೊಸ ಪ್ರಯೋಗದ ಮೂಲಕ ಎಲ್ಲೆಲ್ಲಿ ಹೊಸ ಮೆಟ್ರೋ ಮಾರ್ಗಗಳು ಬರುತ್ತಿವೆಯೋ ಅಲ್ಲಿ 44.3 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಮೇಲ್ಸೆತುವೆ ಮೂಲಕ ಮೇಲ್ಸೆತುವೆ ಹಾಗೂ ಮೆಟ್ರೋ ಮಾರ್ಗ



ಈಗ ಈ ಸಮಸ್ಯೆಗೆ ಪರಿಹಾರವಾಗಿ ಬೆಂಗಳೂರು ನಗರದ ಪೂರ್ವದಿಂದ ಪಶ್ಚಿಮಕ್ಕೆ (17 ಕಿ.ಮೀ), ದಕ್ಷಿಣದಿಂದ ಉತ್ತರಕ್ಕೆ (23 ಕಿ.ಮೀ) 40 ಕಿ.ಮೀ ಉದ್ದದ ಸುರಂಗ ರಸ್ತೆ ಮಾಡಲು ಹೊರಟಿದ್ದೇವೆ. ಬೆಂಗಳೂರು ನಗರದಲ್ಲಿ ಇದು ಮೊದಲ ಪ್ರಯತ್ನವಾಗಿದೆ. ಇದರ ಮೊದಲ ಹಂತದ ಯೋಜನೆಗೆ ಶೀಘ್ರದಲ್ಲೇ ಟೆಂಡರ್ ಕರೆಯಲಾಗುತ್ತಿದೆ. ಅತಿಲೋಕ್ ಇಂಜಿನಿಯರಿಂಗ್ ಸಂಸ್ಥೆ ಡಿಪಿಆರ್ ಸಿದ್ಧಪಡಿಸಿದ್ದು, ಸರ್ಕಾರ ಅದಕ್ಕೆ ಅನುಮತಿ ನೀಡಿದೆ ಎಂದು ತಿಳಿಸಿದರು.

ಮಾಡಲಾಗುತ್ತಿದೆ. ಈ ಯೋಜನೆಗೆ ಪಾಲಿಕೆ ಹಾಗೂ ಬಿಎಂಆರ್ ಸಿಎಲ್ 50:50 ಅನುಪಾತದಲ್ಲಿ ವೆಚ್ಚ ಭರಿಸಲಿವೆ. ಪ್ರತಿ ಕಿ.ಮೀಗೆ ರೂ.120 ಕೋಟಿ ವೆಚ್ಚವಾಗಲಿದ್ದು, ಈ ಯೋಜನೆಗೆ ಒಟ್ಟು ರೂ.9 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಇನ್ನು ಸಿಗ್ನಲ್ ಮುಕ್ತ ಎಲಿವೇಟೆಡ್ ಕಾರಿಡಾರ್ ಮೂಲಕ ವಾಹನ ದಟ್ಟಣೆ ನಿಯಂತ್ರಣಕ್ಕೆ ಮುಂದಾಗಿದ್ದೇವೆ. ಗಾಳಿ ಆಂಜನೇಯ ಸ್ವಾಮಿ ದೇವಾಲಯದ ಬಳಿ ಕಾಜಕಾಲುವೆ ಮೇಲೆ ರಸ್ತೆ ಮಾಡಿರುವ ರೀತಿ ರಸ್ತೆ ಮಾಡಲು ಎನ್

ಇದಕ್ಕಾಗಿ 3 ಸಾವಿರ ಕೋಟಿ ಅನುದಾನ ಮೀಸಲಿಡಲಾಗಿದೆ. ಐಟಿಪಿಎಲ್, ಥಣಿಸಂಧ್ರ, ಆರ್‌ಆರ್ ನಗರ ಸೇರಿದಂತೆ ಇತರೆ ಭಾಗಗಳಲ್ಲಿ ಟಿಡಿಆರ್ ನೀಡಿ ರಸ್ತೆ ನಿರ್ಮಾಣ ಮಾಡಲಾಗುವುದು. ಹೆಬ್ಬಾಳದಿಂದ ಹೆಣ್ಣೂರು ಮಾರ್ಗದಲ್ಲಿ 7.8 ಕಿ.ಮೀ ರಸ್ತೆ ನಿರ್ಮಾಣಕ್ಕೆ ನೋಟಿಫಿಕೇಶನ್ ಕೂಡ ಹೊರಡಿಸಲಾಗಿದೆ. ಆ ಮೂಲಕ ಬೆಂಗಳೂರಿನಲ್ಲಿ 320 ಕಿ.ಮೀ ಹೊಸ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದು ವಿವರಣೆ ನೀಡಿದರು.

ಜಿಟಿಯಿಂದ ಅನುಮತಿ ಸಿಗುತ್ತಿಲ್ಲ ಹೀಗಾಗಿ ರಾಜಕಾಲುವೆ ಅಕ್ಕಪಕ್ಕದ ಬಫರ್ ಪ್ರದೇಶದಲ್ಲಿ 50 ಅಡಿಯ 300 ಕಿ.ಮೀ ಉದ್ದದ ಹೊಸ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದೇವೆ. 1682 ಕಿ.ಮೀ ಉದ್ದದಷ್ಟು ರಸ್ತೆಗಳನ್ನು ವೈಟ್ ಟ್ಯಾಪಿಂಗ್ ಮಾಡಲಾಗುತ್ತಿದ್ದು, 30 ವರ್ಷಗಳ ಕಾಲ ಬಾಳಿಕೆ ಬರುವ ನಿರ್ವಹಣೆ ಮುಕ್ತ ರಸ್ತೆಗಳನ್ನು ಮಾಡಲಾಗಿದೆ. ಈ ಯೋಜನೆಗಳಿಗೆ 9 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಇನ್ನು 850 ಕಿ.ಮೀ ಉದ್ದದ ಮಳೆನೀರುಗಾಲುವೆಗಾಗಿ ವಿಶ್ವಬ್ಯಾಂಕ್ ನಿಂದ 2 ಸಾವಿರ ಕೋಟಿ ಹಣ ಪಡೆಯಲಾಗಿದೆ. ಈ ಪೈಕಿ 480 ಕಿ.ಮೀ ಪೂರ್ಣಗೊಂಡಿದ್ದು, 175 ಕಿ.ಮೀ ಉದ್ದದ ಕಾಮಗಾರಿ ನಡೆಯುತ್ತಿದೆ. ಉಳಿದ 173 ಕಿ.ಮೀ ಉದ್ದದ ಕಾಮಗಾರಿ ಮುಂದೆ ಕೈಗೆತ್ತಿಕೊಳ್ಳುತ್ತೇವೆ.

# ರನ್ಯಾಗೆ ಕ್ಲೀನ್‌ಚಿಟ್ ಕೊಟ್ಟರೂ ಅಚ್ಚರಿ ಇಲ್ಲ: ಸುರೇಶ್‌ಬಾಬು

• ಉದಯವಾಹಿನಿ, ಬೆಂಗಳೂರು

ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ನಟಿ ರನ್ಯಾರಾವ್‌ಗೆ ಕ್ಲೀನ್‌ಚಿಟ್ ಕೊಟ್ಟರೂ ಆಶ್ಚರ್ಯಪಡಬೇಕಾಗಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಸಂಶಯ ವ್ಯಕ್ತಪಡಿಸಿದರು. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂತಹ ಮಾಫಿಯಾಗಳು ಹೆಚ್ಚಾಗಿ ತಲೆ ಎತ್ತುತ್ತಿವೆ. ಈ ವಿಚಾರದಲ್ಲಿ ಗೃಹ ಇಲಾಖೆ ಸಮರ್ಪಕ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ದಕ್ಷ ಅಧಿಕಾರಿಗಳಿದ್ದರೂ ಅವರನ್ನು ಸರಿಯಾಗಿ ಬಳಕೆ ಮಾಡಿಕೊಳ್ಳುತ್ತಿಲ್ಲ. ರನ್ಯಾ ಹಲವು ಬಾರಿ ದುಬೈಗೆ ಭೇಟಿ ನೀಡಿ ಬಂದಿದ್ದಾರೆ. ಈ ಪ್ರಕರಣದಲ್ಲಿ ತಂದೆ ಐಪಿಎಸ್ ಅಧಿಕಾರಿ ರನ್ಯಾಗೆ ರಕ್ಷಣೆ ಕೊಡುತ್ತಿದ್ದಾರೆ ಎಂದು ಅನುಮಾನ ವ್ಯಕ್ತಪಡಿಸಿದರು. ಪೊಲೀಸರ ರಕ್ಷಣೆಯಲ್ಲಿ ರನ್ಯಾ ಓಡಾಡಿದ್ದಾರೆ. ಸರ್ಕಾರಕ್ಕೆ ನಾಚಿಕೆಯಾಗಬೇಕು. 14 ಕೆಜಿ ಚಿನ್ನ ಸಾಗಾಣೆ ಮಾಡುತ್ತಾರೆ ಎಂದರೆ ಗೃಹ ಇಲಾಖೆ ಈ ಪ್ರಕರಣದಲ್ಲಿ ಶಾಮೀಲಾಗಿದೆ. ಆದರೂ ಸರ್ಕಾರ ಸಿಐಡಿ ತನಿಖೆ ವಾಪಸ್ ಪಡೆದಿದ್ದು ಏಕೆ ಎಂದು ಪ್ರಶ್ನಿಸಿದರು. ರನ್ಯಾರಾವ್ ಅವರನ್ನು ಉಳಿಸಲು ಸರ್ಕಾರ ಮುಡಾ ಕೇಸ್‌ನಲ್ಲಿ ನಿವೇಶನ ವಾಪಸ್ ಕೊಟ್ಟ ರೀತಿಯಲ್ಲಿ ಚಿನ್ನವನ್ನು ದುಬೈಗೆ ವಾಪಸ್ ಇಟ್ಟು ಬಾ ಎಂದು ಹೇಳಿದರೂ ಅಚ್ಚರಿಪಡಬೇಕಾಗಿಲ್ಲ ಎಂದು ವ್ಯಂಗ್ಯವಾಡಿದರು. ರನ್ಯಾ ಪ್ರಕರಣದಲ್ಲಿ ಇಬ್ಬರ ಮಂತ್ರಿಗಳ ಹೆಸರು ಕೇಳಿ ಬಂದಿದೆ. ಆ ಸಚಿವರು ಯಾರು ಎಂಬ ಬಗ್ಗೆ ತನಿಖೆಯಾಗಬೇಕು ಪ್ರಭಾವಿಗಳಿದ್ದರೂ ಅವರ ವಿರುದ್ಧ ಕ್ರಮಕೈಗೊಳ್ಳಬೇಕು. ಯಾರು ಇದರ ಹಿಂದೆ ಇದ್ದಾರೆ ಎಂದು ಬೆಳಕಿಗೆ ಬರಬೇಕು ಎಂದು ಆಗ್ರಹಿಸಿದರು. ಇಷ್ಟು ದಿನ ರನ್ಯಾ ವಿಮಾನನಿಲ್ದಾಣದಲ್ಲಿ ಕಸ್ಟಂ ಅಧಿಕಾರಿಗಳ ಕಣ್ಣು ತಪ್ಪಿಸಿಕೊಂಡಿದ್ದಾಳೆ. ಇವೆಲ್ಲವನ್ನು ನೋಡಿದರೆ ಪೊಲೀಸ್ ಇಲಾಖೆ ಶಾಮೀಲಾಗಿದೆ.ಈ ಬಗ್ಗೆ ಸಿಬಿಐ ತನಿಖೆ ಸೂಕ್ತ ಎಂದು ಅವರು ಹೇಳಿದರು.

# ಡಿಎನ್‌ಎ ಸಂಶೋಧನೆಯಲ್ಲಿ ಕ್ರಾಂತಿಕಾರಕ ಬದಲಾವಣೆ

• ಉದಯವಾಹಿನಿ, ಬೆಂಗಳೂರು

ಕಾನ್ ಕಾರ್ಡ್ ಹೋಟೆಲ್ ಸಭಾಂಗಣದಲ್ಲಿ ಡಾ. ಅಗರ್ವಾಲ್ ಆಸ್ಪತ್ರೆಗಳು, ಜೀನ್ ಸಂಶೋಧನಾ ಪ್ರತಿಷ್ಠಾನ ವತಿಯಿಂದ ಜೆನೆಟಿಕ್ ಸಂಶೋಧನೆ ಮತ್ತು ಡಿಎನ್‌ಎ ಮೈಕ್ರೋನ್ ಮ್ಯಾನಿಪ್ಯುಲೇಷನ್‌ಗಾಗಿ ಇನ್ವರ್ಟೆಡ್ ಮೈಕ್ರೋಸ್ಕೋಪ್ ಕಾರ್ಯಗಾರ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ಚೈತನ್ಯಾನಂದ ಸ್ವಾಮೀಜಿರವರು, ಜೆನಟಿಕ್ ಸಂಶೋಧನೆ ಸಂಸ್ಥೆ ಮತ್ತು ಡಾ.ಅಗರವಾಲ್ ಆಸ್ಪತ್ರೆಯ ಅಧ್ಯಕ್ಷೆ ಡಾ. ಸುನಿತಾ ರಾಣಾ ಅಗರ್ವಾಲ್ ರವರು, ನಟಿ ಅಂಗನಾ ರಾಯ್ ರವರು ಚಾಲನೆ ನೀಡಿದರು.

ಚೈತನ್ಯನಂದಾ ಸರಸ್ವತಿ ಸ್ವಾಮೀಜಿ ರವರು ಮಾತನಾಡಿ ಜೀನಟಿಕ್ ಚಿಕಿತ್ಸೆಯಿಂದ ರೋಗಿಗಳ ಬಹಳ ಉಪಯೋಗವಾಗಿದೆ. ಜೆನೆಟಿಕ್ ಚಿಕಿತ್ಸೆ ಕಳೆದ 12 ವರ್ಷಗಳಿಂದ ಪಡೆಯುತ್ತಿದ್ದೇನೆ ಇದರ ಅನುಕೂಲವಾಗಿದೆ. ಒಲಗಣ್ಣು ತೊಂದರೆಯಾಗಿತ್ತು ಎಡಗಣ್ಣು ಟ್ಯೂಮರ್ ನಿಂದ ಬಳಲುತ್ತಿದೆ. ನನ್ನ ಮೇಲೆ ಒಂದು ತಿಂಗಳ ಕ್ಲಿನಿಕಲ್ ಟ್ರಯಲ್ ನಂತರ ಆರೋಗ್ಯದಲ್ಲಿ ಉತ್ತಮ ಸುಧಾರಣೆಯಾಯಿತು. ಭಾರತದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯಾಗಿದೆ, ಇಡಿ ವಿಶ್ವವೇ ಮೆಚ್ಚುವಂತದಾಗಿದೆ ಅಮೇರಿಕಾಗಿಂತ ಭಾರತ ದೇಶದಲ್ಲಿ ವೈದ್ಯಕೀಯ ಕ್ಷೇತ್ರ ಮುಂದಿದೆ. ಹೀಲಿಂಗ್ ವೈದ್ಯಕೀಯ ಚಿಕಿತ್ಸೆ ಮೂಲಕ ರೋಗ ವಾಸಿಯಾಗುತ್ತಿದೆ. ಡಾ.ಸುನಿತಾ ಅಗರವಾಲ್ ರವರು ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು. ಹೆಚ್ಚಿನ ಜನರು



ಉದಯವಾಹಿನಿ ಚಿತ್ರ

ಸಂಶೋಧಕರು ಆಗಿದ್ದಾರೆ, ಹೆಚ್ಚಿನ ಉಪಕರಣಗಳು ಸಂಶೋಧನೆಗೆ ಬಂದಿವೆ, ಆದರೆ ಇವುಗಳ ಸಂಯೋಜನೆಯಿಂದ ಅಸಾಧಾರಣ ಫಲಿತಾಂಶ ಬರಬೇಕು ಎಂಬುದರ ತುದಿಗಂತಿಗೆ ನಾವು ಮುಟ್ಟಲು ಹೊರಟಿದ್ದೇವೆ. ಈಗ, ಸ್ನಾಯು ಜೀವಶಾಸ್ತ್ರದ (Morphogenetic Activator of Nucleic Acids - MANA) ಸಹಾಯದಿಂದ ಕೇವಲ ಒಂದು ಹನಿಯಷ್ಟು ರಕ್ತವನ್ನು ಬಳಸಿ ರೋಗಿಯದೇ ಆರೋಗ್ಯಕರ ಭ್ರೂಣ ಡಿಎನ್‌ಎ ಮತ್ತು ಸ್ಟೆಮ್ ಸೆಲ್‌ಗಳನ್ನು ಉತ್ಪಾದಿಸಿ, ಅದನ್ನು ರೋಗಿಯ ಚಿಕಿತ್ಸೆಗೆ ಬಳಸಬಹುದು. ಇದನ್ನು ಪ್ರಪಂಚದಲ್ಲಿ ಕೇವಲ ಜೆನ್ ರಿಸರ್ಚ್ ಫೌಂಡೇಶನ್ ಮತ್ತು ಡಾ. ಅಗರವಾಲ್ ಆಸ್ಪತ್ರೆಗಳು ಮಾತ್ರ ಕೈಗೊಳ್ಳುತ್ತಿವೆ. 21 ವರ್ಷಗಳಲ್ಲಿ 20000ಕ್ಕೂ ಹೆಚ್ಚು ರೋಗಿಗಳಿಗೆ ನೀಡಲಾಗಿದೆ. ಡಿ.ಎನ್.ಎ.ವಯಸ್ಸದಂತೆ ಕುಗ್ಗಿಹೋಗುತ್ತದೆ. ಇದರಿಂದ ಮಧುಮೇಹ, ಕಿಡ್ನಿ ಸಮಸ್ಯೆ, ಮೆದುಳು , ನರಗಳ ಸಂಭಂದಿತ ಖಾಯಿಲೆಗಳು ಬರುತ್ತದೆ.

ಲೈವ್ ಸೆಲ್ ಇಮೇಜಿಂಗ್ ತಂತ್ರಜ್ಞಾನ ಬಳಸಿ ಆರೋಗ್ಯ

ಡಾ. ಅಗರವಾಲ್ ಆಸ್ಪತ್ರೆಗಳು ಮತ್ತು ಜೆನ್ ರಿಸರ್ಚ್ ಫೌಂಡೇಶನ್ ಅಫ್ತಾಲ್ಮಾಲಜಿ (ಕಣ್ಣಿನ ವೈದ್ಯಕೀಯ ಮತ್ತು ಜನಿಟಿಕ್ ಸಂಶೋಧನೆ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿವೆ. ಈಗ, ಈ ಸಂಸ್ಥೆಗಳು ಅತ್ಯಾಧುನಿಕ ತಂತ್ರಜ್ಞಾನಯುತ ಇನ್ವರ್ಟೆಡ್ ಫೇಸ್ ಕಾನ್ಟ್ರಾಸ್ಟ್ ಮೈಕ್ರೋಸ್ಕೋಪ್ ಅನ್ನು ಸಂಶೋಧನೆಗೆ ಬಳಸಲಿದ್ದಾರೆ, ಇದು ಜನಿಟಿಕ್ ಅಧ್ಯಯನ ಮತ್ತು ಡಿಎನ್‌ಎ ಮೈಸ್ಕೋನ್ ಮ್ಯಾನಿಪ್ಯುಲೇಷನ್ ಗಾಗಿ ಸಹಾಯಕವಾಗಲಿದೆ.
-ಡಾ, ಸುನೀತಾ ರಾಣಾ ಅಗರವಾಲ್

ಕರ ಡಿ.ಎನ್.ಎ. ರೋಗಿಯ ದೇಹ ಸೇರಿಸುವುದರಿಂದ ರೋಗ ವಾಸಿಯಾಗಿ ಆರೋಗ್ಯವಂತರಾಗುತ್ತಾರೆ. ಡಿ.ಎನ್.ಎ.ಯಲ್ಲಿ ಕ್ರಾಂತಿಕಾರ ಸಂಶೋಧನೆಯಾಗುತ್ತಿದೆ ರೋಗಿಗಳ ಗುಣ ಮುಖರಾಗಲು ಹೊಸ ಬೆಳಕನ್ನು ನೀಡಿದೆ ಎಂದು ಹೇಳಿದರು. ನಟಿ ಅಂಗನ ರಾಯ್ ರವರು ಡಾ.ಸುನಿತಾ ಅಗರವಾಲ್ ರವರು ಜೆನಟಿಕ್ ಕುರಿತು ಬಹಳ ಅಧ್ಯಯನ ಮಾಡುತ್ತಿದ್ದಾರೆ, ಇದರಿಂದ ಜನರಿಂದ ರೋಗ ತಡೆಗಟ್ಟಲು ಅನುಕೂಲವಾಗಲಿದೆ. ಕೊರೋನ ನಂತರ ಲಕ್ಷಾಂತರ ಜನರಿಗೆ ಅಡ್ ಪರಿಣಾಮ ಬೀರಿತು ಇದರಿಂದ ರೋಗ ಎದುರಿಸುವ ಶಕ್ತಿ ಪಡೆಯಲು ಡಾ.ಸುನಿತಾ ಅಗರವಾಲ್ ರವರ ಸಲಹೆ ಪಡೆಯಬಹುದು ಎಂದು ಹೇಳಿದರು.

# ಪರಿಸರ ಸಂರಕ್ಷಣೆ ಜೊತೆಗೆ ಪರಿಸರ ಸಾಹಿತ್ಯ ಕ್ಷೇತ್ರದಲ್ಲೂ ಸಹ ಅಭಿವೃದ್ಧಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಪರಿಸರ ಸಂರಕ್ಷಣೆ ಜೊತೆಗೆ ಪರಿಸರ ಸಾಹಿತ್ಯ ಕ್ಷೇತ್ರದಲ್ಲೂ ಸಹ ಅಭಿವೃದ್ಧಿ ಹೊಂದಬೇಕು ಎಂದು ಶಾಸಕ ಬೈರತಿ ಬಸವರಾಜ ಹೇಳಿದರು. ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಮಿಡಿತ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪರಿಸರ ಮಂಜುರವರ ಮೂರನೇ ಕೃತಿ ಮಿಡಿದ ಮರಗಳು ಪುಸ್ತಕ ಲೋಕಾರ್ಪಣೆ ಹಾಗೂ 501 ಔಷದ ಗಿಡಗಳ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ಪರಿಸರ ಸಂರಕ್ಷಣೆ ಬಹಳ ಮುಖ್ಯ. ಅಭಿವೃದ್ಧಿ ವಿಚಾರ ಬಂದಾಗ ಮರಗಳು ಕಡಿಯುವುದು ಅನಿವಾರ್ಯ. ಒಂದು ಮರ ಕಡಿದರೆ ಅದಕ್ಕೆ ಪ್ರತಿಯಾಗಿ ಹನ್ನೊಂದು ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು. ಅನಾಧಿಕೃತವಾಗಿ ಯಾರೇ ಮರಗಳನ್ನು ಕಡಿದರು ಅವರಿಗೆ ತಕ್ಕ ಶಿಕ್ಷೆಯಾಗಬೇಕು, ಮರ ಸಂರಕ್ಷಣೆ ಕಾಯ್ದೆ ಬಲಿಷ್ಠವಾಗಬೇಕು, ನಗರದ ಮರಗಳು ಉಳಿದರೆ ಮಾತ್ರ ನಗರವಾಸಿಗಳು ಆರೋಗ್ಯ ರಕ್ಷಣೆಯಾಗುತ್ತದೆ ಎಂದು ಸಾಹಿತಿ ಪರಿಸರ ಮಂಜು ಅಭಿಪ್ರಾಯಪಟ್ಟರು. ಈ ಸಂಧರ್ಭದಲ್ಲಿ ಮಾಜಿ ಪಾಲಿಕೆ ಸದಸ್ಯ ಪಿ.ಜೆ.ಅಂತೋಣಿಸ್ವಾಮಿ, ಮುಖಂಡರಾದ ಶಿವಪ್ಪ, ಭಾಗ್ಯಮ್ಮ, ಎಂ.ಆರ್.ವೆಂಕಟೇಶ್, ವಿಕ್ರಮ್, ಪಟಾಕಿ ರವಿ, ಗಂಧರ್ವ ರಮೇಶ್, ಉಪೇಂದ್ರಕುಮಾರ್, ಮಿಡಿತ ಫೌಂಡೇಶನ್ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

# ಶೀಘ್ರ ಬೋಧಕ ಬೋಧಕೇತರ ಹುದ್ದೆ ಭರ್ತಿ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳಲ್ಲಿ 2 ಸಾವಿರ ಬೋಧಕ ಬೋಧಕೇತರ ಹುದ್ದೆಗಳ ಭರ್ತಿಗೆ ಈ ಆಯವ್ಯಯದಲ್ಲಿ ಮುಖ್ಯಮಂತ್ರಿಗಳು ಅವಕಾಶ ನೀಡಿದ್ದು, ಅತಿ ಶೀಘ್ರದಲ್ಲೇ ಈ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ವಿಧಾನಸಭೆಯಲ್ಲಿ ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ರಾಘವೇಂದ್ರ ಬಸವರಾಜು ಹಿಟ್ನಾಳ್ ರವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದ ಹಲವು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಹುದ್ದೆಗಳ ಕೊರತೆ ಇದೆ. ಈ ಹುದ್ದೆಗಳನ್ನು ಸದ್ಯದಲ್ಲೇ ಭರ್ತಿ ಮಾಡಲಾಗುವುದು. ಈ ಬಜೆಟ್‌ನಲ್ಲಿ ಕಾಲೇಜು ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಒಟ್ಟು 2 ಸಾವಿರ ಹುದ್ದೆಗಳ ಭರ್ತಿಗೆ ಮುಖ್ಯಮಂತ್ರಿಗಳು ಅವಕಾಶ ಕಲ್ಪಿಸಿದ್ದಾರೆ ಎಂದರು. ರಾಜ್ಯದಲ್ಲಿ ಒಟ್ಟು 18 ಹೊಸ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮಂಜೂರಾಗಿರುತ್ತವೆ. ಇದರಲ್ಲಿ 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಕಟ್ಟಡ ಕಾಮಗಾರಿ ಪೂರ್ಣಗೊಂಡು ಶೈಕ್ಷಣಿಕ ಚಟುವಟಿಕೆ ಪ್ರಾರಂಭಗೊಂಡಿದೆ. ಅರಸೀಕೆರೆ ಮತ್ತು ದೇವದುರ್ಗ ಎಂಜಿನಿಯರಿಂಗ್ ಕಾಲೇಜುಗಳ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ ಎಂದರು. ಕೊಪ್ಪಳದಲ್ಲಿ ಹೊಸ ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಆರಂಭಿಸುವ ಪ್ರಸ್ತಾಪ ಇಲ್ಲ. ಪ್ರಸ್ತುತ ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲ್ಲೂಕಿನ ತಳಕಲ್ ಗ್ರಾಮ ಹಾಗೂ ಗಂಗಾವತಿಯಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ತಳಕಲ್‌ನಲ್ಲಿ ವಿಟಿಯುನೊಂದಿಗೆ ಒಪ್ಪಂದ ಮಾಡಿಕೊಂಡು ದೊಡ್ಡಮಟ್ಟದ ಕೌಶಲ್ಯಾಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ ಎಂದು ಅವರು ಹೇಳಿದರು. ಹೊಸ ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಸರ್ಕಾರಿ ಕಾಲೇಜುಗಳನ್ನು ಸ್ಥಾಪಿಸಲು 2024ರ ಜುಲೈನಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ವರದಿಯನ್ನು ನೋಡಿಕೊಂಡು ಹೊಸ ಎಂಜಿನಿಯರಿಂಗ್ ಕಾಲೇಜುಗಳ ಆರಂಭದ ಬಗ್ಗೆ ತೀರ್ಮಾನ ಮಾಡುತ್ತೇನೆ ಎಂದು ಅವರು ಹೇಳಿದರು.

# ಗ್ಯಾರಂಟಿ ಸಮಿತಿ ರದ್ದುಗೊಳಿಸುವಂತೆ ಬಿಜೆಪಿ, ಜೆಡಿಎಸ್ ಆಗ್ರಹ

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ತಿನಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರದ್ದುಗೊಳಿಸುವಂತೆ ಒತ್ತಾಯಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ, ಏಜೆನ್ಸಿಗಳಿಗೆ 40 ಲಕ್ಷ ರೂ.ಗಳನ್ನು ನೀಡಿರುವುದನ್ನು ಒಪ್ಪಿಕೊಂಡಿದೆ ಎಂದು ಬಿಜೆಪಿ ಸದಸ್ಯ ಮತ್ತು ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ನೀವು ಏಜೆನ್ಸಿಗಳಿಗೆ ಹಣ ನೀಡಿದ್ದರೆ, ಅನುಷ್ಠಾನ ಸಮಿತಿ ಏಕೆ ಕಾರ್ಯಕರ್ತರಿಗೆ ಸಂಬಳ ನೀಡಿ ಜನರಿಂದ ಮಾಹಿತಿ ಪಡೆಯುವುದರ ಅರ್ಥವೇನು ಎಂದು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಈ ವೇಳೆ ನಾರಾಯಣಸ್ವಾಮಿ ಅವರಿಗೆ ಸಾಥ್ ನೀಡಿದ ಬಿಜೆಪಿ ಎಂಎಲ್‌ಸಿ ಸಿ.ಟಿ. ರವಿ, ಎಂ2ಎಂ ಸಂಸ್ಥೆಗೆ ಒಂದು ಕೋಟಿ ರೂ. ಮತ್ತು ಇನ್ನೊಂದು ಸಂಸ್ಥೆಗೆ 9.25 ಕೋಟಿ ರೂ. ನೀಡಲಾಗಿದೆ ಎಂದು ಗಮನಸೆಳೆದರು. ಇದನ್ನು ಉತ್ತರದಲ್ಲಿ ಉಲ್ಲೇಖಿಸಲಾಗಿಲ್ಲ. ಇದನ್ನು ಏಕೆ ಮರೆಮಾಚಲಾಗುತ್ತಿದೆ ಎಂದು ಪ್ರಶ್ನಿಸಿದರು.



ಉದಯವಾಹಿನಿ ಚಿತ್ರ

# ಸಮಾನ ಮನಸ್ಕ ರಾಜ್ಯಗಳ ಸಭೆಯಲ್ಲಿ ಡಿಕೆಶಿ ಭಾಗಿ

## ಸಿಎಂ ಅವರು ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್‌ಗೆ ಪತ್ರವನ್ನು ಬರೆದಿದ್ದಾರೆ

• ಉದಯವಾಹಿನಿ, ಬೆಂಗಳೂರು

ಲೋಕಸಭೆ ಕ್ಷೇತ್ರ ಮರುವಿಂಗಡನೆ ವಿವಾದದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಅವರು ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್‌ಗೆ ಪತ್ರವನ್ನು ಬರೆದಿದ್ದಾರೆ.

ಕೆಲ ದಿನಗಳ ಹಿಂದೆಯಷ್ಟೇ ಸ್ಟಾಲಿನ್ ಸೂಚನೆಯಂತೆ ತಮಿಳುನಾಡಿನ ಸಚಿವರು, ಸಂಸದರೊಬ್ಬರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಸಂಸದೀಯ ಕ್ಷೇತ್ರಗಳ ಪ್ರಸ್ತಾವಿತ ವಿಂಗಡಣೆಯ ಪರಿಣಾಮಗಳನ್ನು ಚರ್ಚಿಸಲು ಮಾರ್ಚ್ 22 ರಂದು ಚೆನ್ನೈನಲ್ಲಿ ನಡೆಯಲಿರುವ ಸಮಾನ ಮನಸ್ಕ ರಾಜ್ಯಗಳ ಮೊದಲ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಭಾಗವಹಿಸಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಕ್ಷೇತ್ರ ಮರುವಿಂಗಡನೆ ಕುರಿತಾಗಿ ನೀವು ಬರೆದ ಪತ್ರ ಮತ್ತು ಆಹ್ವಾನವನ್ನು ಸ್ವೀಕರಿಸಿದ್ದೇನೆ. ಲೋಕಸಭಾ ಕ್ಷೇತ್ರಗಳ ಡಿಲಿಮಿಟೇಷನ್ ಕುರಿತು ದಕ್ಷಿಣ ರಾಜ್ಯಗಳ ಕಾಳಜಿ ಅರಿವಿದೆ.

ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಸಾಧಕ ಬಾದಕಗಳ ಬಗ್ಗೆ ಅರಿವಿದೆ. ಈ ವಿಚಾರವಾಗಿ ಸುಧೀರ್ಘವಾಗಿ ಚರ್ಚಿಸುವ ಅಗತ್ಯವಿದೆ



ಎಂದಿದ್ದಾರೆ. ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರ ಮರುವಿಂಗಡನೆ ಸಂಬಂಧಿಸಿದಂತೆ ಮಾರ್ಚ್ 22 ರಂದು ದಕ್ಷಿಣದ ರಾಜ್ಯಗಳ ಸಭೆ ನಡೆಯಲಿದೆ. ಚೆನ್ನೈನಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಸಭೆಗೆ ಆಹ್ವಾನ ನೀಡಲು ತಮಿಳುನಾಡಿನ ಸಚಿವ ಮತ್ತು ಸಂಸದರು ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿದ್ದರು. ಕ್ಷೇತ್ರ ಪುನರ್ ವಿಂಗಡನೆಗೆ ದಕ್ಷಿಣ ಭಾರತದ ರಾಜ್ಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಕರ್ನಾಟಕ, ತಮಿಳುನಾಡು, ಕೇರಳ, ತೆಲಂಗಾಣ ದಿಂದ ಇದಕ್ಕೆ ವಿರೋಧ ವ್ಯಕ್ತಪಡಿಸಿವೆ.

ಸಮಾನ ಮನಸ್ಕ, ಸಂತ್ರಸ್ಥರಾಗುವ ರಾಜ್ಯಗಳ ಚರ್ಚಿಸಬೇಕು.ಈ ಸಭೆಯಲ್ಲಿ ನಾನು ಭಾಗವಹಿಸಬೇಕೆಂಬ ಆಸೆ ಇದೆ ಆದರೆ ಕೆಲವು ಕಾರಣಗಳಿಂದಾಗಿ ಸಭೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ಪತ್ರದಲ್ಲಿ ವಿವರ ನೀಡಿದ್ದಾರೆ. ಮಾರ್ಚ್ 22 ರಂದು ಕರೆದ ಸಭೆಯಲ್ಲಿ ನನ್ನ ಬದಲಾಗಿ ಡಿ.ಕೆ.ಶಿವಕುಮಾರ್ ಭಾಗವಹಿಸುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

# ನಕಲಿ ಔಷಧ ಮಾರಾಟಕ್ಕೆ ಅಂಕುಶ

## ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್ ವಿಧಾನಸಭೆಯಲ್ಲಿ ಹೇಳಿಕೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ನಕಲಿ ಔಷಧ ಮಾರಾಟ ಜಾಲವನ್ನು ಹತ್ತಿಕ್ಕಲು ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಂಡಿದೆ. ನಕಲಿ ಔಷಧ ಮಾರಾಟಗಾರರ ವಿರುದ್ಧ ಕಾರ್ಯಾಚರಣೆಯನ್ನು ನಡೆಸಿ ಮೊಕದ್ದಮೆಗಳನ್ನು ದಾಖಲು ಮಾಡಲಾಗುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್ ವಿಧಾನಸಭೆಯಲ್ಲಿ ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಡಾ. ಅಶ್ವತ್ಥ್‌ನಾರಾಯಣ ರವರ ಪ್ರಶ್ನೆಗೆ ಉತ್ತರ ನೀಡಿದ ಅವರು, ನಕಲಿ ಔಷಧ ಜಾಲವನ್ನು ಪತ್ತೆಹಚ್ಚಿ ಕೆಲಸ ಮಾಡುತ್ತಿದ್ದೇವೆ. ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಉತ್ತರಖಂಡಗಳಲ್ಲಿ ಈ ನಕಲಿ ಔಷಧ ತಯಾರಿಕಾ ಘಟಕಗಳು ಇವೆ. ಈ ನಕಲಿ ಔಷಧಿ ರಾಷ್ಟ್ರಮಟ್ಟದ ಸಮಸ್ಯೆಯಾಗಿದೆ. ಇದನ್ನು ಹತ್ತಿಕ್ಕುವ ಪ್ರಯತ್ನವನ್ನು ಸರ್ಕಾರ ನಡೆಸಿದೆ ಎಂದರು. ಔಷಧ ಅಂಗಡಿಗಳಲ್ಲಿ ಔಷಧಗಳನ್ನು ಪಡೆದು ಅದನ್ನು ಪರಿಶೀಲಿಸುವ ಕೆಲಸವನ್ನು ನಡೆಸಿದ್ದೇವೆ. ಕೇಂದ್ರಕ್ಕೂ ನಕಲಿ ಔಷಧ ಉತ್ಪಾದಕರ ಬಗ್ಗೆಯೂ ಪತ್ರ ಬರೆದು ಮಾಹಿತಿ ನೀಡಿದ್ದೇವೆ. ರಾಜ್ಯದಲ್ಲೂ ಔಷಧ ನಿಯಂತ್ರಣ ಇಲಾಖೆ ನಕಲಿ ಔಷಧ ತಯಾರಕರು ಹಾಗೂ ಮಾರಾಟಗಾರರ ವಿರುದ್ಧ ಕ್ರಮಗಳನ್ನು ಕೈಗೊಂಡಿದೆ. ಜತೆಗೆ ಪ್ರಕರಣಗಳನ್ನು ದಾಖಲಿಸಿದೆ ಎಂದು ಅವರು ಹೇಳಿದರು.

ನಕಲಿ ಔಷಧ ಮಾರಾಟ ಮಾಡುತ್ತಿದ್ದ 87 ಔಷಧಿ ಅಂಗಡಿಗಳ ಲೈಸೆನ್ಸ್ ಅಮಾನತ್ತು ಮಾಡಿದ್ದೇವೆ. 3 ಅಂಗಡಿಗಳನ್ನು ಬಂದ್ ಮಾಡಿಸಿದ್ದೇವೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ರಾಜ್ಯದ ಆಹಾರ ಸುಕ್ಷತೆ ಹಾಗೂ



ಉದಯವಾಹಿನಿ ಚಿತ್ರ

ಔಷಧ ಇಲಾಖೆಯಲ್ಲಿ ಖಾಲಿ ಇರುವ ಔಷಧ ಪರಿವೀಕ್ಷಕರ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 8 ಪರಿವೀಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. 104 ಹುದ್ದೆಗಳು ಖಾಲಿ ಇವೆ. ಈ ಪೈಕಿ 83 ಔಷಧ ಪರಿವೀಕ್ಷಕರ ಹುದ್ದೆಗಳ ಭರ್ತಿಗೆ 2018 ರಲ್ಲಿ ಲೋಕಸೇವಾ ಆಯೋಗವು ಅಧಿಸೂಚನೆ ಹೊರಡಿಸಿ 67 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ 23-06-2021 ರಂದು ಇಲಾಖೆಗೆ ಆಯ್ಕೆ ಪಟ್ಟಿಯನ್ನು ಕಳುಹಿಸಿತ್ತು. ಆದರೆ ಸದರಿ ಆಯ್ಕೆ ಪಟ್ಟಿಯನ್ನು ವಿವಿಧ ನ್ಯಾಯಾಲಯಗಳಲ್ಲಿ ಪ್ರಶ್ನಿಸಿದ್ದು, ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿಯಿದೆ. ಈ ತಿಂಗಳ 20 ರಂದು ಅಂತಿಮ ವಿಚಾರಣೆ ನಡೆಯಲಿದ್ದು, ನ್ಯಾಯಾಲಯದ ತೀರ್ಮಾನದಂತೆ ಸರ್ಕಾರ ಮುಂದಿನ ಕ್ರಮ ಕೈಗೊಳ್ಳುತ್ತದೆ ಎಂದರು. ರಾಜ್ಯದಲ್ಲಿ ಔಷಧ ಪರಿವೀಕ್ಷಕರ ಹುದ್ದೆ ಖಾಲಿ ಇದ್ದರೂ ಎಡಿಸಿಗಳಿಗೆ ಜವಾಬ್ದಾರಿ ನೀಡಿ ಔಷಧಿ ಪರಿವೀಕ್ಷಕರ ಕೆಲಸಗಳನ್ನು ನಿರ್ವಹಿಸಲು ಸೂಚನೆ ನೀಡಿದ್ದೇವೆ ಎಂದು ಅವರು ಹೇಳಿದರು. ರಾಜ್ಯದ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಇಲ್ಲ. ಅಗತ್ಯ ಇರುವ ಔಷಧವನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು. ಕೆಲವೊಂದು ಔಷಧಿಗಳ ಕೊರತೆಗೆ ಕಾರಣ ಟೆಂಡರ್‌ಗಳಲ್ಲಿ ಯಾರೂ ಭಾಗವಹಿಸದೇ ಇರುವುದು. ಈ ಔಷಧಿಗಳ ಮೌಲ್ಯ ಮತ್ತು ಪ್ರಮಾಣ ಕಡಿಮೆ ಇರುವುದರಿಂದ ಹಲವಾರು ಬಾರಿ ಟೆಂಡರ್ ಆಹ್ವಾನಿಸಿದರೂ ಯಾರೂ ಸ್ಪಂದಿಸಿಲ್ಲ. ಆದರೂ ಸರ್ಕಾರ ನಿಯಮಾನುಸಾರ ಔಷಧಿಗಳ ಖರೀದಿ ಮಾಡುತ್ತಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಪ್ರಸ್ತುತ 772 ಅನುಮೋದಿತ ಔಷಧಗಳಿದ್ದು, ಈ ಪೈಕಿ 475 ಔಷಧಗಳ ದಾಸ್ತಾನು ಇದೆ. ಈ ವರ್ಷದಿಂದ ಅನುಮೋದಿತ ಔಷಧಿಗಳ ಸಂಖ್ಯೆಯನ್ನು 1032ಕ್ಕೆ ಹೆಚ್ಚಿಸುವ ತೀರ್ಮಾನವನ್ನು ಮಾಡಿದ್ದೇವೆ. ಔಷಧಿಗಳು ಕೊರತೆಯಾದರೆ ಅವುಗಳನ್ನು ಬೇರೆ ಜಿಲ್ಲೆಯಿಂದ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಅವರು ಹೇಳಿದರು.

## ಗಾಳಿಗೆ ಮುರಿದ ವಿದ್ಯುತ್ ಕಂಬ

• ಉದಯವಾಹಿನಿ, ತುರುವೇಕೆರೆ

ತಾಲ್ಲೂಕಿನ ದಬ್ಬೆಘಟ್ಟ ಹೋಬಳಿ ವ್ಯಾಪ್ತಿಯ ಕೆಲವೆಡೆ ಬುಧವಾರ ರಾತ್ರಿ ಬೀಸಿದ ಮಳೆ-ಗಾಳಿಗೆ ವಿದ್ಯುತ್ ಕಂಬ, ಮರ ಗಿಡಗಳು ಧರೆಗುರುಳಿವೆ. ತಾಲ್ಲೂಕಿನ ಅಲ್ಲಲ್ಲಿ ಕೆಲ ನಿಮಿಷಗಳವರೆಗೆ ಸೋನೆ ಮಳೆ ಬಂದರೆ, ಇನ್ನೂ ಕೆಲವೆಡೆ ರಸ್ತೆ ನೀರು ಹರಿಯುವಂತೆ ಮಳೆ ಬಿದ್ದಿತ್ತು. ತಾಲ್ಲೂಕಿನ ಹೆಡಿಗೇಹಳ್ಳಿ, ಅರೆಮಲ್ಲೇನಹಳ್ಳಿ, ಹುಲಿಕಲ್ ನಾಲೆ, ಬೆಂಡೇಕೆರೆ, ಅಬುಕನಹಳ್ಳಿ, ಕಡೇಹಳ್ಳಿ, ತಂಗಡ, ಬ್ರಹ್ಮದೇವರಹಳ್ಳಿ, ಸೋಪ್‌ನಹಳ್ಳಿ ಗ್ರಾಮದ ಹೊರ ವಲಯದಲ್ಲಿ ತೆಂಗು ಹಾಗೂ ಇನ್ನಿತರ ಮರಗಳ ಕೊಂಬೆಗಳು ವಿದ್ಯುತ್ ತಂತಿ ಮೇಲೆ ಬಿದ್ದು 15ಕ್ಕೂ ಹೆಚ್ಚು ವಿದ್ಯುತ್ ಕಂಬ ಹಾಗು ತಂತಿ ತುಂಡಾಗಿದೆ ಹುಲಿಕಲ್ ಹೇಮಾವತಿ ನಾಲೆ ಸಮೀಪ ಒಂದು ವಿದ್ಯುತ್ ಪರಿವರ್ತಕ ಬಿದ್ದು ಹಾಳಾಗಿದೆ. ಬಡಗರಹಳ್ಳಿಯ ದೊಡ್ಡಯ್ಯ ಹಂದಿಜೋಗಿ ಕಾಲೊನಿ ನಿವಾಸಿ ಗಂಗಯ್ಯ ಅವರ ಮನೆಯ ಶೀಟ್ ಮತ್ತು ಹೆಂಚುಗಳು ಗಾಳಿಗೆ ತರಗೆಲೆಗಳಂತೆ ತೂರಿ ಹೋಗಿದ್ದು ಇದರಿಂದ ಮಳೆಯ ಹನಿಗೆ ಮನೆಯ ವಸ್ತುಗಳು ನೆನೆದು ಮಾಲೀಕರು ಪರದಾಡುವಂತಾಗಿದೆ.

ಸ್ಥಳಕ್ಕೆ ಬೆಸ್ಕಾಂ ಶಾಖಾಧಿಕಾರಿ ಎಂ.ಎಲ್.ಉಮೇಶ್ವರಯ್ಯ, ಸಿಬ್ಬಂದಿ ಭೇಟಿ ನೀಡಿ ತೆರವು ಕಾರ್ಯಾಚರಣೆ ನಡೆಸಿದಿದ್ದಾರೆ. ಗ್ರಾಮ ಆಡಳಿತಾಧಿಕಾರಿ ಗುರುರಾಜ್ ಗತಾಟೆ ಹಾಜರಿದ್ದರು.

## ಪಾದಚಾರಿ ಮಾರ್ಗ ತೆರವು

• ಉದಯವಾಹಿನಿ, ಕುಣಿಗಲ್

ಪಟ್ಟಣದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಪುರಸಭೆ ಮುಖ್ಯಾಧಿಕಾರಿ ಮಂಜುಳಾ ನೇತೃತ್ವದಲ್ಲಿ ಗುರುವಾರ ಬೆಳಗ್ಗೆ ಪ್ರಾರಂಭವಾಯಿತು. ಪಟ್ಟಣದಲ್ಲಿ ರಸ್ತೆಬದಿ ಅಂಗಡಿ ಮಾಲೀಕರು ಸೇರಿದಂತೆ ಕೆಲ ಬೀದಿಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗ ಅತಿಕ್ರಮಿಸಿಕೊಂಡ ಕಾರಣ ಹಲವು ವರ್ಷಗಳಿಂದ ಪಾದಚಾರಿ ಮಾರ್ಗ ಕಾಣೆಯಾಗಿದ್ದು, ನಾಗರಿಕರಿಗೆ ಮತ್ತು ಸಾವಿರಾರು ವಿದ್ಯಾರ್ಥಿಗಳಿಗೆ ನಿತ್ಯ ಸಮಸ್ಯೆಯಾಗುತ್ತಿದೆ ಎಂದು ಸಂಘ ಸಂಸ್ಥೆ ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿ ಕ್ರಮಕ್ಕಾಗಿ ಆಗ್ರಹಿಸಿದ್ದರು.

ಪುರಸಭೆ ಮುಖ್ಯಾಧಿಕಾರಿ ಮಂಜುಳಾ, ತಹಶೀಲ್ದಾರ್ ರಶ್ಮಿ. ಲೋಕೋಪಯೋಗಿ ಇಲಾಖೆ ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ, ನಾಗರಿಕರಿಗೆ ಮಾಹಿತಿ ನೀಡಿ ತೆರವಿನ ಮೂರು ದಿನಗಳ ಕಾರ್ಯಾಚರಣೆಗೆ ಗುರುವಾರ ಚಾಲನೆ ನೀಡಿದರು. ಪಟ್ಟಣದ ಮಲ್ಲಿಪಾಳ್ಯ ಸೇರಿದಂತೆ 23ನೇ ವಾರ್ಡ್ ರಸ್ತೆ ಇಕ್ಕೆಲಗಳ ಚರಂಡಿ ಗಡಿ ಭಾಗದಿಂದ ಮುಂಭಾಗಕ್ಕೆ ಬಂದಿರುವ ಅಂಗಡಿಗಳ ಅತಿಕ್ರಮಿತ ಭಾಗವನ್ನು ತೆರವುಗೊಳಿಸಲು ಪ್ರಾರಂಭಿಸಿದಾಗ ಕೆಲವರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿದರೆ, ಉಳಿದ ಕಾರ್ಯವನ್ನು ಪುರಸಭೆ ಸಿಬ್ಬಂದಿ ಜೆಸಿಬಿ ಬಳಸಿ ತೆರವುಗೊಳಿಸಲು ಮುಂದಾದಾಗ ಮಾಲೀಕರು ತೀವ್ರ ವಿರೋಧ ವ್ಯಕ್ತಪಡಿಸಿದರೂ ಬಿಡದೆ ತೆರವುಗೊಳಿಸಲಾಯಿತು.

## ಜಾತ್ರೆಯಲ್ಲಿ ದೇಸಿ ರಾಸುಗಳು

• ಉದಯವಾಹಿನಿ, ಹುಳಿಯಾರು

ಹೋಬಳಿಯ ಕಾರೇಹಳ್ಳಿ ರಂಗನಾಥಸ್ವಾಮಿ ಜಾತ್ರೆ ಅಂಗವಾಗಿ ನಡೆಯುವ ದನಗಳ ಜಾತ್ರೆಯಲ್ಲಿ ದೇಸಿ ರಾಸುಗಳ ಸಂಖ್ಯೆ ಹೆಚ್ಚಿದ್ದು, ರಾಸುಗಳ ಕೊಡು ಕೊಳ್ಳುವಿಕೆ ಜೋರಾಗಿ ನಡೆದಿದೆ. ಕಾರೇಹಳ್ಳಿ ರಂಗನಾಥಸ್ವಾಮಿ ದನಗಳ ಜಾತ್ರೆ ಶಿವರಾತ್ರಿ ತರುವಾಯ ಆರಂಭವಾಗಿ ಯುಗಾದಿ ಹಬ್ಬಕ್ಕೆ ಮೊದಲು ಮುಗಿಯುತ್ತದೆ. ಪೂರ್ವ ಮುಂಗಾರು ಬಿತ್ತನೆಗೆ ಭೂಮಿಯನ್ನು ಅಣಿಗೊಳಿಸಲು ಜಾತ್ರೆಯಿಂದ ರಾಸುಗಳನ್ನು ಕೊಳ್ಳಲು ಸಹಾಯವಾಗುತ್ತದೆ ಎಂಬ ಭಾವನೆ ರೈತರಲ್ಲಿದೆ. ಹತ್ತು ದಿವಸ ನಡೆಯುವ ಜಾತ್ರೆಯಲ್ಲಿ ಜಿಲ್ಲೆಗಳಿಂದ ರೈತರು, ದಲ್ಲಾಳಿಗಳು ರಾಸುಗಳ ಖರೀದಿಗೆ ಬರುತ್ತಾರೆ.

ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಗದಗ, ಆಂಧ್ರದ ಅನಂತಪುರ ಜಿಲ್ಲೆಯ ಕೆಲ ತಾಲ್ಲೂಕುಗಳಿಂದಲೂ ರೈತರು ಜಾತ್ರೆಗೆ ಬರುತ್ತಾರೆ. ಕಳೆದ ವರ್ಷ ಎಲ್ಲೆಡೆ ಉತ್ತಮ ಮಳೆಯಾಗಿದ್ದರೂ, ರೈತರು ರಾಸುಗಳನ್ನು ಉಳಿಸಿಕೊಳ್ಳಲು ಪರದಾಡುವಂತಾಗಿತ್ತು. ಆಧುನಿಕತೆ ಸೋಗಿನಲ್ಲಿ ಕೃಷಿ ತ್ಯಜಿಸಿ ರಾಸುಗಳನ್ನು ಕಳೆದುಕೊಂಡಿರುವವರು ಕೂಡ ಇತ್ತೀಚೆಗೆ ಕೃಷಿಯತ್ತ ಮುಖ ಮಾಡುತ್ತಿರುವುದು ಕೂಡ ರಾಸುಗಳ ದರ ಹೆಚ್ಚಳಕ್ಕೆ ಕಾರಣವಾಗಿದೆ. ರಾಸುಗಳ ಸಂಖ್ಯೆ ಕ್ಷೀಣಿಸುತ್ತಿರುವ ಪರಿಣಾಮ ಕೃಷಿ ಚಟುವಟಿಕೆಗಳಿಗೆ ರಾಸುಗಳನ್ನು ಕೊಳ್ಳುವುದು ದುಸ್ತರವಾಗಿದೆ. ಕೇವಲ ಬೇಸಾಯಕ್ಕೆ ಬಳಸುವ ರಾಸುಗಳ ಬೆಲೆ 70 ಸಾವಿರಕ್ಕೆ ಕಡಿಮೆಯಿಲ್ಲ ಎಂದು ರೈತರೊಬ್ಬರು ಹೇಳಿದರು.

## ರೈತರ ಸಮಸ್ಯೆ ಪರಿಹಾರಕ್ಕೆ ಮನವಿ

• ಉದಯವಾಹಿನಿ, ಪಾವಗಡ

ಪರಿಶಿಷ್ಟ ಜಾತಿ, ಪಂಗಡದವರ ಜಮೀನುಗಳನ್ನು ಸೋಲಾರ್ ಕಂಪನಿಗಳು ವಶಪಡಿಸಿಕೊಳ್ಳದಂತೆ ಕ್ರಮ ತೆಗೆದುಕೊಳ್ಳಬೇಕು, ರೈತರ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿ ರಾಜ್ಯ ರೈತ ಸಂಘ, ಹಸಿರು ಸೇನೆ ಪದಾಧಿಕಾರಿಗಳು ಬುಧವಾರ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವ ರಿಗೆ ಮನವಿ ಸಲ್ಲಿಸಿದರು. ತಾಲ್ಲೂಕಿನ ವಿವಿಧೆಡೆ ಖಾಸಗಿ ಕಂಪನಿಗಳು ಸೋಲಾರ್ ಘಟಕ ನಿರ್ಮಿಸಲು ಪರಿಶಿಷ್ಟ ಜಾತಿ, ಪಂಗಡದವರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ. ಇನ್ನಿಲ್ಲದ ಒತ್ತಡ ಹೇರಿ ಅವರಿಂದ ಜಮೀನು ವಶಪಡಿಸಿಕೊಳ್ಳುತ್ತಿದ್ದಾರೆ.

ಇದರಿಂದ ಬಡ ಜನತೆ ಬೀದಿಗೆ ಬರುವಂತಾಗಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷ ಪೂಜಾರಪ್ಪ ಆರೋಪಿಸಿದರು. ಸೋಲಾರ್ ಘಟಕ ನಿರ್ಮಿಸುವಾಗ ಜಮೀನುಗಳಿಗೆ ಇರುವ ರಸ್ತೆಗಳನ್ನು ಮುಚ್ಚಲಾಗುತ್ತಿದೆ. ಇದರಿಂದ ಜಮೀನುಗಳಿಗೆ ಹೋಗಲಾಗದೆ ರೈತರು ಸಮಸ್ಯೆ ಎದುರಿಸುತ್ತಿದ್ದಾರೆ. ಬಗರ್ ಹುಕುಂ ಅಡಿ ಅರ್ಜಿ ಸಲ್ಲಿಸಿದ ರೈತರಿಗೆ ಭೂಮಿ ಮಂಜೂರು ಮಾಡುತ್ತಿಲ್ಲ. ಖಾತೆ, ಪಹಣಿ ಮಾಡಿಕೊಡುವಲ್ಲಿ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸೋಲಾರ್ ಘಟಕ ನಿರ್ಮಿಸುವಾಗ ರೈತರ ಜಮೀನುಗಳನ್ನು ಮುಚ್ಚಬಾರದು. ಬಗರ್ ಹುಕುಂ ಅಡಿ ಜಮೀನುಗಳನ್ನು ಶೀಘ್ರ ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.


### ಬೆಟ್ಟ ಗುಡ್ಡಗಳ ಪಕ್ಕ ಪ್ರಾಣಿ ಪಕ್ಷಿಗಳ ಸಂಕುಲಗಳ ಉಳಿವಿಗೆ ಕ್ರಮ ಕೈಗೊಳ್ಳಬೇಕು

# ಲೇಔಟ್ ನಿರ್ಮಾಣಕ್ಕೆ ಕೆರೆಕುಂಟೆ, ಕಾಲುವೆ, ಬೆಟ್ಟಗುಡ್ಡಗಳ ಒತ್ತುವರಿ

• ಉದಯವಾಹಿನಿ, ಬಾಗೇಪಲ್ಲಿ

ಪಟ್ಟಣ, ಹೊರವಲಯದ ರಾಷ್ಟ್ರೀಯ ಹೆದ್ದಾರಿ-44ರ ಸುತ್ತಮುತ್ತಲೂ 20 ವರ್ಷಗಳ ಹಿಂದೆ ಇದ್ದ ಪ್ರಮಾಣದಷ್ಟು ಅರಣ್ಯ ಮತ್ತು ಕೃಷಿ ಭೂಮಿ ಈಗ ಇಲ್ಲ. ಆದರೆ, ಜನವಸತಿ ಬಡಾವಣೆಗಳ ನಿರ್ಮಾಣ ಮಾತ್ರ ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಇದು ಹೀಗೆಯೇ ಮುಂದುವರಿದರೆ ಅರಣ್ಯ ಪ್ರದೇಶ, ಕೆರೆ, ಕುಂಟೆ, ಕಾಲುವೆಗಳು, ಭೂ ಪ್ರದೇಶ ಕಡಿಮೆಯಾಗುತ್ತಾ ಹೋದರೆ ಭವಿಷ್ಯವು ಅಪಾಯಕ್ಕೆ ಸಿಲುಕಲಿದೆ ಎಂದು ಪರಿಸರ ಪ್ರೇಮಿಗಳು ಆತಂಕ ವ್ಯಕ್ತಪಡಿಸುವರು. ಅರಣ್ಯ ಹಾಗೂ ಕೃಷಿ ಅಧಿಕಾರಿಗಳ ಮಾಹಿತಿ ಪ್ರಕಾರ ತಾಲ್ಲೂಕಿನಲ್ಲಿ ಅರಣ್ಯ ಹಾಗೂ ಕೃಷಿ ಭೂಮಿಗಳು ಇದೀಗ ಜನವಸತಿ ಬಡಾವಣೆಗಳಾಗಿ ಪರಿವರ್ತನೆಯಾಗಿವೆ. ಪಟ್ಟಣದ ರಾಷ್ಟ್ರೀಯ ಹೆದ್ದಾರಿ-44ರ ಪರಗೋಡು ಬಳಿ ಇರುವ ಸಾಲುಮರದ ತಿಮ್ಮಕ್ಕ ಉದ್ಯಾನವನದಿಂದ ರಾಜ್ಯದ ಗಡಿಯುದ್ದಕ್ಕೂ ಅಪಾರ ಪ್ರಮಾಣದ ಅರಣ್ಯ ಹಾಗೂ ಕೃಷಿ ಭೂಮಿ ಇತ್ತು. ಈಗ ಭೂಮಿಗೆ ಚಿನ್ನದ ಬೆಲೆ ಬಂದಿರುವುದರಿಂದ ರೈತರ ಕೃಷಿ ಭೂಮಿ, ಅರಣ್ಯ ಪ್ರದೇಶವು ಕಡಿಮೆಯಾಗಿದೆ.

ಪಟ್ಟಣಕ್ಕೆ ಅಂಟಿಕೊಂಡ ಹಳೆಯ ಶಾದಿ ಮಹಲ್ ಪಕ್ಕದಲ್ಲಿ ಕರ್ನಾಟಕ ಗೃಹ ಮಂಡಳಿ ನಿರ್ಮಿಸಿದ ಬಡಾವಣೆಯಲ್ಲಿ ಹಿಂದೆ ರೈತರು ಬೆಳೆ ಬೆಳೆಯುತ್ತಿದ್ದರು. ಈಗ ಅದು ಜನವಸತಿಯಾಗಿದೆ. ಇದೇ ಮಾದರಿಯಲ್ಲಿ ಸರ್ಕಾರಿ ಆಸ್ಪತ್ರೆ ಪಕ್ಕ ಹಾದುಹೋಗುವ ತೀಮಾಕಲಪಲ್ಲಿ ರಸ್ತೆ, ಗೂಳೂರು ರಸ್ತೆ, ನ್ಯಾಷನಲ್ ಕಾಲೇಜು ಹಿಂಭಾಗ,



ಉದಯವಾಹಿನಿ ಚಿತ್ರ

> ಪಟ್ಟಣದ ಸುತ್ತ ಕೃಷಿ ಮತ್ತು ಅರಣ್ಯ ಭೂಮಿ ಮಾಯವಾಗಿ ಬಡಾವಣೆಗಳ ನಿರ್ಮಾಣ ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಬೀಳಬೇಕು.
> -ಸೋಮಶೇಖರರೆಡ್ಡಿ, ರೈತ ಚಿನ್ನೇಪಲ್ಲಿ

ಕಾರಕೂರು ಕ್ರಾಸ್ ಸೇರಿ ಪಟ್ಟಣದ ಹೊರವಲಯದ ಸುತ್ತಲೂ ಜನವಸತಿ ಹೆಚ್ಚಾಗಿದೆ. ಅಕ್ಕಪಕ್ಕದಲ್ಲಿನ ಕೆರೆ, ಕುಂಟೆ, ಕಾಲುವೆಗಳು ಬಡಾವಣೆಗಳ ಅಭಿವೃದ್ಧಿಗೆ ಒತ್ತುವರಿಯಾಗಿವೆ. ಬೆಂಗಳೂರು, ಹೈದರಾಬಾದ್ ಸೇರಿದಂತೆ ವಿವಿಧ ನಗರಗಳ ರಿಯಲ್ ಎಸ್ಟೇಟ್ ಉದ್ಯಮಿಗಳು ಗ್ರಾಮೀಣ ಪ್ರದೇಶಗಳ ಕೃಷಿಭೂಮಿ ಖರೀದಿಸಿ ಬಡಾವಣೆ, ರೆಸಾರ್ಟ್‌ಗಳನ್ನು ನಿರ್ಮಿಸಿದ್ದಾರೆ. ಶಿರಿಡಿ ಸಾಯಿಬಾಬಾ ಮಂದಿರದ ಮುಂಭಾಗದ ಕೃಷಿ ಭೂಮಿಯಲ್ಲಿ ಬಡಾವಣೆ ತಲೆ ಎತ್ತಿದ್ದು, ಗಡಿದಂ ಬೆಟ್ಟದತ್ತ ಬಡಾವಣೆ ವಿಸ್ತರಣೆಯಾಗಿದೆ. ಗೂಳೂರು ರಸ್ತೆಯ

> ಬಡಾವಣೆಗಳ ಹೆಸರಿನಲ್ಲಿ ಕೆರೆ ಕುಂಟೆ ಕಾಲುವೆಗಳನ್ನು ಮುಚ್ಚಲಾಗಿದೆ. ಒತ್ತುವರಿ ಮಾಡಿಕೊಂಡು ಬಡಾವಣೆಗಳನ್ನು ನಿರ್ಮಿಸಲಾಗಿದೆ. ಅಕ್ರಮವಾಗಿ ಜನವಸತಿ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಬಾರದು. ಬೆಟ್ಟ ಗುಡ್ಡಗಳ ಪಕ್ಕ ಪ್ರಾಣಿ ಪಕ್ಷಿಗಳ ಸಂಕುಲಗಳ ಉಳಿವಿಗೆ ಕ್ರಮ ಕೈಗೊಳ್ಳಬೇಕು.
> -ಎ.ವೆಂಕಟರೆಡ್ಡಿ, ಪ್ರಗತಿಪರ ರೈತ ಪೋತೇಪಲ್ಲಿ ಗ್ರಾಮ

ಪೋತೇಪಲ್ಲಿ, ನಲ್ಲಪರೆಡ್ಡಿಪಲ್ಲಿ, ಚಿನ್ನೇಪಲ್ಲಿ ಕ್ರಾಸ್, ರೆಡ್ಡಿಕೆರೆ, ಕಾರಕೂರು ಕ್ರಾಸ್, ದೇವರಗುಡಿಪಲ್ಲಿ, ಕೊಂಡಂವಾರಿಪಲಿ, ನ್ಯಾಷನಲ್ ಕಾಲೇಜಿನ ಅಕ್ಕಪಕ್ಕ, ತೀಮಾಕಲಪಲ್ಲಿ ಕ್ರಾಸ್, ಭೂವೆನ್ನಲ ತಾಂಡದ ಮುಖ್ಯರಸ್ತೆಗೆ ಅಂಟಿಕೊಂಡ ಕೃಷಿ ಭೂಮಿ ಗಳು ಬಡಾವಣೆಗಳಾಗಿ

#### ಕೆರೆ ಕುಂಟೆಗಳನ್ನು ನುಂಗಿದ ಬಡಾವಣೆ

ಪಟ್ಟಣಕ್ಕೆ ಸದಾ ಕುಡಿಯುವ ನೀರಿನ ತಾಣಗಳು ಆಗಿರುವ ಪಟ್ಟಣದ ಬಾಲಾಜಿ ಬಾಜಿರಾಯನ ಕೆರೆ ಕೊರ್ಲಕುಂಟೆ ರೆಡ್ಡಿಕೆರೆಯರ್‍ರಕಾಲುವೆಯು ಬಡಾವಣೆ ನಿರ್ಮಾಣಕ್ಕೆ ಒತ್ತುವರಿಯಾಗಿದೆ. ಕೆರೆ ಕುಂಟೆ ಕಾಲುವೆಗಳನ್ನು ಮುಚ್ಚಿ ನೆಲಸಮ ಮಾಡಲಾಗಿದೆ. ಸರ್ಕಾರದ ನಕ್ಷೆಯಲ್ಲಿನ ಕೆರೆ ಕುಂಟೆ ಕಾಲುವೆಗಳ ಪ್ರದೇಶಗಳು ಇದೀಗ ಮಾಯವಾಗಿದೆ. ಜನವಸತಿ ಪ್ರದೇಶಗಳ ನಿರ್ಮಾಣದ ಕಟ್ಟಡಗಳ ನಿರ್ಮಾಣಕ್ಕೆ ಗಿಡ ಮರಗಳು ಮಾರಣಹೋಮವಾಗಿವೆ. ಕೃಷಿ ಯೋಗ್ಯ ಜಮೀನು ದುರ್ಬಳಕೆ ಆಗುತ್ತಿದೆ ಎಂದು ಜನರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಹೆಚ್ಚಿದ ವಾರಾಂತ್ಯದ ಪಾರ್ಟಿ! ಪಟ್ಟಣದ ಹೊರವಲಯದ ರೆಸಾರ್ಟ್‌ಗಳಲ್ಲಿ ಶನಿವಾರ ಭಾನುವಾರ ದೂರದ ಊರುಗಳಿಂದ ತಂಡೋತಂಡವಾಗಿ ಜನರು ಬರುತ್ತಾರೆ. ದಿನವೆಲ್ಲ ಕಾರುಗಳಲ್ಲಿ ಅಪರಿಚಿತರು ಓಡಾಡುತ್ತಾರೆ. ಈಜು ಮೋಜು ಪಾರ್ಟಿ ಮಾಡುತ್ತಿದ್ದಾರೆ. ರೆಸಾರ್ಟ್‌ಗೆ ಗ್ರಾಮಸ್ಥರ ಪ್ರವೇಶವಿಲ್ಲ. ಎಲ್ಲವೂ ಗುಪ್ತವಾಗಿ ನಡೆಯುತ್ತಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಸ್ಥಳೀಯವಾಗಿ ಇಡೀ ಸ್ವರೂಪವಾಗಿ ಬದಲಾಗುತ್ತದೆ. ಹೊರಗಿನವರದೇ ಕಾರು ದರ್ಬಾರು ಆಗುತ್ತದೆ ಎಂಬ ಭಯವು ಗ್ರಾಮಸ್ಥರಲ್ಲಿ ಮೂಡಿಸಿದೆ ಎಂದು ಗ್ರಾಮದ ಕೃಷ್ಣಪ್ಪ ತಿಳಿಸಿದ್ದಾರೆ.

ನಿರ್ಮಾಣ ಆಗುತ್ತಿವೆ. ಸುತ್ತಲೂ ತಡೆಗೋಡೆ ಹಾಕಿ, ರಸ್ತೆ, ಚರಂಡಿ, ಬೀದಿದೀಪಗಳು, ನಿವೇಶನ ಸಂಖ್ಯೆಗಳನ್ನು ಅಳವಡಿಸಲಾಗಿದೆ. ಮುಂದೊಮ್ಮೆ ಹೀಗೆ ಬೆಳೆದರೆ ಪಟ್ಟಣದ ಸುತ್ತಮುತ್ತಲಿನ ಕೃಷಿ ಭೂಮಿಯು ಮಾಯವಾಗಲಿದೆ.

ಸದಾ ಹಸಿರುಮಯದಿಂದ ಕೂಡಿದ ಬೆಟ್ಟ ಗುಡ್ಡಗಳು, ಅರಣ್ಯ ಪ್ರದೇಶಗಳು ಒತ್ತುವರಿಗೆ ಸಿಲುಕಿವೆ. ಅರಣ್ಯ, ಭೂಮಿ ಪ್ರದೇಶಗಳು ಕಡಿಮೆಯಾಗಿದೆ. ಇದರಿಂದ ಕೃಷಿ ಹಾಗೂ ಅರಣ್ಯ ಭೂಮಿ ಕಳೆದುಕೊಂಡು, ಆಹಾರ ಉತ್ಪಾದನೆಯಲ್ಲಿ ಭಾರಿ ಕುಂಠಿತ ಆಗುವ ಸಂಭವ ಹೆಚ್ಚಾಗಿದೆ. ಜನವಸತಿ ಬಡಾವಣೆಗಳಲ್ಲಿ ಪ್ರತಿಷ್ಠಿತ ಕಂಪನಿಯವರು ತಮ್ಮ ನಾಮಫಲಕ ಹಾಕಿರುವುದು ಕಂಡು ನಮಗೆ ಭೂಮಿಯೇ ಮಾಯವಾದಂತೆ ಗೋಚರಿಸುತ್ತಿದೆ ಎನ್ನುತ್ತಾರೆ ಗ್ರಾಮಸ್ಥರು. ಅಕ್ರಮವಾಗಿ ನಿರ್ಮಿಸುವ ಬಡಾವಣೆಗಳಿಗೆ ಕಡಿವಾಣ ಹಾಕಬೇಕು. ರಿಯಲ್ ಎಸ್ಟೇಟ್ ದಂಧೆಕೋರರು, ಕಾರ್ಪೋರೇಟ್ ಕಂಪನಿಗಳವರು ಕೃಷಿಭೂಮಿ ಖರೀದಿಗೆ ಮುಂದಾಗಿದ್ದಾರೆ. ರೈತರು ಹಣದಾಸೆಗೆ ಕಡಿಮೆಗೆ ಬೆಲೆಗೆ ಕೃಷಿಭೂಮಿಯನ್ನು ಮಾರಾಟ ಮಾಡಬಾರದು ಎಂದು ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಎಂ.ಪಿ.ಮುನಿವೆಂಕಟಪ್ಪ ತಿಳಿಸಿದ್ದಾರೆ.

## ಚುಟುಕು ಸಾಹಿತ್ಯ ಪರಿಷತ್‌ನಿಂದ ಮಹಿಳಾ ದಿನಾಚರಣೆ

• ಉದಯವಾಹಿನಿ, ರಾಮನಗರ

ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ದೊಡ್ಡದು. ಎಲ್ಲಾ ಸ್ತರಗಳಲ್ಲೂ ಕೆಲಸ ಮಾಡುತ್ತಿರುವ ಹೆಣ್ಣು ಅಬಲೆಯಾಗಿ ಉಳಿದಿಲ್ಲ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ನಾವು ಪ್ರೇರಣೆಯಾಗಿಟ್ಟುಕೊಂಡು, ನಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು ಎಂದು ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸವಿತಾ ಪಿ.ಆರ್ ಹೇಳಿದರು.

ನಗರದ ಬ್ಲಾಸಂ ಶಾಲೆಯಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಹಸನ್ಮುಖಿ ಚಾರಿಟೇಬಲ್ ಟ್ರಸ್ಟ್, ಜೈ ಭಾರತಿ ಸೇವಾ ಟ್ರಸ್ಟ್ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪರಿಷತ್ ಜಿಲ್ಲಾಧ್ಯಕ್ಷ ಅಂಬರೀಶ್ ಮಾತನಾಡಿ, 'ತಾಯಿ, ಪತ್ನಿ, ಸಹೋದರಿ ಸೇರಿದಂತೆ ವಿವಿಧ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸುವ ಮಹಿಳೆಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನವಿದೆ. ಆಕೆಯ ತ್ಯಾಗ ಮತ್ತು ಹೋರಾಟದ ಮನೋಭಾವ ಎಲ್ಲರಿಗೂ ಮಾದರಿಯಾದುದು' ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಪರಿಷತ್ ರಾಜ್ಯ ಸಂಚಾಲಕ ಡಾ. ಎಂ.ಜಿ.ಆರ್. ಅರಸು, 'ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿ ಸ್ಥಾನದಿಂದಿಡಿದು ಎಲ್ಲಾ ಹುದ್ದೆಗಳನ್ನು ಮಹಿಳೆ ಅಲಂಕರಿಸುವ ಮೂಲಕ ತನ್ನದೇ ಆದ ಸ್ಥಾನಮಾನ ಗಳಿಸಿದ್ದಾಳೆ. ಪರಿಷತ್ ಅಧ್ಯಕ್ಷ ಅಂಬರೀಶ್ ಈಗಾಗಲೇ 2 ಬಾರಿ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದು, ಈ ತಿಂಗಳು ಅವಧಿ ಮುಗಿದಿತ್ತು. ಅವರ ತಂಡದ ಕಾರ್ಯವೈಖರಿ ಗಮನಿಸಿ ಮುಂದಿನ ಅವಧಿಗೂ ಅಂಬರೀಶ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹೇಳಿದರು. ಕವಿಗಳಾದ ಪೂರ್ಣಚಂದ್ರ, ಮಲ್ಲೇಶ್ ಚೆನ್ನಮಾನಹಳ್ಳಿ, ರಾಘವೇಂದ್ರ, ಚಿಕ್ಕಣ್ಣ ಶಂಕರ್, ಪ್ರಭು ಅಂಜನಾಪುರ, ಮತ್ತಿಕೆರೆ ಚಲುವರಾಜ್, ಡಾ. ಹೇಮಂತ್ ಗೌಡ, ರಮೇಶ ಸಿ. ಹೊಸದೊಡ್ಡಿ ಕಾವ್ಯ ವಾಚನ ಮಾಡಿದರು.

## ಪ್ರವಾಸಿಗಳ ಸುರಕ್ಷತೆ ಮಾಲೀಕರದ್ದೇ ಹೊಣೆ: ಜಿಲ್ಲಾಧಿಕಾರಿ

• ಉದಯವಾಹಿನಿ, ಮಡಿಕೇರಿ

ತಮ್ಮಲ್ಲಿ ವಾಸ್ತವ್ಯ ಹೂಡುವ ಪ್ರವಾಸಿಗರ ಸುರಕ್ಷತೆಯ ಹೊಣೆ ಜಿಲ್ಲೆಯಲ್ಲಿರುವ ಹೋಂಸ್ಟೇ, ರೆಸಾರ್ಟ್ ಹಾಗೂ ವಸತಿ ಸಮುಚ್ಚಯಗಳ ಮಾಲೀಕರದ್ದೇ ಆಗಿದೆ. ಒಂದು ವೇಳೆ ದುರ್ಘಟನೆಗಳು ಸಂಭವಿಸಿದರೆ ಅದಕ್ಕೆ ಅವರೇ ಹೊಣೆಗಾರರಾಗುತ್ತಾರೆ ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಿಳಿಸಿದರು.



ಉದಯವಾಹಿನಿ ಚಿತ್ರ

ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಭದ್ರತೆ ಮತ್ತು ಸುರಕ್ಷತೆ ನಿರ್ವಹಿಸುವ ಕುರಿತು ಜಿಲ್ಲೆಯ ಹೋಟೆಲ್, ರೆಸಾರ್ಟ್, ಹೋಂ ಸ್ಟೇ, ಟ್ರಾವೆಲ್ಸ್ ಏಜೆನ್ಸಿ ಸಂಸ್ಥೆಯ ಪ್ರತಿನಿಧಿಗಳ ಜತೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೊಲೀಸ್ ಹಾಗೂ ಅರಣ್ಯ ಇಲಾಖೆಯಿಂದ ಪೂರ್ವಾನುಮತಿ ಪಡೆಯದೇ ನಿರ್ಜನ ಪ್ರದೇಶ, ಹೊರವಲಯ ಅಥವಾ ಅರಣ್ಯ ಪ್ರದೇಶಗಳಲ್ಲಿ ಸಂಭವಿಸುವ ದುರ್ಘಟನೆಗಳಿಗೆ ಆಯಾಯ ಹೋಂ-ಸ್ಟೇ ಮಾಲೀಕರೇ ಜವಾಬ್ದಾರರಾಗುತ್ತಾರೆ ಹಾಗೂ ಕಾನೂನಿನ್ವಯ ಶಿಕ್ಷಾರ್ಹ ಅಪರಾಧಕ್ಕೆ ಒಳಪಡುತ್ತಾರೆ ಎಂದೂ ಎಚ್ಚರಿಕೆ ನೀಡುತ್ತಾರೆ.

ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಹೆಚ್ಚಿನ ದೀಪದ ವ್ಯವಸ್ಥೆ ಮಾಡಬೇಕು. ಸುರಕ್ಷತಾ ಕ್ರಮಗಳನ್ನು ಇನ್ನಷ್ಟು ಹೆಚ್ಚಿಸಬೇಕು ಎಂದು ಸೂಚಿಸಿದರು.

ತುರ್ತು ಸಂದರ್ಭದಲ್ಲಿ ಜಿಲ್ಲೆಯ ಪೊಲೀಸ್ ಸಹಾಯವಾಣಿ ಸಂಖ್ಯೆ: 9480804900, ಜಿಲ್ಲೆಯ ವಿಪತ್ತು ನಿರ್ವಹಣಾ ಘಟಕ ಸಂಖ್ಯೆ: 08272-221077 ಸಂಪರ್ಕಿಸಬಹುದು. ಹಾಗೆಯೇ ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಮಹಿಳಾ ಮತ್ತು ಮಕ್ಕಳ ಸುರಕ್ಷತೆಗಾಗಿ ಅತೀ ಹೆಚ್ಚಿನ ಆದ್ಯತೆ ನೀಡಲೇಬೇಕು ಎಂದು ಅವರು ನಿರ್ದೇಶನ ನೀಡಿದರು. ಗಡಿ ಪ್ರದೇಶಗಳಾದ ಚೇಲಾವರ, ಇರ್ಪು, ದುಬಾರೆ ಮತ್ತಿತರ ಗಡಿ ಪ್ರದೇಶದಲ್ಲಿ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಹೋಂ-ಸ್ಟೇಗಳಲ್ಲಿ ನಿಯಮ ಬಾಹಿರ ಚಟುವಟಿಕೆಗಳು ಅಥವಾ ಯಾವುದೇ ರೀತಿ ದುರ್ಘಟನೆಗಳು ಸಂಭವಿಸಿದಲ್ಲಿ ಕಾನೂನು ರೀತಿಯ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇದುವರೆಗೆ ನೋಂದಣಿ ಆಗದಿರುವ ಹೋಂಸ್ಟೇಗಳು ಕಡ್ಡಾಯವಾಗಿ ನೋಂದಣಿ ಆಗಬೇಕು ಎಂದು ಹೇಳಿದರು.

## ಹೋಂಸ್ಟೇ ಅಸೋಸಿಯೇಷನ್‌ನಿಂದ ಮಾಹಿತಿ ಕಾರ್ಯಾಗಾರ

• ಉದಯವಾಹಿನಿ, ಸೋಮವಾರಪೇಟೆ:

ತಾಲ್ಲೂಕು ಹೋಂಸ್ಟೇ ಅಸೋಸಿಯೇಷನ್ ವತಿಯಿಂದ ಸಮೀಪದ ಹೊಸತೋಟ ಜಂಕ್ಷನ್ ಬಳಿಯಲ್ಲಿ ಅಳವಡಿಸಿರುವ ಪ್ರವಾಸೋದ್ಯಮ ಸ್ಥಳಗಳ ಸೂಚನಾ ಫಲಕವನ್ನು ಅಧ್ಯಕ್ಷ ಸಿ.ಕೆ. ರೋಹಿತ್ ಉದ್ಘಾಟಿಸಿದರು.

ನಂತರ ಮೌಂಟ್ರೋನ್ ರೆಸಾರ್ಟ್‌ನಲ್ಲಿ ನಡೆದ ಹೋಂಸ್ಟೇ ಅಸೋಸಿಯೇಷನ್ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಜಿಲ್ಲೆಗೆ ಸಾಕಷ್ಟು ಪ್ರವಾಸಿಗರು ಬರುತ್ತಿದ್ದು, ಹೆಚ್ಚಿನ ಸ್ಥಳಗಳಲ್ಲಿ ಸರಿಯಾದ ಮಾಹಿತಿ ಸಿಗುತ್ತಿಲ್ಲ. ಆದ್ದರಿಂದ ಪ್ರವಾಸಿಗರಿಗೆ ಸೂಕ್ತ



ಉದಯವಾಹಿನಿ ಚಿತ್ರ

> ಮಡಿಕೇರಿ ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷ ಮೋಹಂತಿ ಗಣೇಶ್, ಹೋಂಸ್ಟೇಗೆ ಸಂಬಂಧಪಟ್ಟ ಕಾನೂನು ನಿಯಮಗಳು, ನಿಬಂಧನೆಗಳು ಮತ್ತು ಮಾನದಂಡಗಳ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಿದರು.

ಮಾರ್ಗದರ್ಶನ ನೀಡುವ ಉದ್ದೇಶದಿಂದ ಆಯಾಕಟ್ಟಿನ ಸ್ಥಳಗಳಲ್ಲಿ ಮಾಹಿತಿ ಫಲಕಗಳನ್ನು ಅಳವಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಆಯಾಕಟ್ಟಿನ ಸ್ಥಳಗಳಲ್ಲಿ ಮಾಹಿತಿ ಫಲಕಗಳನ್ನು ಅಳವಡಿಸಲಾಗುತ್ತಿದ್ದು, ಎಲ್ಲಾ ಸದಸ್ಯರು ನಮ್ಮ ಕಾರ್ಯಕ್ಕೆ ಸಹಕಾರ ನೀಡಬೇಕು' ಎಂದು ಮನವಿ ಮಾಡಿದರು.

ಕಾರ್ಯಾಗಾರದಲ್ಲಿ ಮಡಿಕೇರಿ ಸಮಿತಿ ಉಪಾಧ್ಯಕ್ಷ ನವೀನ್ ಅಂಬೆಕಲ್, ತಾಲ್ಲೂಕು ಉಪಾಧ್ಯಕ್ಷರಾದ ಯೋಗೇಶ್ ಪಟೇಲ್, ಕಾರ್ಯದರ್ಶಿ ಅಭಿನಂದ್ ಹಾಗೂ ಹೋಂಸ್ಟೇ ಅಸೋಸಿಯೇಷನ್ ಸದಸ್ಯರು ಹಾಜರಿದ್ದರು.

# ಕೋಲಾರ ಕ್ಷೇತ್ರಕ್ಕಾಗಿ ಕಾಂಗ್ರೆಸ್ ಶಾಸಕರಿಬ್ಬರ ಜಟಾಪಟಿ

### ನಡೆದ ಕೋಮುಲ್ ವಿಶೇಷ ಸಾಮಾನ್ಯ ಸಭೆಯಲ್ಲಿ ಒಕ್ಕೂಟದ ಆಡಳಿತಾಧಿಕಾರಿ, ವ್ಯವಸ್ಥಾಪಕ ನಿರ್ದೇಶಕರ ನಡೆಯನ್ನು ಶಾಸಕ ಪ್ರಶ್ನಿಸಿದರು

• ಉದಯವಾಹಿನಿ, ಕೋಲಾರ

ಕೋಲಾರ ಜಿಲ್ಲಾ ಹಾಲು ಒಕ್ಕೂಟ (ಕೋಮುಲ್) ಹಾಗೂ ಡಿಸಿಸಿ ಬ್ಯಾಂಕ್ ಮೇಲಿನ ಹಿಡಿತದ ವಿಚಾರದಲ್ಲಿ ಜಿಲ್ಲಾ ಕಾಂಗ್ರೆಸ್ ಶಾಸಕರಲ್ಲೇ ಉಂಟಾಗಿರುವ ಬಣ ಜಗಳ ಮತ್ತೊಂದು ಸ್ವರೂಪ ಪಡೆದುಕೊಂಡಿದೆ. ಹಾಲು ಒಕ್ಕೂಟದ ಚುನಾವಣೆಗೆ ಕ್ಷೇತ್ರ ಮರುವಿಂಗಡಣೆ ನಿಗದಿಪಡಿಸಲು ಹೈಕೋರ್ಟ್ ಸೂಚನೆಯಂತೆ ಗುರುವಾರ ನಗರ ಹೊರವಲಯದ ಕಲ್ಯಾಣ ಮಂಟಪದಲ್ಲಿ ನಡೆದ ಒಕ್ಕೂಟದ ವಿಶೇಷ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಗದ್ದಲ, ಹಲ್ಲೆಯೊಂದಿಗೆ 'ಕೈ' ಶಾಸಕರಾದ ಮಾಲೂರಿನ ಕೆ.ವೈ.ನಂಜೇಗೌಡ ಬಣ ಹಾಗೂ ಬಂಗಾರಪೇಟೆಯ ಎಸ್.ಎನ್.ನಾರಾಯಣಸ್ವಾಮಿ ಬಣಗಳ ನಡುವೆ ಜಟಾಪಟಿ ನಡೆದಿದೆ.

'ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಗೋಪಾಲಮೂರ್ತಿ ಮೇಲೆ ಶಾಸಕ ಹಲ್ಲೆ ನಡೆಸಿದ್ದಾರೆ' ಎಂದು ನಂಜೇಗೌಡ, ಸ್ವಪಕ್ಷೀಯ ಶಾಸಕ ನಾರಾಯಣಸ್ವಾಮಿ ವಿರುದ್ಧವೇ ಆರೋಪಿಸಿದರು. ಇದಕ್ಕೆ ತಿರುಗೇಟು ನೀಡಿದ ನಾರಾಯಣಸ್ವಾಮಿ, 'ನಂಜೇಗೌಡ ಗೂಂಡಾ. ಗುಂಪುಕಟ್ಟಿಕೊಂಡು ಬಂದಿದ್ದಾನೆ' ಎಂದು ವಾಗ್ದಾಳಿ ನಡೆಸಿದರು.

ಹಾಲು ಒಕ್ಕೂಟಕ್ಕೆ ಒಟ್ಟು 13 ಕ್ಷೇತ್ರಗಳನ್ನು ಮರು ವಿಂಗಡಣೆ ಮಾಡಲಾಗಿತ್ತು. ಇದಕ್ಕೆ ಶಾಸಕ ನಾರಾಯಣಸ್ವಾಮಿ ವಿರೋಧ ವ್ಯಕ್ತಪಡಿಸಿದ್ದರು. ಕೋಲಾರ ತಾಲ್ಲೂಕು ವ್ಯಾಪ್ತಿಯ ಹುತ್ತೂರು ಹೋಬಳಿಯನ್ನು ಬಂಗಾರಪೇಟೆ ಕ್ಷೇತ್ರಕ್ಕೆ ಸೇರಿಸಬೇಕು ಎಂಬುದು



ಉದಯವಾಹಿನಿ ಚಿತ್ರ

ಅವರ ಒತ್ತಾಯವಾಗಿತ್ತು. ಕೆಲವರು ನ್ಯಾಯಾಲಯ ಮೊರೆ ಹೋಗಿ ಚುನಾವಣೆಗೆ ತಡೆಯಾಜ್ಞೆ ಕೂಡ ತಂದಿದ್ದರು. ಹೀಗಾಗಿ, ವಿಶೇಷ ಸಾಮಾನ್ಯ ಸಭೆ ನಡೆಸಿ ನಿರ್ಧರಿಸುವಂತೆ ನ್ಯಾಯಾಲಯ ಸೂಚಿಸಿತ್ತು. ಅದರಂತೆ ಸಭೆ ನಡೆದು 12 (5)ನಡಿ ಕ್ಷೇತ್ರ ಮರುವಿಂಗಡಣೆಗೆ ಬಹುಮತದೊಂದಿಗೆ ಅನುಮೋದನೆ ಲಭಿಸಿದೆ ಎಂದು ಒಕ್ಕೂಟದ ಆಡಳಿತಾಧಿಕಾರಿಯೂ ಆಗಿರುವ ಉಪವಿಭಾಗಾಧಿಕಾರಿ ಡಾ.ಎಚ್.ಪಿ.ಎಸ್.ಮೈತ್ರಿ ಪ್ರಕಟಿಸುತ್ತಿದ್ದಂತೆ ಗದ್ದಲ ಉಂಟಾಯಿತು. ಚರ್ಚೆಗೆ ಅವಕಾಶ ನೀಡಿಲ್ಲವೆಂದು ಎಸ್.ಎನ್.ನಾರಾಯಣಸ್ವಾಮಿ ಸೇರಿದಂತೆ ಹಲವರು ವೇದಿಕೆ ಮೇಲೇರಿದರು. ಅಲ್ಲದೇ, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಗೋಪಾಲಮೂರ್ತಿ ಅವರನ್ನು ತಳ್ಳಾಡಿದರು. ಕೆಲವರು ಹಲ್ಲೆ ಕೂಡ ನಡೆಸಿದರು. ಡಿವೈಎಸ್ಪಿ ಎಂ.ಎಚ್.ನಾಗ್ತೆ ನೇತೃತ್ವದಲ್ಲಿ ಮಧ್ಯ ಪ್ರವೇಶಿಸಿದ ಪೊಲೀಸರು ಗೋಪಾಲಮೂರ್ತಿ ಅವರನ್ನು ಕೊಠಡಿಗೆ ಕರೆದೊಯ್ದು ಬಾಗಿಲು ಹಾಕಿ ರಕ್ಷಣೆ ನೀಡಿದರು. ಮತ್ತೊಬ್ಬ ಅಧಿಕಾರಿ (ಮಾರುಕಟ್ಟೆ ವಿಭಾಗ) ಚೇತನ್ ಎಂಬುವರ ಮೇಲೂ ಹಲ್ಲೆ ನಡೆದಿದೆ. ನಂಜೇಗೌಡ ಬಣದವರು, 'ತಮಗೆ ಜಯ ಸಿಕ್ಕಿದೆ, ಶೇ 80ರಷ್ಟು ಸದಸ್ಯರು ತಮ್ಮ ಪರವಾಗಿದ್ದಾರೆ' ಎಂದು ಜೈಕಾರ ಹಾಕಿದರೆ, 'ಸಭೆ ಕಾನೂನು ಬಾಹಿರವಾಗಿ ನಡೆದಿದೆ. ಮೋಸ ನಡೆದಿದೆ. ನಮಗೆ ಮಾತನಾಡಲು ಬಿಟ್ಟಿಲ್ಲ, ನ್ಯಾಯಾಲಯದ ಆದೇಶ ಧಿಕ್ಕರಿಸಿದ್ದಾರೆ' ಎಂದು ಎಸ್.ಎನ್.ನಾರಾಯಣಸ್ವಾಮಿ ಬಣದವರು ಧಿಕ್ಕಾರ ಕೂಗಿದರು. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು.

ಈ ಗಲಾಟೆಯಲ್ಲಿ ಒಂದಿಷ್ಟು ಜೆಡಿಎಸ್, ಬಿಜೆಪಿ ಮುಖಂಡರು ನಂಜೇಗೌಡ ಪರವೂ, ಮತ್ತಷ್ಟು ಜೆಡಿಎಸ್, ಬಿಜೆಪಿ ಮುಖಂಡರು ನಾರಾಯಣಸ್ವಾಮಿ ಪರವಾಗಿ ನಿಂತದ್ದು ಕುತೂಹಲ ಮೂಡಿಸಿತು. ಕಾಂಗ್ರೆಸ್ ಶಾಸಕರ ಜಗಳದಲ್ಲಿ ಪರ, ವಿರೋಧ ನಿಂತರು.

ಈ ಕುರಿತು ಪ್ರತಿಕ್ರಿಯಿಸಿದ ಶಾಸಕ ನಾರಾಯಣಸ್ವಾಮಿ, 'ಇದು ಪಕ್ಷದ ವೇದಿಕೆ ಅಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಂಬುದು ಮುಖ್ಯವಲ್ಲ. ಜಿಲ್ಲೆಯ ಹಾಲು ಒಕ್ಕೂಟದ ವಿಚಾರ. ಸಹಕಾರ ಸಂಘದ ವಿಷಯ ಎಂದರು. ಬಳಿಕ ಜಿಲ್ಲಾಡಳಿತ ಭವನಕ್ಕೆ ತೆರಳಿದ ಅವರು ಜಿಲ್ಲಾಧಿಕಾರಿ ಎಂ.ಆರ್.ರವಿ ಜೊತೆ ಈ ವಿಚಾರ ಚರ್ಚಿಸಿದರು. ಆಡಳಿತಾಧಿಕಾರಿ ಆಗಿರುವ ಉಪವಿಭಾಗಾಧಿಕಾರಿಯನ್ನೂ ಭೇಟಿ ಮಾಡಿದರು.

#### ಶಾಸಕನಿಂದ ಎಂಡಿ ಮೇಲೆ ಹಲ್ಲೆ; ನಂಜೇಗೌಡ

ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು ನಮ್ಮ ಪರ ಕೈಎತ್ತಿದ್ದಕ್ಕೆ ನಮಗೆ ಬಹುಮತ ಸಿಕ್ಕಿದ್ದಕ್ಕೆ ಶಾಸಕರು ಅಧಿಕಾರಿಗಳ ಮೇಲೆ ದೌರ್ಜನ್ಯ ಎಸಗಿದ್ದಾರೆ. ಹಾಲು ಒಕ್ಕೂಟದ ವ್ಯವಸ್ಥಾಪಕ (ಎಂಡಿ) ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಕಾಂಗ್ರೆಸ್ ಶಾಸಕ ಒಕ್ಕೂಟದ ಮಾಜಿ ಅಧ್ಯಕ್ಷ ಕೆ.ವೈ.ನಂಜೇಗೌಡ ಸ್ವಪಕ್ಷೀಯ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಮೇಲೆ ಆರೋಪಿಸಿದರು.

#### ನಂಜೇಗೌಡ ಗೂಂಡಾ; ನಾನಲ್ಲ: ಶಾಸಕ ನಾರಾಯಣಸ್ವಾಮಿ

'ನಾನು ಯಾರ ಮೇಲೂ ಹಲ್ಲೆ ನಡೆಸಿಲ್ಲ. ನಂಜೇಗೌಡನೇ ಗೂಂಡಾ; ನಾವಲ್ಲ. ಒಕ್ಕೂಟದ ಸಭೆಯಲ್ಲಿ ಗಲಾಟೆಗೆ ಕಾರಣ ನಂಜೇಗೌಡ ಗುಂಪುಕಟ್ಟಿಕೊಂಡು ಬಂದಿದ್ದಾನೆ. ನಾನು ನ್ಯಾಯ ಕೇಳಲು ಒಬ್ಬಂಟಿಯಾಗಿ ಬಂದಿದ್ದೆ' ಎಂದು ಕಾಂಗ್ರೆಸ್ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಏಕವಚನದಲ್ಲಿ ತಿರುಗೇಟು ನೀಡಿದರು.


## ಮಿನಿ ನ್ಯೂಸ್

### ಚಿನ್ನದ ಸರಕ್ಕಾಗಿ ಪ್ರಾಣ ಸ್ನೇಹಿತೆಯನ್ನೇ ಕೊಂದ ಮಹಿಳೆ

• ಉದಯವಾಹಿನಿ, ಮೈಸೂರು

ಚಿನ್ನದ ಸರಕ್ಕಾಗಿ ತನ್ನ ಸ್ನೇಹಿತೆಯನ್ನೇ ಕೊಂದ ಮಹಿಳೆಯನ್ನು ನಜರಾಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕೆಸಿ.ಬಡಾವಣೆಯಲ್ಲಿ ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಕೆ.ಸಿ ಬಡಾವಣೆಯ ಸುಲೋಚನಾ (62) ಕೊಲೆಯಾದವರಾಗಿದ್ದು ಅದೇ ಬಡವಾಣೆ ನಿವಾಸಿ ಶಕುಂತಲಾ (42)ಎಂಬ ಆರೋಪಿಯನ್ನು ಬಂಧಿಸಲಾಗಿದೆ.

ಕೊಲೆಯಾದ ಸುಲೋಚನಾ ಪೊಲೀಸ್ ಇಲಾಖೆ ನಿವೃತ್ತ ನೌಕರ ಗಂಗಣ್ಣರ ಪತ್ನಿಯಾಗಿದ್ದು ಮನೆಗೆ ಬಂದ ಉಸಿರುಗಟ್ಟಿಸಿ ಶಕುಂತಲಾ ಳನ್ನು ಕೊಲೆ ಮಾಡಿ ಮೃತದೇಹದ ಮೇಲಿದ್ದ ಚಿನ್ನದ ಸರ ದೋಚಲಾಗಿತ್ತು. ಪ್ರಜ್ಞೆ ತಪ್ಪಿ ಬಿದ್ದು ಮೃತಪಟ್ಟಿದ್ದಾರೆಂದು ನಂಬಿಸಲಾಗಿತ್ತು ಆದರೆ ಅನುಮಾನದೊಂದಿಗೆ ಪೊಲೀಸರು ವಿಚಾರಣೆ ನಡೆಸಿದಾಗ ಸತ್ಯ ಬಯಲಾಗಿದೆ. ಶಕುಂತಲಾ ಕುಟುಂಬ ಅಡುಗೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು ಇತ್ತೀಚೆಗೆ ಸಾಲದ ಸುಳಿಯಲ್ಲಿ ಸಿಲುಕಿ ಅದನ್ನು ತೀರಿಸಲು ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಚಿನ್ನ ಸರ ಕದ್ದು 1.5 ಲಕ್ಷಕ್ಕೆ ಶಕುಂತಲಾ ಗಿರವಿ ಇಟ್ಟಿರುವುದು ಗೊತ್ತಾಗಿದೆ .ಪ್ರಸ್ತುತ ಆರೋಪಿಯನ್ನು ಬಂಧಿಸಿರುವ ನಜರಾಬಾದ್ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಉದಯವಾಹಿನಿ ಚಿತ್ರ

• ಉದಯವಾಹಿನಿ, ವಿಜಯಪುರ

**ಪಟ್ಟಣದ ಪುರಸಭೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕಾಂಗ್ರೆಸ್‌ನ ಭವ್ಯ ಮಧುರವರು ಜಿಲ್ಲಾ ಉಸ್ತುವಾರಿ ಸಚಿವರಾದ ಕೆಎಚ್ ಮುನಿಯಪ್ಪ ರವರನ್ನು ಅವರ ನಿವಾಸದಲ್ಲಿ ಪುರಸಭಾ ಕಾಂಗ್ರೆಸ್ ಸದಸ್ಯರು ಹಾಗೂ ಮುಖಂಡರುಗಳೊಂದಿಗೆ ಭೇಟಿ ಮಾಡಿ ಸಚಿವರನ್ನು ಅಭಿನಂದಿಸಿ ಪುರಸಭೆಯ ಅಭಿವೃದ್ಧಿಗೆ ಅನುದಾನಗಳನ್ನು ಒದಗಿಸಿ ಕೊಡಬೇಕೆಂದು ಕೋರಿದರು.**

### ಹಂಚಿಕುಪ್ಪೆ ಗ್ರಾ.ಪಂ.ಗೆ ಅಧ್ಯಕ್ಷೆ ಆಯ್ಕೆ

• ಉದಯವಾಹಿನಿ, ಮಾಗಡಿ



ತಾಲ್ಲೂಕಿನ ಹಂಚಿಕುಪ್ಪೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಶಿಲ್ಪಾ ಮಲ್ಲಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮ ಪಂಚಾಯಿತಿ ಆವರಣದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಿಲ್ಪಾ ಮಲ್ಲಣ್ಣ ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನಲೆ ಚುನಾವಣಾಧಿಕಾರಿ ಚಂದ್ರಶೇಖರ್ ಅವರನ್ನೇ ನೂತನ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಘೋಷಿಸಿದರು. ಈ ವೇಳೆ ಕಾಂಗ್ರೆಸ್ ಬೆಂಬಲಿತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಚಿತ್ರ, ಸದಸ್ಯರಾದ ಉಮೇಶ್, ಜಯಣ್ಣ, ಪುಷ್ಪಾ ಶಿವಕುಮಾರ್, ಪಂಚಲಿಂಗಯ್ಯ, ಶೋಭಾ ದೇವರಾಜ್, ನರಸಿಂಹಯ್ಯ, ಇಂದ್ರಮ್ಮ ಮುಖಂಡರಾದ ಮಂಚನಬೆಲೆ ಲೋಕೇಶ್, ರಂಗನಾಥ್, ಗುಡ್ಡಹಳ್ಳಿ ರವಿ, ಎ.ಬಿ.ಲೋಕೇಶ್, ಪ್ಯಾರಜಾನ್ ಸೇರಿದಂತೆ ಇತರರು ಇದ್ದರು.

### ಜೂಜಾಟ: 6 ಜನರ ಬಂಧನ

• ಉದಯವಾಹಿನಿ, ಹಲಗೂರು

ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲಾ ಹಿಂಭಾಗದ ಹೊರವಲಯದಲ್ಲಿ ಜೂಜಾಟದಲ್ಲಿ ತೊಡಗಿದ್ದ 6 ಮಂದಿಯನ್ನು ಬುಧವಾರ ಮಧ್ಯಾಹ್ನ ಹಲಗೂರು ಪೊಲೀಸರು ಬಂಧಿಸಿದ್ದಾರೆ. ಪಿಎಸ್ಐ ಲೋಕೇಶ ನೇತೃತ್ವದಲ್ಲಿ ದಾಳಿ ನಡೆಸಿ ಪಣಕ್ಕಿಟ್ಟಿದ್ದ 4500 ಸಾವಿರ ವಶಪಡಿಸಿಕೊಂಡು ಪ್ರಕರಣ ದಾಖಲಿಸಿ, ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಯಿತು.

ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಅನ್ನ ದಾಸೋಹಕ್ಕೆ ಚಾಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ನಾಗಮಂಗಲ

ತಾಲ್ಲೂಕಿನ ಆದಿಚುಂಚನಗಿರಿ ಜಾತ್ರಾ ಮಹೋತ್ಸವದ ಅಂಗ ಜಾತ್ರೆ ಆಗಮಿಸುವ ಭಕ್ತರಿಗಾಗಿ ದಾನಿಗಳು ಆಯೋಜಿಸಿದ್ದ ಅನ್ನದಾಸೋಹ ಕಾರ್ಯಕ್ರಮಕ್ಕೆ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ, ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಗುರುವಾರ ಬೆಳಿಗ್ಗೆ ಚಾಲನೆ ನೀಡಿದರು. ತಾಲ್ಲೂಕಿನ ಆದಿಚುಂಚನಗಿರಿ ಜಾತ್ರೆಯು ವಿಜೃಂಭಣೆಯಿಂದ ಜರುಗುತ್ತಿದ್ದು, ನಾಡಿನ ವಿವಿಧ ಭಾಗಗಳಿಂದ ಬರುತ್ತಿರುವ ಸಾವಿರಾರು ಭಕ್ತರಿಗೆ ತೊಂದರೆಯಾಗದಂತೆ ರಾಜ್ಯದ ವಿವಿಧ ಭಾಗಗಳ ದಾನಿಗಳು ಅನ್ನ ದಾಸೋಹವನ್ನು ಏರ್ಪಡಿಸಿದ್ದರು. ಸ್ವಾಮೀಜಿ ಅವರು ಪೂಜೆ ಸಲ್ಲಿಸಿ, ಭಕ್ತರಿಗೆ ಊಟ ಬಡಿಸುವ ಮೂಲಕ ಚಾಲನೆ ನೀಡಿದರು.

ಅರಿಶಿಣಕುಂಟೆಯ ರಾಜಮ್ಮ ಮತ್ತು ರಾಮಕೃಷ್ಣಪ್ಪ, ಭದ್ರಾವತಿ ಕಾಲಭೈರವೇಶ್ವರ ಜಾತ್ರಾ ಮಹೋತ್ಸವದ ಅನ್ನಸಂತರ್ಪಣಾ ಸೇವಾ ಟ್ರಸ್ಟ್, ತುರುವೇಕೆರೆ ಒಕ್ಕಲಿಗರ ಸಂಘದ ಸೇರಿದಂತೆ ವಿವಿಧ ದಾನಿಗಳು ಕ್ಷೇತ್ರದ ಐದು ಆಯಕಟ್ಟಿನ ಸ್ಥಳಗಳಲ್ಲಿ ಅನ್ನದಾಸೋಹ ಆಯೋಜಿಸಿದ್ದಾರೆ.

ದಾಸೋಹದಲ್ಲಿ ಬೂಂದಿ, ಪಾಯಸ, ಬಾದುಷಾ, ಪಲಾವ್, ಅನ್ನ ಸಂಬಾರ್, ಇಡ್ಲಿ, ಬೋಂಡಾ, ಮೊಸರನ್ನ ಸೇರಿದಂತೆ ವಿವಿಧ ಬಗೆಯ ಅಡುಗೆಗಳನ್ನು ಮಾಡಲಾಗಿದ್ದು, ತಯಾರಿಗಾಗಿ ಎರಡು ದಿನಗಳಿಂದ ನಿರಂತರ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜೊತೆಗೆ ಜಾತ್ರೆಯ ಸಮಯದಲ್ಲಿ ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ ಸೇರಿದಂತೆ ರಾತ್ರಿಯೂ ದಾಸೋಹ ನಡೆಸಲು ದಾನಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ. ಮಠದಿಂದಲೂ ದಾಸೋಹ ಭವನದಲ್ಲಿ ವಿಶೇಷ ಊಟೋಪಚಾರದ ವ್ಯವಸ್ಥೆಯನ್ನು ಭಕ್ತರಿಗಾಗಿ ಮಾಡಲಾಗಿದೆ.

ಅಂತರಾಳದಿಂದ.. EDITORIAL

# ರಾಜ್ಯಗಳ ವರಮಾನಕ್ಕೆ ಕತ್ತರಿ

## ಪ್ರತಿಗಾಮಿ ನಡೆ, ಅನುಚಿತ ಆಲೋಚನೆ



ಒಕ್ಕೂಟದ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಕೊಡುವ ಪಾಲನ್ನು ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರವು ಹಣಕಾಸು ಆಯೋಗಕ್ಕೆ ಹೇಳಲಿದೆ ಎಂಬ ವರದಿಗಳು ರಾಜ್ಯ ಸರ್ಕಾರಗಳ ತಲೆಬಿಸಿಗೆ ಕಾರಣವಾಗಿವೆ. ಈಗಿರುವ ನಿಯಮಗಳ ಪ್ರಕಾರ, ರಾಜ್ಯ ಸರ್ಕಾರಗಳಿಗೆ ಒಕ್ಕೂಟದ ತೆರಿಗೆ ಸಂಗ್ರಹದಲ್ಲಿ ಶೇಕಡ 41ರಷ್ಟು ಪಾಲು ಸಿಗುತ್ತಿದೆ. ಈ ಪಾಲನ್ನು ಶೇ 40ಕ್ಕೆ ತಗ್ಗಿಸಬೇಕು ಎಂದು ಕೇಂದ್ರವು ಆಯೋಗಕ್ಕೆ ಹೇಳಲಿದೆ ಎಂಬುದಾಗಿ ವರದಿಯಾಗಿದೆ. ಸಾಂವಿಧಾನಿಕವಾಗಿ ರಚನೆಯಾಗಿರುವ ಹಣಕಾಸು ಆಯೋಗವು ತೆರಿಗೆ ವರಮಾನವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಡುವೆ ಹೇಗೆ. ಯಾವ ಪ್ರಮಾಣದಲ್ಲಿ ಹಂಚಿಕೊಳ್ಳಬೇಕು ಎಂಬುದರ ಬಗ್ಗೆ ಶಿಫಾರಸು ಮಾಡುತ್ತದೆ. ಅರವಿಂದ ಪನಗರಿಯಾ ನೇತೃತ್ವದ 16ನೇ ಹಣಕಾಸು ಆಯೋಗವು ಈಗ ತೆರಿಗೆ ವರಮಾನ ಹಂಚಿಕೆ ವಿಚಾರವಾಗಿ ಸಮಾಲೋಚನೆಗಳನ್ನು ನಡೆಸುತ್ತಿದೆ. ಆಯೋಗವು ತನ್ನ ಶಿಫಾರಸುಗಳನ್ನು ಅಕ್ಟೋಬರ್ 31ಕ್ಕೆ ಮೊದಲು ಸಲ್ಲಿಸಲಿದೆ. ಈ ಶಿಫಾರಸುಗಳು 2026-27ನೇ ಆರ್ಥಿಕ ವರ್ಷದಿಂದ ಜಾರಿಗೆ ಬರಲಿವೆ. ಒಕ್ಕೂಟದ ತೆರಿಗೆ ವರಮಾನದಲ್ಲಿ ರಾಜ್ಯಗಳ ಪಾಲು 1980ರಲ್ಲಿ ಶೇಕಡ 20ರಷ್ಟು ಇದ್ದಿದ್ದು ಈಗ ಶೇ 41ಕ್ಕೆ ಬಂದಿದೆ. ಅಂದರೆ ಇದು ಕಾಲ ಕಳೆದಂತೆಲ್ಲ ಹೆಚ್ಚುತ್ತಾ ಸಾಗಿದೆ. ತೆರಿಗೆ ವರಮಾನದಲ್ಲಿ ರಾಜ್ಯಗಳ ಪಾಲು ಶೇ 40ರಷ್ಟು ಇದ್ದಿದ್ದನ್ನು 15ನೇ ಹಣಕಾಸು ಆಯೋಗವು ಶೇ 41ಕ್ಕೆ ಹೆಚ್ಚು ಮಾಡಿತ್ತು.

ಕೇಂದ್ರ ಸರ್ಕಾರದ ವೆಚ್ಚಗಳು ಹೆಚ್ಚಾಗಿರುವುದರ ಪರಿಣಾಮವಾಗಿ, ಅದರಲ್ಲೂ ಮುಖ್ಯವಾಗಿ ಆರ್ಥಿಕ ಬೆಳವಣಿಗೆ ದರವು ತಗ್ಗಿರುವ ಈ ಸಂದರ್ಭದಲ್ಲಿ, ರಾಜ್ಯಗಳ ತೆರಿಗೆ ವರಮಾನದ ಪಾಲನ್ನು ಕಡಿಮೆ ಮಾಡುವಂತೆ ಆಯೋಗವನ್ನು ಕೋರಲಾಗುತ್ತದೆ ಎಂದು ವರದಿಗಳು ಹೇಳುತ್ತವೆ. 2024-25ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 4.8ರಷ್ಟು ಇದೆ. ಇದೇ ಸಂದರ್ಭದಲ್ಲಿ ರಾಜ್ಯಗಳ ವಿತ್ತೀಯ ಕೊರತೆಯು ದೇಶದ ಜಿಡಿಪಿಯ ಶೇ 3.2ರಷ್ಟು ಇದೆ. ರಾಜ್ಯ ಸರ್ಕಾರಗಳು ಕೂಡ ಗಂಭೀರವಾದ ಹಣಕಾಸಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಹೊತ್ತಿನಲ್ಲಿ ಅವುಗಳ ತೆರಿಗೆ ವರಮಾನದ ಪಾಲನ್ನು ಕಡಿಮೆ ಮಾಡುವಂತೆ ಹೇಳಲು ವಿತ್ತೀಯ ಕೊರತೆಯ ಪ್ರಮಾಣವು ಸರಿಯಾದ ಕಾರಣ ಆಗುವುದಿಲ್ಲ. 2017ರಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ಬಂದ ನಂತರದಲ್ಲಿ ತಮ್ಮ ವರಮಾನವನ್ನು ಹೆಚ್ಚು ಮಾಡಿಕೊಳ್ಳುವ ವಿಚಾರದಲ್ಲಿ ರಾಜ್ಯ ಸರ್ಕಾರಗಳ ಅಧಿಕಾರವು ಬಹಳ ಸೀಮಿತವಾಗಿದೆ. ತೆರಿಗೆ ವರಮಾನದಲ್ಲಿ ರಾಜ್ಯಗಳ ಪಾಲು ಶೇ 41ರಷ್ಟು ಇರುವುದನ್ನು ಶೇ 40ಕ್ಕೆ ಕಡಿಮೆ ಮಾಡಿದರೆ, ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿಯಾಗಿ ರೂ.35 ಸಾವಿರ ಕೋಟಿ ಸಿಗುತ್ತದೆ. ಆದರೆ, ರಾಜ್ಯಗಳ ವರಮಾನ ತಗ್ಗಿ ಅವುಗಳ ಪಾಲಿಗೆ ಸಮಸ್ಯೆ ಎದುರಾಗುತ್ತದೆ. ವಿವಿಧ ಸೆಸ್ ಹಾಗೂ ಸರ್ಚಾರ್ಜ್‌ಗಳ ಮೂಲಕ ತಾನು ಪಡೆಯುವ ವರಮಾನವನ್ನು ಕೇಂದ್ರ ಸರ್ಕಾರವು ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ಇಂತಹ ವರಮಾನವು ಕೇಂದ್ರದ ಒಟ್ಟು ವರಮಾನದ ಶೇಕಡ 15ರಷ್ಟು ಇದೆ. ಈ ವರಮಾನವನ್ನು ಕೂಡ ಲೆಕ್ಕಕ್ಕೆ ತೆಗೆದುಕೊಂಡರೆ, ರಾಜ್ಯಗಳ ಪಾಲಿಗೆ ಸಿಗುವುದು ಶೇ 41ಕ್ಕಿಂತ ಕಡಿಮೆ ಎಂಬ ಅಂದಾಜು ಇದೆ.

ಹಲವು ರಾಜ್ಯಗಳು ವರಮಾನ ಹಂಚಿಕೆಯ ಪ್ರಮಾಣವನ್ನು ಶೇ 41ರ ಬದಲು ಶೇ 50ಕ್ಕೆ ಹೆಚ್ಚಿಸಬೇಕು ಎಂಬ ಆಗ್ರಹ ಮಂಡಿಸಿವೆ. ವೆಚ್ಚಗಳು ಹೆಚ್ಚಾಗುತ್ತಿದ್ದರೂ ತಮಗೆ ವರಮಾನ ಹೆಚ್ಚಿಸಿಕೊಳ್ಳಲು ಮಾರ್ಗೋಪಾಯ ಇಲ್ಲದಿರುವುದನ್ನು ರಾಜ್ಯಗಳು ತಮ್ಮ ಆಗ್ರಹಕ್ಕೆ ಕಾರಣವನ್ನಾಗಿ ಉಲ್ಲೇಖಿಸಿವೆ. ಅರ್ಥ ವ್ಯವಸ್ಥೆಯಲ್ಲಿ ಸರ್ಕಾರಗಳಿಂದ ಆಗುವ ವೆಚ್ಚದಲ್ಲಿ ರಾಜ್ಯ ಸರ್ಕಾರಗಳ ಪಾಲು ಶೇ 60ಕ್ಕಿಂತ ಹೆಚ್ಚಿದೆ. ರಾಷ್ಟ್ರೀಯ ವರಮಾನಕ್ಕೆ ತಾವು ನೀಡುವ ಕೊಡುಗೆಗೆ ಹೋಲಿಸಿದರೆ ತಮಗೆ ಸಿಗುವ ಮೊತ್ತ ಬಹಳ ಕಡಿಮೆ ಎಂಬ ಅಸಮಾಧಾನವು ದಕ್ಷಿಣದ ರಾಜ್ಯಗಳಲ್ಲಿ ಈಗಾಗಲೇ ಇದೆ. ರಾಜ್ಯಗಳ ತೆರಿಗೆ ವರಮಾನದ ಪಾಲನ್ನು ತಗ್ಗಿಸುವ ಆಲೋಚನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ. ಹಣಕಾಸು ಆಯೋಗವನ್ನು ರಾಜ್ಯಗಳ ಹಕ್ಕು ಹತ್ತಿಕ್ಕುವ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಕೇಂದ್ರ ಯತ್ನಿಸುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಂದ್ರದ ಆಲೋಚನೆಯು ಪ್ರತಿಗಾಮಿ. ಇದು ಒಕ್ಕೂಟ ವ್ಯವಸ್ಥೆಯಲ್ಲಿನ ಸಂಬಂಧವನ್ನು ಇನ್ನಷ್ಟು ಹಾಳು ಮಾಡುತ್ತದೆ.

---



ವಿಶ್ವಾಸ್.ಡಿ.ಗೌಡ
ಉದಯವಾಹಿನಿ, ವಿಶೇಷ

# ಚಿಣ್ಣರ ಸೌರಭ



## ಮಕ್ಕಳ ಕಲಿಕಾ ಪ್ರಕ್ರಿಯೆ

ಶ್ರೀ ಧನಂಜಯ ಪಾಂಡವಪುರ ಶಿಕ್ಷಕ ಸಾಹಿತಿ. ರಚನೆಯ 'ಚಿಣ್ಣರ ಸೌರಭ'ವು ಮಕ್ಕಳ ಆಸಕ್ತಿ ಅಭಿರುಚಿ ಮನಸ್ಥಿತಿಯನ್ನು ಅರಿತಿರುವ ಒಬ್ಬ ಕ್ರಿಯಾಶೀಲ ಶಿಕ್ಷಕ ತನ್ನ ವೃತ್ತಿಗೆ ಮಕ್ಕಳ ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ಬೇಕಾಗಿರುವ ಅಗತ್ಯ ಕೈಪಿಡಿಯನ್ನು ಸಿದ್ಧಪಡಿಸಿಕೊಂಡಿರುವಂತಿದೆ.

ಶೈಕ್ಷಣಿಕ, ಜೀವನ ಮೌಲ್ಯಗಳನ್ನು ಸಾರುವ ಸಣ್ಣ ಕಥೆಗಳು ಹಾಗೂ ಪದ್ಯಗಳನ್ನು ಸರಳ ಪದಗಳ ಬಳಕೆಯಿಂದ ರಚಿಸಿರುವುದು ಶ್ಲಾಘನೀಯ. ಮಕ್ಕಳಿಗಲ್ಲದೆ ಶಿಕ್ಷಕರು. ಶಿಕ್ಷಕಿಯರು ಪೋಷಕರು ಎಲ್ಲರೂ ಓದಬಹುದಾದ ಕೃತಿ ಇದಾಗಿದೆ.


ಪ್ರಾಥಮಿಕ ಶಾಲಾ ಹಂತದ ಮಕ್ಕಳಿಗೆ ಈ ಕೃತಿ ಹೆಚ್ಚು ಉಪಯುಕ್ತವಾದದ್ದು ಎನಿಸಿದೆ. ಶಿಕ್ಷಕರು ನೇರವಾಗಿ ಶಾಲೆಗಳು ಪ್ರಾರಂಭವಾದ ತಕ್ಷಣ ಪಾಠ ಪ್ರವಚನಕ್ಕೆ ಧುಮುಕದೆ ಮಕ್ಕಳ ಅವಧಾನವನ್ನು ಸೆಳೆದು ತಮ್ಮ ಶೈಕ್ಷಣಿಕ ಗುರಿ ಉದ್ದೇಶಗಳನ್ನು ಸಾಧಿಸುವಲ್ಲಿ ಇದು ಸಹಕಾರಿಯಾಗಿದೆ. ಭಾಷೆಯ ಪಾಠ, ಪದ್ಯಗಳನ್ನು ಬೋಧಿಸುವಾಗ ಪೂರಕ ಓದು ಹಾಗೂ ಕಲಿಕೆಗಾಗಿ ಈ ಕೃತಿಯನ್ನು ಬಳಸಿಕೊಳ್ಳಬಹುದು ಹಾಗೂ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಸಲು ಅನುಕೂಲಕರವಾಗಿದೆ. ಸಣ್ಣ ಕಥೆಗಳಂತೂ ಮಕ್ಕಳು ಕಲ್ಪನಾ ಲೋಕದಲ್ಲಿ ವಿಹರಿಸುವಂತೆ ಮಾಡುವ ದಾಟಿಯಲ್ಲಿವೆ.

ಹಾಸ್ಯ ಪ್ರಜ್ಞೆಯನ್ನು ಹಾಗೂ ಜೀವನ ಕೌಶಲಗಳನ್ನು ಹಾಗೂ ಮಾನವೀಯ ಮೌಲ್ಯಗಳು ಬುದ್ದಿವಂತಿಕೆ ಇವುಗಳನ್ನೆಲ್ಲ ಒಳಗೊಂಡಿವೆ.

ಈ ಪೈಕಿ ಕೆಲವು ಸಣ್ಣ ಕಥೆಗಳು ನಾವು ಕೇಳಿ ಬೆಳೆದಿರುವ ನೀತಿ ಕಥೆಗಳ ಮುಂದುವರಿದ ಭಾಗವಾಗಿ ಉತ್ತಮವಾಗಿ ರಚಿಸಲ್ಪಟ್ಟಿವೆ. ಪ್ರಾಸ ಪದ್ಯಗಳಂತೂ ಮಕ್ಕಳು ತಮ್ಮ ಗೆಳೆಯರೊಡನೆ ನಕ್ಕು ನಲಿದು ಆಡುತ್ತಾ, ಹಾಡುತ್ತಾ ಕಲಿಯುವ ತೆರದಲ್ಲಿದೆ .

ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಕೃತಿಯು ಸರಳ ಸುಂದರ ಹಾಗೂ ಔಚಿತ್ಯಪೂರ್ಣ ಎನ್ನಬಹುದು. ಯಾವುದೇ ಗೊಂದಲಗಳಿಗೆ ಅವಕಾಶ ನೀಡದೆ ಸರ್ವ ಧರ್ಮ ಸಮಾನತೆಯನ್ನು, ಏಕತೆಯ ಮಂತ್ರವನ್ನು ಸಾರುವ ಪದ್ಯಗಳಿರುವ ಚಿಣ್ಣರ ಸೌರಭ ಕೃತಿಯನ್ನು ಲೇಖಕರು ರಚಿಸಿರುವುದು ಅನುಕರಣೀಯವೆನಿಸುತ್ತದೆ. ಶಿಕ್ಷಕ ಸಾಹಿತಿಯೂ ಆದ ಧನಂಜಯ ಪಾಂಡವಪುರ ಇವರು ಈಗಾಗಲೇ ಪ್ರೇಮ ಲೀಲಾ ಕವನ ಸಂಕಲನ ಹಾಗೂ ಸ್ಫೂರ್ತಿ ಸೌರಭ ಎಂಬ ಸಮಾಜ ಶೀಲ ಚಿಂತನೆಗಳ ಕೃತಿಗಳನ್ನು ಹೊರತಂದು.

ಸಾವಿರಾರು ಪುಸ್ತಕಗಳನ್ನು ಉಚಿತವಾಗಿ ಶಾಲೆಗಳಿಗೆ ಹಾಗೂ ಸಾಹಿತ್ಯ ಆಸಕ್ತರಿಗೆ ಪುಸ್ತಕ ಪ್ರೇಮಿಗಳಿಗೆ ಹಂಚುವುದರ ಮೂಲಕ ಅಪಾರ ಓದುಗರ ಬಳಗವನ್ನು ಸೃಷ್ಟಿಸಿಕೊಂಡಿದ್ದಾರೆ. ಈಗ ಈ ಕೃತಿಯನ್ನು ಮಕ್ಕಳ ಹಿತದೃಷ್ಟಿಯಿಂದ ಚಿಣ್ಣರ ಸೌರಭವನ್ನು ಜವಾಬ್ದಾರಿಯುತವಾಗಿ ರಚಿಸಿದ್ದಾರೆ. ಮಕ್ಕಳಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಇವರ ಆಶಯವನ್ನು ಚಿಣ್ಣರ ಸೌರಭ ಕೃತಿಯ ಮೂಲಕ ಸಾಧಿಸಲು ಹೊರಟಿರುವುದು ಪ್ರಶಂಸನೀಯ ಹಾಗೂ ಹೆಮ್ಮೆ ಎನಿಸುತ್ತದೆ. ಇವರಿಂದ ಇನ್ನೂ ಹೆಚ್ಚಿನ ಸಾಹಿತ್ಯಗಳು ಶೈಕ್ಷಣಿಕ ಕ್ಷೇತ್ರಕ್ಕೆ ಪೂರಕವಾಗಿ ಲೋಕಾರ್ಪಣೆಗೊಳ್ಳಲಿ ಎಂದು ಶ್ರೀಯುತರಿಗೆ ಶುಭವಾಗಲಿ ಎಂದು ಹಾರೈಸುತ್ತೇನೆ.




---

# ರಂಗು ರಂಗಿನಾಟ

ರಂಗಳೆಯ ದಿನಗಳು ಈಗಿಲ್ಲ, ಆಗಿನ ಮೋಜು
ಇಲ್ಲವೇ ಇಲ್ಲ ರಂಗು ಚಲ್ಲಲು
ಪರಿಚಯವೇ ಬೇಕಿರಲಿಲ್ಲ
ಮೈಯಲ್ಲಿ ಹೋಳಿಯ
ಜೋಶ್ ಒಂದಿದ್ದರೆ
ಸಾಕಿತ್ತು ,
ಈಗೋ ಹುಡುಗರು ಶರ್ಟ್ ಬಿಚ್ಚಿ ಅರೆಬೆತ್ತಲಾಗಿ
ಹುಡುಗೀರ ಮುಂದೆ ಡೋಲು ಹೊಡೆಯುತ್ತಾ
ಕುಣಿ ಕುಣಿಯುತಲೇ
ಗುಂಪಲ್ಲೇ ನೀರು, ಬೀರು ಗಂಟಲಿಗಿಳಿಸಿ. ತಾವು
ತಾವೇ ಆಚರಿಸುವರು ಹೋ...ಹೋ....ಹೋಳಿ
ಹೃದಯದ ಒಳ ಬಣ್ಣ
ಹೊರ ಚೆಲ್ಲಿ, ಕೆಡುಕ
ಗೆಲ್ಲುವ, ವಿಷ ಉಗುಳಿ
ಅಮೃತ ಉಕ್ಕಿಸುವ
ಬಿಟ್ಟ ಸಂಬಂಧಗಳ
ಗಟ್ಟಿಗೊಳಿಸುವ
ಹೋ...ಹೋ....ಹೋಳಿ
ಕಣ್ಣು ಹೊಡೆವ ರಂಗಿನ
ಹುಡುಗ ಯಾರೆಂದು ತಿಳಿಯದೆ ಪರಿತಪಿಸುವ
ಹುಡುಗಿಯರು
ಬಚ್ಚನ್‌ನ ರಂಗ್ ಬರಸೆಗೆ
ತಾಳ ಹಾಕುವ ಹದಿ ಹರೆಯ ದಾಟಿದ ಹೆಂಗಳೆಯರು
The young lady ರೇಖಾಳನು ನೆನೆಯುತ
ಎನುವರು ಹಾಯ್.. ಹಾಯ್. ಹೋಳಿ
We go back to the history
ಕೃಷ್ಣನ ನೀಲಿ ರಂಗು.
ಕಾಲ್ದುಳಿನ ಗುಲಾಬಿ ರಂಗು
ಬಣ್ಣ ಎರಚದೆ ರಾಧೆಯ ಗಲ್ಲ ಕೆಂಪಾಗಿಸಿತು
ಎನುವುದ ಬಲ್ಲವರಿಲ್ಲ
ಆದರೂ ಕೃಷ್ಣ 16 ಸಾವಿರ
ನಾರಿಯರ ಮನ ಗೆದ್ದಿದ್ದ.
ಹೋಲಿರೇ ಹೋಲಿ
ರಂಗೋಂಕಿ ಹೋಲಿ
ಬೇಡಿಕೊಂಡರು ನಾರಿಯರು
ಬೇಡ ಕೃಷ್ಣ ರಂಗಿನಾಟ ಸೀರೆ ನೆನೆವುದು
ಹೌದಲ್ವ? ಅದೇ ಈಗಲೂ ನಡೆದಿದೆ
ರೂಪ ಬೇರೆಯಷ್ಟೇ ಹೋ. ... ಹೋ. ಹೋಲಿ
ಹೋಲಿಗಾಗಿ ಕಿಕ್ ಕೊಡುವ ತಮಾಷೆ
ಕವನ ಮೈ ಬಣ್ಣ ಬದಲಿಸಿ ಓದಿ

■ ಗುಜ್ಜರ್ ದಾವಣಗೆರೆ



---




# ಸಣ್ಣ ವಯಸ್ಸಿಗೆ ಕಿಡ್ನಿಗಳಲ್ಲಿ ಸಮಸ್ಯೆ!

ಜೀವನಶೈಲಿ, ಆಹಾರ ಕ್ರಮದಿಂದಲೇ ಹೆಚ್ಚಿನ ಆರೋಗ್ಯ ಸಮಸ್ಯೆಗಳು ಬರುವುದು. ಅದರಲ್ಲೂ ನೀವು ಸೇವನೆ ಮಾಡುವಂತಹ ಕೆಲವು ಆಹಾರಗಳು, ಅಭ್ಯಾಸಗಳು ಕಿಡ್ನಿಗೂ ಹಾನಿ ಉಂಟು ಮಾಡಬಹುದು. ಈ ಬಗ್ಗೆ ವೈದ್ಯರು ಹೇಳುವ ಪ್ರಕಾರ 25 ವರ್ಷ ಮೇಲ್ಪಟ್ಟ ಪುರುಷರು ಹಾಗೂ ಮಹಿಳೆಯರಿಗೆ ಕಿಡ್ನಿ ಸಮಸ್ಯೆ ಕಾಡುವ ಸಾಧ್ಯತೆ ಜಾಸ್ತಿ ಇರುತ್ತದೆ. ಆದರೆ ಅದು ಅವರ ಜೀವನ ಶೈಲಿಯ ಮೇಲೆ ನಿಂತಿರುತ್ತದೆ ಎಂಬುದು ಹಲವಾರು ತಜ್ಞರ ಮಾತು. ಮನುಷ್ಯನ ದೇಹದಲ್ಲಿ ಕಂಡು ಬರುವ ಬಹು ಮುಖ್ಯ ಅಂಗಾಂಗಗಳಲ್ಲಿ ಮೂತ್ರಪಿಂಡಗಳ ಅಥವಾ ಕಿಡ್ನಿಗಳು ಕೂಡ ಸೇರಿರುತ್ತವೆ. ದೇಹದ ಒಳಗಿರುವ ಒಂದೊಂದು ಅಂಗಾಂಗಕ್ಕೆ ಒಂದೊಂದು ಬಗೆಯ ಕಾರ್ಯ ನಿರ್ವಹಣೆಯ ಜವಾಬ್ದಾರಿ ಇರುತ್ತದೆ. ಅದೇ ರೀತಿ ಕಿಡ್ನಿಗಳಿಗೆ ನಮ್ಮ ದೇಹದಲ್ಲಿ ಕಂಡು ಬರುವ ವಿಷಕಾರಿ ಅಂಶಗಳನ್ನು ಮೂತ್ರ ವಿಸರ್ಜನೆಯ ಮೂಲಕ ಹೊರ ಹಾಕುವ ಕೆಲಸ ಇರುತ್ತದೆ. ಹೀಗಾಗಿ ಕಿಡ್ನಿಗಳು ಸರಿಯಾಗಿ ಕಾರ್ಯನಿರ್ವಹಿಸಬೇಕಾದರೆ ನಮ್ಮ ಆಹಾರ ಪದ್ಧತಿ ಬಹಳ ಮುಖ್ಯವಾಗುತ್ತದೆ. ನಾವು ಆಹಾರದಲ್ಲಿ ಸೇವನೆ ಮಾಡುವ ವಿವಿಧ ಬಗೆಯ ಪೋಷಕಾಂಶಗಳು, ಖನಿಜಾಂಶಗಳು ಹಾಗೂ ವಿಟಮಿನ್ ಅಂಶಗಳು, ಕಿಡ್ನಿಗಳ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ವೈದ್ಯರು ಹೇಳುತ್ತಾರೆ. ಆದರೆ ಇಂದಿನ ಜೀವನಶೈಲಿ, ಆಹಾರ ಕ್ರಮ ಇತ್ಯಾದಿಗಳಿಂದ ಕಿಡ್ನಿಯ ಮೇಲಿನ ಒತ್ತಡವು ಹೆಚ್ಚಾಗುತ್ತಲಿದೆ. ಬಾಯಿಗೆ ರುಚಿಸಿದ್ದನ್ನು ತಿನ್ನುವುದರಿಂದ ಅಂಗಾಂಗಗಳ ಮೇಲಿನ ಒತ್ತಡವು ಹೆಚ್ಚಾಗಿ, ಕೊನೆಗೆ ಇದು ವೈಫಲ್ಯಕ್ಕೆ ಒಳಗಾಗುವುದು. ಕಿಡ್ನಿಗೆ ಸಂಬಂಧಿಸಿದ ಕಾಯಿಲೆಗಳು ಸೇರಿದಂತೆ ಇಂದಿನ ದಿನಗಳಲ್ಲಿ ಹಲವಾರು ರೀತಿಯ ಸಮಸ್ಯೆಗಳು ದೇಹವನ್ನು ಕಾಡುವುದು. ಹೀಗಾಗಿ ಕಿಡ್ನಿಯ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತೀ ಅಗತ್ಯ. ದೆಹಲಿಯ ಶ್ರೀ ಬಾಲಾಜಿ ಆ್ಯಕ್ಷನ್ ಮೆಡಿಕಲ್ ಇನ್‌ಸ್ಟಿಟ್ಯೂಟ್‌ನ ನೆಫ್ರಾಲಜಿ ಮತ್ತು ಕಿಡ್ನಿ ಕಸಿಯ ನಿರ್ದೇಶಕ ಡಾ. ರಾಜೇಶ್ ಅಗರ್ವಾಲ್ ಅವರು ಹೇಳುವ ಪ್ರಕಾರ, ಕಿಡ್ನಿಗೆ ಸಂಬಂಧಿಸಿದ ಸಮಸ್ಯೆಗಳು ಇಂದಿನ ದಿನಗಳಲ್ಲಿ ಹೆಚ್ಚಾಗುತ್ತಲಿದೆ. ಅದರಲ್ಲೂ 25 ಹರೆಯದ ಬಳಿಕ ಕಿಡ್ನಿಯ ಕಾರ್ಯನಿರ್ವಹಿಸುವಂತಹ ಸಾಮರ್ಥ್ಯವು ಕುಗ್ಗುತ್ತಿದೆ. ಜೀವನಶೈಲಿಯಲ್ಲಿನ ಕೆಲವೊಂದು ಅಭ್ಯಾಸಗಳನ್ನು ಸರಿಪಡಿಸಿಕೊಳ್ಳದೆ ಇದ್ದರೆ ಆಗ ಇದರಿಂದ ಗಂಭೀರ ಸಮಸ್ಯೆಗಳು ಬರುವುದು. ಕಿಡ್ನಿಗೆ ಹಾನಿಯುಂಟು ಮಾಡುವ ಕೆಲವೊಂದು ಅಭ್ಯಾಸಗಳ ಬಗ್ಗೆ ತಿಳಿದುಕೊಂಡರೆ ಒಳ್ಳೆಯದು. ನಿಮ್ಮ ಕಿಡ್ನಿಗಳ ಆರೋಗ್ಯಕ್ಕೆ ಬೇಕಾದ ಸರಿಯಾದ ವಿಟಮಿನ್ ಅಂಶಗಳು ಇವೇ ನೋಡಿ



**ಸರಿಯಾಗಿ ನೀರು ಕುಡಿಯದೆ ಇರುವುದು**

ಕೆಲವರು ದಿನವಿಡಿ ಸರಿಯಾಗಿ ನೀರು ಕುಡಿಯುವುದೇ ಇಲ್ಲ. ಇದರಿಂದಾಗಿ ಕಿಡ್ನಿಗೆ ಹೆಚ್ಚಿನ ಒತ್ತಡ ಬೀಳುವುದು. ಹೀಗಾಗಿ ಪ್ರತಿನಿತ್ಯ ಸೂಕ್ತ ಪ್ರಮಾಣದಲ್ಲಿ ನೀರು ಕುಡಿದರೆ ಆಗ ಇದರಿಂದ ಕಿಡ್ನಿ ಆರೋಗ್ಯವು ಉತ್ತಮವಾಗುವುದು. ಕಡಿಮೆ ನೀರು ಕುಡಿದ ವೇಳೆ ಅದರಿಂದ ದೇಹದಲ್ಲಿ ವಿಷಕಾರಿ ಅಂಶಗಳು ಮತ್ತು ಕೆಲವೊಂದು ಅಂಶಗಳು ಹಾಗೆ ದೇಹದಲ್ಲಿ ಉಳಿದುಕೊಳ್ಳುವುದು. ಇದನ್ನು ಕಿಡ್ನಿಯು ತೆಗೆಯಲು ಅಸಮರ್ಥವಾಗುವುದು. ಇನ್ನು ವೈದ್ಯರು ಹೇಳುವ ಪ್ರಕಾರ ಆಹಾರ ಪದಾರ್ಥ ತ್ಯಾಜ್ಯವಾಗಿ ಮೂತ್ರದ ರೂಪದಲ್ಲಿ ಹೊರ ಹೋಗುವ ಸಂದರ್ಭದಲ್ಲಿ ಕಿಡ್ನಿಗಳಲ್ಲಿ ಕಲ್ಲುಗಳ ರೂಪ ತಾಳುತ್ತದೆ. ಹೀಗಾಗಿ ಇದು ಆಗಬಾರದು ಎಂದರೆ ನೀವು ಹೆಚ್ಚಾಗಿ ನೀರನ್ನು ಕುಡಿಯಬೇಕು ಮತ್ತು ನಿಮ್ಮ ದೇಹದಿಂದ ಎಲ್ಲಾ ಕಲ್ಮಶಗಳನ್ನು ಹೊರ ಹಾಕಬೇಕು.

**ಅತಿಯಾದ ಉಪ್ಪು ಮತ್ತು ಜಂಕ್ ಫುಡ್**

ನಿಮಗೆ ಗೊತ್ತಿರಲಿ ನಮ್ಮ ಆರೋಗ್ಯಕ್ಕೆ ನಿಯಮಿತ ಪ್ರಮಾಣದಲ್ಲಿ ಮಾತ್ರ ಇದರಲ್ಲಿರುವ ಸೋಡಿಯಂ ಮತ್ತು ಕ್ಲೋರೈಡ್ ಅಂಶದ ಪ್ರಮಾಣ ಬೇಕಾಗುತ್ತದೆ. ಒಂದು ವೇಳೆ ಉಪ್ಪಿನಾಂಶ ಹೆಚ್ಚಿರುವ ಆಹಾರಗಳನ್ನು ಅತಿಯಾಗಿ ಸೇವಿಸುತ್ತಾ ಹೋದರೆ, ಇಲ್ಲಾಂದರೆ ದೈನಂದಿನ ಅಡುಗೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಪ್ಪನ್ನು ಬಳಕೆ ಮಾಡುವುದರಿಂದ, ದೇಹದಲ್ಲಿ ಸೋಡಿಯಂ ಅಂಶ, ಹೆಚ್ಚಾಗುತ್ತಾ ಹೋಗುತ್ತದೆ.

ಯಾವಾಗ ದೇಹದಲ್ಲಿ ಸೋಡಿಯಂ, ಹೆಚ್ಚಾಗುತ್ತಾ ಹೋಗುತ್ತ ದೆಯೋ, ಆಗಲೇ ಸಮಸ್ಯೆಗಳು ಶುರುವಾಗುತ್ತದೆ. ಇವು ನಿಮ್ಮ ರಕ್ತನಾಳಗಳನ್ನು ಮಾತ್ರ ಹಾಳು ಮಾಡುವುದಲ್ಲದೆ, ದೇಹದ ಪ್ರಮುಖ ಅಂಗಾಂಗಗಳಾದ ಹೃದಯ, ಕಿಡ್ನಿ ಹಾಗೂ ರಕ್ತದೊತ್ತಡ ದಂತಹ ಸಮಸ್ಯೆಯನ್ನು ತಂದೊಡ್ಡುತ್ತದೆ.

ಅಲ್ಲದೆ ಇಂದಿನ ದಿನಗಳಲ್ಲಿ ಜನರು ಜಂಕ್ ಫುಡ್ ಮತ್ತು ಫಾಸ್ಟ್ ಫುಡ್ ನ್ನು ಹೆಚ್ಚಾಗಿ ಸೇವನೆ ಮಾಡುತ್ತಾರೆ. ಅತಿಯಾಗಿ ಸಂಸ್ಕರಿಸಿದ ಉಪ್ಪನ್ನು ಇದರಲ್ಲಿ ಬಳಕೆ ಮಾಡಲಾಗುತ್ತದೆ. ಅತಿಯಾಗಿ ಉಪ್ಪು ಸೇವನೆ ಮಾಡಿದರೆ, ಆಗ ಇದರಿಂದ ರಕ್ತದೊತ್ತಡ ಹೆಚ್ಚಾಗುವುದು. ಇದರಿಂದ ನೇರವಾಗಿ ಕಿಡ್ನಿಯ ಮೇಲೆ ಪರಿಣಾಮ ಬೀರುವುದು.

**ಕೆಲವೊಂದು ಬಗೆಯ ಔಷಧಿಗಳು**

ಸ್ವಲ್ಪ ತಲೆನೋವು, ದೇಹದಲ್ಲಿ ನೋವು, ಬೆನ್ನು ನೋವು ಅಥವಾ ಸಣ್ಣ ಅನಾರೋಗ್ಯ ಕಂಡುಬಂದರೂ ಕೆಲವರು ತಕ್ಷಣವೇ ಹೋಗಿ ನೋವು ನಿವಾರಕ ಮಾತ್ರೆಗಳನ್ನು ಸೇವನೆ ಮಾಡುವರು. ಆದರೆ ಇದನ್ನು ಹೆಚ್ಚು ಸೇವನೆ ಮಾಡಿದರೆ, ಆಗ ಇದರಿಂದ ಕಿಡ್ನಿಗೆ ಹಾನಿಯಾಗುವುದು ಮತ್ತು ಇದರಿಂದ ಕಿಡ್ನಿ ವೈಫಲ್ಯವು ಆಗುವ ಸಾಧ್ಯತೆ ಇರುವುದು. ಇದರಿಂದ ಯಾವುದೇ ರೀತಿಯ ನೋವು ನಿವಾರಕ ಔಷಧಿ ಸೇವನೆ ಮಾಡುತ್ತಲಿದ್ದರೂ ನೀವು ವೈದ್ಯರ ಸಲಹೆ ಪಡೆಯುವುದು ಅತೀ ಅಗತ್ಯ.

**ಪದೇ ಪದೇ ಮೂತ್ರ ವಿಸರ್ಜನೆ**

ಮೂತ್ರ ವಿಸರ್ಜನೆಯನ್ನು ಕೆಲವರು ತಡೆ ಹಿಡಿಯುವರು. ಆದರೆ ಇದು ಒಳ್ಳೆಯದಲ್ಲ. ಯಾಕೆಂದರೆ ಇದರಿಂದ ಕಿಡ್ನಿಗೆ ಅಪಾಯವಾಗಬಹುದು. ಮೂತ್ರ ವನ್ನು ತಡೆಹಿಡಿದರೆ, ಆಗ ಇದರಿಂದ ಮೂತ್ರಕೋಶ ಮತ್ತು ಕಿಡ್ನಿ ಮೇಲೆ ಒತ್ತಡ ಬೀಳುವುದು. ಮುಂದೆ ಇದು ಕಿಡ್ನಿಯನ್ನು ದುರ್ಬಲವಾಗಿಸ ಬಹುದು.

**ಆಲ್ಕೋಹಾಲ್ ಮತ್ತು ಸಿಗರೇಟ್**

ಯುವ ಜನರಲ್ಲಿ ಸಿಗರೇಟ್ ಮತ್ತು ಆಲ್ಕೋಹಾಲ್ ಸೇವನೆ ಅತಿಯಾಗು ತ್ತಲಿದೆ. ಆದರೆ ಆಲ್ಕೋಹಾಲ್ ಮತ್ತು ಸಿಗರೇಟ್ ನಿಂದಾಗಿ ನೇರವಾಗಿ ಕಿಡ್ನಿಗೆ ಹಾನಿ ಉಂಟು ಮಾಡಬಹುದು. ಆಲ್ಕೋಹಾಲ್ ಸೇವನೆ ಮಾಡಿದರೆ, ಆಗ ಇದರಿಂದ ಯೂರಿಕ್ ಆಮ್ಲವು ಹೆಚ್ಚಾಗಿ, ಕಿಡ್ನಿಯ ಮೇಲೆ ಒತ್ತಡ ಹಾಕಬಹುದು. ಅದೇ ರೀತಿಯಾಗಿ ನಿಕೋಟಿನ್ ಮತ್ತು ಇತರ ಕೆಲವೊಂದು ವಿಷಕಾರಿ ಅಂಶಗಳು ಸಿಗರೇಟಿನಲ್ಲಿದ್ದು, ಇದರಿಂದ ರಕ್ತವು ಕಲುಷಿತ ವಾಗುವುದು. ಇದರಿಂದ ಕಿಡ್ನಿಯು ಇನ್ನಷ್ಟು ಕಠಿಣವಾಗಿ ಕೆಲಸ ಮಾಡ ಬೇಕಾಗುತ್ತದೆ. ಆಲ್ಕೋಹಾಲ್ ಮತ್ತು ಸಿಗರೇಟ್ ನಿಯಮಿತವಾಗಿ ಸೇವನೆ ಮಾಡಿದರೆ, ಆಗ ಇದರಿಂದ ಭವಿಷ್ಯದಲ್ಲಿ ಕಿಡ್ನಿಗೆ ಹಾನಿಯಾ ಗುವುದು.

---




• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಆ ಮೇಲೆ ಲಕ್ಷ್ಮಣನು ಶ್ರೀರಾಮನ ಧೈರ್ಯವನ್ನು ಕಂಡು ಸಂತೋಷ, ಆತನ ಪಟ್ಟಾಭಿಷೇಕಕ್ಕೆ ವಿಘ್ನವಾಯಿತೆಂಬ ದುಃಖ ಇವೆರಡರ ನಡುವೆ ಸಿಕ್ಕಿಕೊಂಡನು. ಅವನು ಹುಬ್ಬು ಗಂಟಿಕ್ಕಿಕೊಂಡು ಹುತ್ತದ ಬಿಲದಲ್ಲಿ ಕೋಪದಿಂದ ಮೊರೆಯುವ ಸರ್ಪದಂತೆ ನಿಟ್ಟುಸಿರು ಬಿಡುತ್ತಿದ್ದನು. ಅತಿಯಾಗಿ ಕೋಪಿಸಿರುವ ಸಿಂಹರಾಜನ ಮುಖದಂತೆ ಒಪ್ಪುತ್ತಿದ್ದ ಮುಖವುಳ್ಳ ಲಕ್ಷ್ಮಣನು ದುಃಖಾತಿಶಯದಿಂದ, ತನ್ನ ಶಿರಸ್ಸನ್ನು ಅಡ್ಡಲಾಗಿ ಹೆಗಲಿನ ಮೇಲಿರಿಸಿಕೊಂಡು ಮದ್ದಾನೆಯು ಸೊಂಡಿಲತುದಿಯನ್ನು ತೂಗುವಂತೆ ತನ್ನ ಬಲಗೈಯನ್ನು ತೂಗುತ್ತ ತನ್ನ ಬಲಭಾಗದಲ್ಲಿದ್ದ ಶ್ರೀರಾಮನನ್ನು ಕಡೆಗಣ್ಣಿನಿಂದ ನೋಡುತ್ತ ಆತನನ್ನು ಕುರಿತು ಹೀಗೆಂದನು:
ಶ್ರೀರಾಮ, ಲೋಕದಲ್ಲಿ ಮನುಷ್ಯರಿಗೆ ಇಷ್ಟವಾದ ವಸ್ತುಗಳನ್ನು ಕಂಡರೆ ಸಂತೋಷವಾಗುವುದು.

ಪಟ್ಟಾಭಿಷೇಕಕ್ಕೆ ವಿಘ್ನವಾದದ್ದರಿಂದ ಮುಖಕಾಂತಿಗುಂದಿತೆಂದು ಜನರು ನುಡಿಯುವರು. ದಶರಥರಾಜನ ಮಾತನ್ನು ಮೀರಿದರೆ ಧರ್ಮಕ್ಕೆ ವಿಘ್ನ ಬಂದೀತೆಂಬ ಶಂಕೆಯಿಂದ ನೀನು ಸಂಭ್ರಮವನ್ನು ತೋರಿಸಿಕೊಂಡಿದ್ದೀಯಲ್ಲದೆ ಮತ್ತೊಂದಲ್ಲ. ಧೈರ್ಯಗುಣಸಂಪತ್ತುಳ್ಳ, ಕ್ಷತ್ರಿಯೋತ್ತಮನಾಗಿ ವಿವೇಕನಿಧಿಯಾದ ನಿನ್ನಂಥವನು ಇಂಥ ಹೇಡಿಮಾತುಗಳನ್ನು ನುಡಿಯಬಹುದೆ ನಿನ್ನ ಪುರುಷಸಾಮರ್ಥ್ಯವಿದ್ದಂತೆ ಮಾಡದೆ ಕಾರ್ಯಸಂಘಟನೆಯಲ್ಲಿ ಅಸಮರ್ಥವಾದ ದೈವಾಧೀನತೆಯನ್ನು ಏಕೆ ನುಡಿಯುತ್ತಿದ್ದೀಯೆ ದಶರಥರಾಯನ ಮಾತನ್ನು ಮೀರಿದರೆ ಪಾಪವು ಬರುವುದೆಂದು ಹೇಳುತ್ತೀಯೆ.

ಪಾಪಿಷ್ಠನಾದ ಆ ರಾಜನೂ ಕೈಕೇಯಾದೇವಿಯೂ ನಿನ್ನನ್ನು ವನವಾಸಕ್ಕೆ ಕಳುಹಿಸಬೇಕೆಂದೂ ಭರತನಿಗೆ ಪಟ್ಟವನ್ನು ಕಟ್ಟಬೇಕೆಂದೂ ಆಲೋಚನೆ ಮಾಡಿದ್ದರಿಂದ ಅವರಲ್ಲಿ ಪಾಪವಿಲ್ಲದೆಹೋಗುವುದೆ ಲೋಕದಲ್ಲಿ ಧರ್ಮಕೃತ್ಯವೆಂಬ ನೆವದಿಂದ ಅಧರ್ಮವನ್ನೇ ಮಾಡುತ್ತಿರುವವರು ಅನೇಕಮಂದಿಯುಂಟು. ಅವರನ್ನು ನೀನು ಅರಿತವನಲ್ಲವೆ ದಶರಥರಾಯನೂ ಕೈಕೇಯಾದೇವಿಯೂ ಭರತನಿಗೆ ಪಟ್ಟವನ್ನು ಕಟ್ಟಿ ನಿನ್ನನ್ನು ವನವಾಸಕ್ಕೆ ಕಳುಹಿಸಬೇಕೆಂಬ ಉದ್ದೇಶವನ್ನು ಮನಸ್ಸಿನಲ್ಲಿರಿಸಿಕೊಂಡಿದ್ದರು. ಮೊದಲೇ ಆ ಕಾರ್ಯವನ್ನು ಮಾಡಿದರೆ ಲೋಕದಲ್ಲಿರುವ ಜನರು ಗುಣವಂತನಾಗಿ ಜೇಷ್ಠಪುತ್ರನಾದ ನಿನ್ನನ್ನು ಬಿಟ್ಟು ಕಿರಿಯವ ನಾದ ಭರತನಿಗೆ ಪಟ್ಟವನ್ನು ಕಟ್ಟುವುದು ದಶರಥರಾಯನಿಗೆ ಉಚಿತವಲ್ಲವೆಂದು ನಿಂದಿಸುವರೆಂಬ ಭಯವು ಅವರಿಗೆ ಹುಟ್ಟಿತು. ನಿನಗೆ ಪಟ್ಟವನ್ನು ಕಟ್ಟುವುದಾಗಿ ಯತ್ನಮಾಡಿ ಪಟ್ಟಾಭಿಷೇಕ ಮುಹೂರ್ತಸಮಯದಲ್ಲಿ ದಶರಥರಾಯನು ಪೂರ್ವದಲ್ಲಿ ಕೈಕೇಯಾದೇವಿಗೆ ಎರಡು ವರಗಳನ್ನು ಕೊಟ್ಟಿದ್ದನೆಂದು ಪಟ್ಟಾಭಿಷೇಕಸಮಯದಲ್ಲಿ ಆ ದೇವಿಯು ಒಂದು ವರದಿಂದ ನಿನಗೆ ವನವಾಸ ವನ್ನೂ ಮತ್ತೊಂದು ವರದಿಂದ ಭರತನಿಗೆ ಪಟ್ಟಾಭಿಷೇಕವನ್ನೂ ಬೇಡಿಕೊಂಡಳೆಂದೂ ಪ್ರಸಂಗವನ್ನು ಹುಟ್ಟಿಸಬೇಕೆಂದು ಸಂಕೇತ ಮಾಡಿಕೊಂಡಿದ್ದಾರೆ.

ಮುಂದುವರಿಯುವುದು...

---

# ಇತರರಿಗಾಗಿ ನೀವು ನಿಮ್ಮ ಈ ಅಭ್ಯಾಸವನ್ನು ಯಾವತ್ತೂ ಬದಲಾಯಿಸಬೇಡಿ


ನೀವು ನಿಮ್ಮ ಜೀವನದಲ್ಲಿ ಖುಷಿಯಾಗಿರಬೇಕಾದರೆ ಈ ಕೆಲವು ಅಭ್ಯಾಸಗಳನ್ನು ಇತರರಿಗಾಗಿ ಬದಲಾಯಿಸುವ ತಪ್ಪನ್ನು ಮಾಡಬೇಡಿ. ಹಾಗೊಂದು ವೇಳೆ ನೀವು ಮಾಡಿದರೆ ಮುಂದೆ ನಿಮ್ಮನ್ನು ನೀವು ಎದುರಿಸಲಾರಿರಿ. ಹಲವು ಬಾರಿ ಜನರು ಇತರರಿಗೋಸ್ಕರ ತಮ್ಮನ್ನು ತಾವು ಬದಲಾಯಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ಇತರರನ್ನೇ ತಮಗೆ ಬೇಕಾಗುವಂತೆ ಬದಲಾಯಿಸಲು ಪ್ರಯತ್ನಿಸುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ, ನಾವು ಪ್ರತಿ ಬಾರಿ ಇತರರನ್ನು ಸಂತೋಷಪಡಿಸಲು ಪ್ರಯತ್ನಿಸಿದಾಗ, ನಾವು ನಮ್ಮನ್ನು ಕಳೆದುಕೊಳ್ಳುತ್ತೇವೆ ಎಂದು ನಿಮಗೆ ತಿಳಿದಿದೆಯೇ? ನೀವು ಇತರರ ನಿರೀಕ್ಷೆಗಳಿಗೆ ಅನುಗುಣವಾಗಿ ನಿಮ್ಮನ್ನು ಬದಲಾಯಿಸಿಕೊಳ್ಳುತ್ತಿದ್ದರೆ ಮುಂದೊಂದು ದಿನ ನಿಮ್ಮ ಬಗ್ಗೆಯೇ ನಿಮಗೆ ನಾಚಿಕೆ ಮೂಡುತ್ತದೆ.

**ನಿಮ್ಮ ಸ್ವಂತ ಗುರುತನ್ನು ಕಾಪಾಡಿಕೊಳ್ಳಿ**

ಜನರು ನಿಮಗೆ ಈ ರೀತಿ ವರ್ತಿಸಬೇಡಿ, ಈ ರೀತಿ ಮಾತನಾಡಬೇಡಿ, ಈ ರೀತಿ ಯೋಚಿಸಬೇಡಿ ಎಂದು ಹೇಳಿದರೆ, ಅವರು ನಿಮ್ಮನ್ನು ನೀವು ಇರುವಂತೆಯೇ ಸ್ವೀಕರಿಸಲು ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಳ್ಳಿ. ಅವರಿಗಾಗಿ ನೀವು ನಿಮ್ಮನ್ನು ಬದಲಾಯಿಸಿಕೊಳ್ಳುತ್ತಲೇ ಇದ್ದರೆ, ಒಂದು ದಿನ ನೀವು ನಿಮ್ಮನ್ನು ಗುರುತಿಸಿಕೊಳ್ಳಲು ಸಹ ಸಾಧ್ಯವಾಗುವುದಿಲ್ಲ.

**ನಿಮ್ಮ ಆದ್ಯತೆಗಳನ್ನು ಮೊದಲು ಇಡುವುದು**

ನೀವು ಇತರರಿಗಿಂತ ನಿಮ್ಮ ಅಗತ್ಯಗಳನ್ನು ಮುಂದಿಟ್ಟರೆ, ಅನೇಕ ಬಾರಿ ಜನರು ನಿಮ್ಮನ್ನು ಸ್ವಾರ್ಥಿ ಎಂದು ಕರೆಯುತ್ತಾರೆ. ಆದರೆ ನೆನಪಿಡಿ, ನಿಮಗೆ ಆದ್ಯತೆ ನೀಡುವುದು ಸ್ವಾರ್ಥವಲ್ಲ. ನಿಮ್ಮ ಸಂತೋಷ ಮತ್ತು ಅಗತ್ಯಗಳನ್ನು ನೀವು ನಿರ್ಲಕ್ಷಿಸಿದರೆ, ನೀವು ಕ್ರಮೇಣ ಒಳಗಿನಿಂದ ಟೊಳ್ಳಾಗುತ್ತೀರಿ. ಹಾಗಾಗಿ ಇತರರಿಗೆ ಸಹಾಯ ಮಾಡಿ, ಆದರೆ ನಿಮ್ಮನ್ನು ನೀವು ತಡೆಹಿಡಿಯಬೇಡಿ.



ಉದಯವಾಹಿನಿ ಚಿತ್ರ

**ವೈಯಕ್ತಿಕ ಜಾಗದಲ್ಲಿ ರಾಜಿ ಮಾಡಿಕೊಳ್ಳಬೇಡಿ**

ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಗೌಪ್ಯತೆಗೆ ಮತ್ತು ಏಕಾಂಗಿಯಾಗಿ ಕಾಲ ಕಳೆಯುವ ಹಕ್ಕಿದೆ. ಯಾರಾದರೂ ನಿಮ್ಮನ್ನು ಮತ್ತೆ ಮತ್ತೆ ನಿಯಂತ್ರಿಸಲು ಪ್ರಯತ್ನಿಸುತ್ತಿದ್ದರೆ, ನೀವು ಮಾಡುವ ಎಲ್ಲದರಲ್ಲೂ ಹಸ್ತಕ್ಷೇಪ ಮಾಡುತ್ತಿದ್ದರೆ, ಅದು ಸರಿಯಲ್ಲ. ನಿಮ್ಮ ವೈಯಕ್ತಿಕ ಸ್ಥಳವನ್ನು ಗೌರವಿಸಿ, ನಿಮ್ಮ ಜೀವನವು ನಿಮ್ಮ ಇಷ್ಟದಂತೆ ಸಾಗಲು ಬಿಡಿ. ಇತರರು ಮೂಗು ತೂರಿಸಲು ಬಿಡಬೇಡಿ.

**ನಿಮ್ಮ ದಯೆ, ಸರಳತೆಯನ್ನು ಕಳೆದುಕೊಳ್ಳಬೇಡಿ**

ತುಂಬಾ ಒಳ್ಳೆಯವರಾಗಿರಬೇಡಿ, ಜನರು ನಿಮ್ಮ ಲಾಭವನ್ನು ಪಡೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ.

ನೀವು ಇತರರ ಬಗ್ಗೆ ವಿನಮ್ರ, ದಯೆ ಮತ್ತು ಪ್ರಾಮಾಣಿಕರಾಗಿದ್ದರೆ, ಇದು ನಿಮ್ಮ ದೊಡ್ಡ ಶಕ್ತಿ. ಲೋಕ ಹೇಗಿದ್ದರೂ, ನೀವು ನಿಮ್ಮ ಒಳ್ಳೆಯತನವನ್ನು ಕಾಪಾಡಿಕೊಳ್ಳಬೇಕು. ಜಗತ್ತು ಬದಲಾಗಬಹುದು, ಆದರೆ ನಿಮ್ಮ ಮಾನವೀಯತೆಯನ್ನು ಬಿಟ್ಟುಕೊಡಬೇಡಿ.

**ನಿಮ್ಮ ಕನಸುಗಳು ಮತ್ತು ಉತ್ಸಾಹವನ್ನು ಬಿಟ್ಟುಕೊಡಬೇಡಿ**

ನೀವು ಯಾವುದಾದರೂ ಹೊಸ ವೃತ್ತಿ ಜೀವನ ಅಥವಾ ಬ್ಯುಸಿನೆಸ್‌ನ್ನು ಪ್ರಾರಂಭಿಸುವಾಗ ಇದರಲ್ಲಿ ಒಳ್ಳೆಯ ಸಂಪಾದನೆ ಇಲ್ಲ, ನೀವು ಬೇರೇನನ್ನಾದರೂ ಪ್ರಯತ್ನಿಸು ಎನ್ನುವ ಮಾತು ಕೇಳಿಬರುವುದು ಸಾಮಾನ್ಯ. ಯಾರೋ ಏನೋ ಹೇಳುತ್ತಾರೆ ಎನ್ನುವ ಕಾರಣಕ್ಕೆ ನೀವು ನಿಮ್ಮ ಆಸೆ, ಕನಸುಗಳನ್ನು ಬಿಟ್ಟುಬಿಡಬೇಡಿ. ನೀವು ಇತರರ ಪ್ರಕಾರ ನಿಮ್ಮ ಜೀವನವನ್ನು ನಡೆಸಲು ಬಯಸಬೇಡಿ. ನಿಮಗೆ ಯಾವುದಾದರೂ ವಿಷಯದ ಬಗ್ಗೆ ಉತ್ಸಾಹವಿದ್ದರೆ ಇತರರ ಮಾತು ಕೇಳಿ ಅದನ್ನು ಕೊಲ್ಲಬೇಡಿ.

---



## ಬಲಿದಾನ ದಿವಸ

ಅಖಂಡ ಭಾರತಾಂಬೆ ಸೆರೆಯಾಳಾಗಿ
ಯಮಯಾತನೆ ಅನುಭವಿಸರಲು
ಪಾಶ್ಚಿಮಾತ್ಯರ ಆಕ್ರಮಣದ ಸಂಕೋಲೆ ಬಿಗಿದಪ್ಪಿರಲು
ಅಡಿಯಿಂದ ಮುಡಿವರೆಗೂ ಅಡಿಯಾಳಾಗಿರಲು
ಇದನ್ನು ನೋಡಿ ನೊಂದ ಮನಸ್ಸುಗಳೇಷ್ಟೋ!!

ದೇಶಪ್ರೇಮ ದೇಶಭಕ್ತಿಯ ಕಿಡಿ ಹೊತ್ತಿಸಿ
ಆ ಜ್ವಾಲೆಯಲ್ಲಿ ಸಂತೋಷದಿಂದ ಬೆಂದವರೇಷ್ಟೋ!!

ಛಡಿ ಏಟಿಗೆ ಹೆದರುವ ಜೀವ,ಗಲ್ಲುಶಿಕ್ಷೇ
ಕಾಲಪಾನಿ ವಿಧಿಸಿದರೂ ಹಸನ್ಮುಖಿಯಾದವರೇಷ್ಟೋ!!
ಇಂಕ್ವಿಲಾಬ್ ಜಿಂದಾಬಾದ್ ಎಂಬ ಜಯಘೋಷಕ್ಕೆ
ಸ್ವಯಂ ಪ್ರೇರಿತರಾಗಿ ಪುಳಕಗೊಂಡ ಕ್ಷಾತ್ರತೇಜರೆಷ್ಟೋ!!
ಮಣ್ಣು ಕೆಂಪಾಗಿ ನೆತ್ತರಿನ ನದಿ ಹರಿದರೂ
ಸ್ವಾತಂತ್ರ್ಯದ ಗಾಳಿಗೆ ಮಿಡಿದ ಹೃದಯಗಳೇಷ್ಟೋ!!
ಜಾತಿ ಧರ್ಮ ಮೇಲು ಕೀಳೆಂಬ ಕ್ಷುಲ್ಲಕ ಮಾಪನ
ಅದ ಮೀರಿ ಸ್ವಾತಂತ್ರ್ಯ ಲಕ್ಷ್ಮಿಯ ಆರಾಧಿಸಿದವರೆಷ್ಟೋ!!
ಸ್ವಾತಂತ್ರ್ಯವೆಂಬ ಅಮೃತ ಸುಧೆಯ ಸವಿಯಲಾಗದಿದ್ದರೂ
ನಗು ನಗುತ ಸಾವಿನ ಮನೆ ದಾರಿ ಹಿಡಿದವರೆಷ್ಟೋ!!
ಬ್ರಿಟಿಷರ ವಿರುದ್ಧ ತಿರುಗಿಬಿದ್ದು ಹೆಬ್ಬುಲಿಗಳಂತೆ ಘರ್ಜಿಸಿ ಕಾನನದಿಂದ
ಕಾದಾಡಿದವರೆಷ್ಟೋ!!
ತ್ಯಾಗ ಬಲಿದಾನಗಳು ಪ್ರತಿಯೊಬ್ಬ ಭಾರತೀಯನಿಗೂ ನೆನಪಿಸುವಂತೆ
ರಾತ್ರಿ ಆಕಾಶದಲ್ಲಿ ಮಿನುಗುವ ನಕ್ಷತ್ರ ಪುಂಜಗಳೆಷ್ಟೋ!!
ಇಂದು ಭಗತ್ ಸಿಂಗ್, ರಾಜ್ ಗುರು ಮತ್ತು ಸುಖ್ ದೇವ್
ಎಂಬ ತ್ಯಾಗಮೂರ್ತಿಗಳ ಜೀವ ಬಲಿದಾನದ ದಿನ
ಇಂದು ಬಲಿದಾನದ ದಿನ!!
ನಿಮ್ಮೆಲ್ಲರ ತ್ಯಾಗ ಬಲಿದಾನದ ನೆನಪು ಪ್ರತಿಯೊಬ್ಬ ಭಾರತೀಯನ
ಹೃದಯದಲ್ಲಿ ದೇಶಪ್ರೇಮದ ಕಿಡಿ ಹೊತ್ತಿಸಿ
ಎಲ್ಲೆಡೆ ಪ್ರಜ್ವಲಿಸಲಿ ದೇಶಭಕ್ತಿ!!
ಎಲ್ಲೆಡೆ ಪ್ರತಿಧ್ವನಿಸಲಿ ದೇಶಪ್ರೇಮ!!

ರಚನೆ_ಚೈತ್ರ ಎಂ. ಚಿತ್ರದುರ್ಗ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ತಾತ್ಕಾಲಿಕವಾದ ಉದ್ವೇಗದಲ್ಲಿ ನಿರ್ಧಾರ ಕೈಗೊಳ್ಳಬೇಡಿ ಇದು ನಿಮ್ಮ ಮಕ್ಕಳ ಹಿತಾಸಕ್ತಿಗೆ ಹಾನಿ ಮಾಡಬಹುದು. ಹಣದ ಪರಿಸ್ಥಿತಿ ದಿನದಲ್ಲಿ ನಂತರ ಸುಧಾರಿಸುತ್ತದೆ.

**ವೃಷಭ** ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ ಮತ್ತು ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು.

**ಮಿಥುನ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ಮತ್ತು ನೀವು ಇದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಬೇಕು. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ.

**ಕರ್ಕಾಟಕ** ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ಯಾರಾದರೂ ನಿಮ್ಮ ನೆರೆಹೊರೆಯವರು ಇಂದು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು.

**ಸಿಂಹ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇಂದು ನಿಮ್ಮ ಸಹೋದರ ಸಹೋದರಿಯರು ನಿಮ್ಮಿಂದ ಆರ್ಥಿಕ ಬೆಂಬಲವನ್ನು ಕೇಳಬಹುದು.

**ಕನ್ಯಾ** ಭೂಮಿಯನ್ನು ಖರೀದಿಸಿದ ಮತ್ತು ಈಗ ಅದನ್ನು ಮಾರಾಟ ಮಾಡಲು ಬಯಸುವ ಜನರು ಇಂದು ಉತ್ತಮ ಖರೀದಿದಾರರನ್ನು ಕಾಣಬಹುದು.

**ತುಲಾ** ಇಂದು ತಮ್ಮ ಸಹೋದರ–ಸಹೋದರಿಯರೊಂದಿಗೆ ಮನೆಯಲ್ಲಿ ಯಾವುದೇ ಚಲನಚಿತ್ರ ಅಥವಾ ಮ್ಯಾಚ್ ನೋಡಬಹುದು. ಇದನ್ನು ಮಾಡುವುದರಿಂದ ನಿಮ್ಮ ನಡುವಿನ ಪ್ರೀತಿಯಲ್ಲಿ ಹೆಚ್ಚಳವಾಗುತ್ತದೆ.

**ವೃಶ್ಚಿಕ** ನಿಮ್ಮ ಕತ್ತಲೆಯ ಜೀವನ ನಿಮ್ಮ ಸಂಗಾತಿಗೆ ಒತ್ತಡ ತರಬಹುದು. ಹೊಸ ಪಾಲುದಾರಿಕೆ ಇಂದು ಭರವಸೆಯಿಂದ ಕೂಡಿರುತ್ತವೆ. ನಿಮ್ಮ ಸ್ಪರ್ಧಾತ್ಮಕ ಸ್ವಭಾವ ನೀವು ಪ್ರವೇಶಿಸುವ ಯಾವುದೇ ಸ್ಪರ್ಧೆಯಲ್ಲೂ ನಿಮ್ಮನ್ನು ಗೆಲ್ಲಿಸುತ್ತದೆ.

**ಧನಸ್ಸು** ನಿಮ್ಮ ದಿಟ್ಟ ಮತ್ತು ನಿರ್ಭಯ ಅಭಿಪ್ರಾಯಗಳು ನಿಮ್ಮ ಸ್ನೇಹಿತನ ಅತ್ಮಗೌರವವನ್ನು ಹಾನಿ ಮಾಡಬಹುದು. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ.

**ಮಕರ** ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ನಿಮ್ಮ ಚೈತನ್ಯವನ್ನು ಬಳಸಿ. ಲೋಕೋಪಕಾರಕ್ಕಾಗಲ್ಲದಿದ್ದಲ್ಲಿ ಈ ನಶ್ವರ ದೇಹದ ಉಪಯೋಗವಾದರೂ ಏನು. ನೀವು ಸುಲಭವಾಗಿ ಬಂಡವಾಳ ಪಡೆಯಬಹುದು.

**ಕುಂಭ** ನಿಮ್ಮ ಆರೋಗ್ಯ ಸುಧಾರಿಸವುದನ್ನು ಪ್ರಾರಂಭಿಸಲು ಅತ್ಯುತ್ತಮ ದಿನ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು –ಏಕೆ ಏನನ್ನಾದರೂ ಮಾಡಬಾರದು. ಇದು ನಿಮ್ಮ ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ.

**ಮೀನ** ನಿಮ್ಮ ಮಗುವಿನ ಸಾಧನೆ ನಿಮಗೆ ಅಪಾರ ಸಂತೋಷ ನೀಡಬಹುದು. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ.

---

#### ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ಮಂಡಿಸದ ರಾಜ್ಯ ಸರ್ಕಾರದ ವಿರುದ್ಧ ಮುದ್ನಾಳ್ ಆಕ್ರೋಶ

## ಬಜೆಟ್‌ನಲ್ಲಿ ಅಂಬಿಗರ ಚೌಡಯ್ಯ ನಿಗಮದ ಮೂಗಿಗೆ ತುಪ್ಪ ಸವರಿದ ಸಿಎಂ

• ಉದಯವಾಹಿನಿ ಯಾದಗಿರಿ

ರಾಜ್ಯ ಬಜೆಟ್ ಮಂಡನೆಗೂ ಮುನ್ನವೇ ಕೋಲಿ ಸಮಾಜ ಅಂಬಿಗರ ಚೌಡಯ್ಯ ಪ್ರಾಧಿಕಾರ ರಚನೆಗೆ ಒತ್ತಾಯಿಸಿತ್ತು. ಅದರಂತೆ ಸಮಾಜ ಸರ್ಕಾರ ಪ್ರಾಧಿಕಾರ ರಚನೆ ಮಾಡುವ ಭರವಸೆ ಇಟ್ಟುಕೊಂಡಿತ್ತು. ಆದರೆ ಮೊನ್ನೆ ನಡೆದ ಬಜೆಟ್ ಕೋಲಿ ಸಮಾಜದವರಿಗೆ ತೀವ್ರ ನಿರಾಸೆ ಮೂಡಿಸಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅಖಿಲ ಭಾರತೀಯ ಕೋಲಿ ಸಮಾಜ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ್ ಮುದ್ನಾಳ್ ಕಳವಳ ವ್ಯಕ್ತಪಡಿಸಿದ್ದರು.

ರಾಜ್ಯದಲ್ಲಿ ಅತೀ ಹೆಚ್ಚು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೋಲಿ ಸಮಾಜದ ಜನರು ಇದ್ದಾರೆ. ಕೋಲಿ ಸಮಾಜದ ಮತ ಪಡೆದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯ ಮಾತ್ರವಲ್ಲದೆ ರಾಷ್ಟ್ರ ಮಟ್ಟದ ನಾಯಕರಾಗಿ ಬೆಳೆದಿದ್ದಾರೆ. ಖರ್ಗೆ ರಾಷ್ಟ್ರ ನಾಯಕರಾಗಲೂ ಕಾರಣಿಕರ್ತರೇ ಕೋಲಿ ಸಮಾಜ. ಆದರೆ ಕೋಲಿ ಸಮಾಜದಿಂದ ರಾಜಕೀಯವಾಗಿ ಬೆಳೆದ ಖರ್ಗೆಯವರು ಕೋಲಿ ಸಮಾಜವನ್ನೇ ಮರೆತಂತೆ


ಉದಯವಾಹಿನಿ ಚಿತ್ರ

ಕಾಣುತ್ತಿದೆ. ಗುರುಮಠಕಲ್, ಚಿತ್ತಾಪುರ, ಜೇವರ್ಗಿಯಲ್ಲಿ ಅತೀ ಹೆಚ್ಚು ಕೋಲಿ ಸಮಾಜದ ಮತ ಪಡೆದು ಧರ್ಮಸಿಂಗ್ ಸಿಎಂ ಆಗಿ ಅಧಿಕಾರ ಅನುಭವಿಸಿದ್ರು. ಇದೀಗ ಅವರ ಮಕ್ಕಳು ಕೂಡಾ ಕೋಲಿ ಸಮಾಜದ ಮತ ಪಡೆದು ರಾಜಕೀಯವಾಗಿ ಬೆಳೆದಿದ್ದಾರೆ. ಆದರೆ ಕೋಲಿ ಸಮಾಜದಿಂದ ಬೆಳೆದ ನಾಯಕರು ಸಮಾಜಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಖರ್ಗೆ, ಧರ್ಮ ಸಿಂಗ್ ಕುಟುಂಬಗಳಿಗೆ ಕಲ್ಯಾಣ ಕರ್ನಾಟಕದ ಕೋಲಿ ಸಮಾಜ ಚುನಾವಣೆ ಸಂದರ್ಭದಲ್ಲಿ ಮಾತ್ರ ನೆನಪಾಗುವ ಹಾಗೆ ಗೋಚ್ಚರಿಸುತ್ತಿದೆ. ಬಜೆಟ್ ನಲ್ಲೂ ಅತಿ ಕಡಿಮೆ ಜನಸಂಖ್ಯೆ ಇರುವ ಸಮಾಜಕ್ಕೆ ಹೆಚ್ಚಿನ ಬಜೆಟ್ ನೀಡಿದ್ದಾರೆ. ಆದರೆ ಕಲ್ಯಾಣ ಕರ್ನಾಟಕದಲ್ಲಿ ಬಹುಸಂಖ್ಯಾತರಾಗಿರುವ ಕೋಲಿ ಸಮಾಜಕ್ಕೆ ಕೇವ 6 ಕೋಟಿ 25 ಲಕ್ಷ ಬಜೆಟ್ ನೀಡಿದೆ. ಈ ಬಜೆಟ್ ಸಮಾ ಜದ ಬೇಡಿಕೆಗೆ ಅನುಗುಣವಾಗಿ ನೀಡಿದಲ್ಲ. ಇದೇ ರೀತಿ ಮುಂದುವರೆದ ಕೋಲಿ ಸಮಾಜ ಮುಂದಿನ ಚುನಾವಣೆಯಲ್ಲಿ ತಕ್ಕಪಾಠ ಕಲಿಸಲಿದೆ ಎಂದು ಉಮೇಶ್ ಮುದ್ನಾಳ್ ಎಚ್ಚರಿಕೆ ನೀಡಿದ್ದಾರೆ. ಇದೇ ವಿಚಾರವಾಗಿ ಶೀಘ್ರದಲ್ಲೇ ಅಖಿಲ ಭಾರತೀಯ ಕೋಲಿ ಸಮಾಜ ರಾಜ್ಯಾಧ್ಯಕ್ಷ ದತ್ತಾತ್ರೇಯ ರೆಡ್ಡಿ ನೇತೃತ್ವದಲ್ಲಿ ವಿಭಾಗೀಯ ಮಟ್ಟದ ಸಭೆ ಕರೆದು ನಿರ್ಧರಿಸಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಭೀಮರಾಯ್ ಕೊಡ್ಲಿ, ಮಲ್ಲೇಶ್ ಸೇರಿ ಇತರೆ ಕೋಲಿ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

### ಸಮಾಜದ ಕೆಂಗಣ್ಣಿಗೆ ಗುರಿ

**ಈ ಬಜೆಟ್‌ನಲ್ಲಿ ಸಿಎಂ ಅವರಿಗೆ ಮನವಿ ಸಲ್ಲಿಸಿ ಅಂಬಿಗರ ಚೌಡಯ್ಯ ಮೂಲ ಗದ್ದುಗೆ ಅಭಿವೃದ್ಧಿ, ಪ್ರಾಧಿಕಾರ ರಚನೆಗೆ ಆಗ್ರಹಿಸಲಾಗಿತ್ತು. ಆದರೆ ಸರ್ಕಾರ ಪ್ರಾಧಿಕಾರ ರಚಿಸದೆ ಸಮಾಜದ ಕೆಂಗಣ್ಣಿಗೆ ಗುರಿಯಾಗಿದೆ. ಕೋಲಿ ಸಮಾಜವನ್ನ ರಾಜಕೀಯ ಮತ ಬ್ಯಾಂಕ್ ಗಾಗಿ ಮಾತ್ರ ಬಳಕೆ ಮಾಡ್ತಿದ್ದಾರೆಂದು ವೇದವ್ಯಾಸ ಮಠದ ಪ್ರಥಮ ಜಗದ್ಗುರ ರಾಜುಗುರ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದ್ದರು.**

---

## ಕಣ್ಣಿನ ಸುರಕ್ಷತೆಗೆ ಪ್ರಾಮುಖ್ಯತೆ ನೀಡಿ: ನಿರ್ಲಕ್ಷ್ಯ ಬೇಡ

• ಉದಯವಾಹಿನಿ ವಡಗೇರಾ

ದೀರ್ಘಕಾಲ ದೃಷ್ಟಿ ದೋಷದ ನಷ್ಟದಿಂದ ಹೊರಬರಲು ಮೊದಲು ಗ್ಲಾಕೋಮೊ ಪರೀಕ್ಷೆಯನ್ನು ಮಾಡಿಸಿ ಸೂಕ್ತ ಚಿಕಿತ್ಸೆ ಪಡೆದು ಕಣ್ಣುಗಳನ್ನು ರಕ್ಷಿಸಿಕೊಳ್ಳುವಂತೆ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಜಗನ್ನಾಥ ರೆಡ್ಡಿ ಹೇಳಿದರು.

ಜಿಲ್ಲಾ ಪಂಚಾಯಿತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಮುದಾಯ ಆರೋಗ್ಯ ಕೇಂದ್ರ, ಜಿಲ್ಲಾ ಅಂದತ್ವ ನಿವಾರಣ ಕಾರ್ಯಕ್ರಮ ಸಂಯೋಗದಲ್ಲಿ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಗ್ಲಾಕೊಮ ಸಪ್ತಹ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 40 ವರ್ಷದ ನಂತರದ ಪ್ರತಿಯೊಬ್ಬರು ಕಣ್ಣಿನ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು ಕಣ್ಣಿನ ಬಗ್ಗೆ ನಿರ್ಲಕ್ಷ್ಯ ಬೇಡ ಜಾಗೃತಿ ಇರಲಿ ಎಂದರು .ನೇತ್ರಾಧಿಕಾರಿ ಶ್ರೀನಿವಾಸಗೌಡ


ಉದಯವಾಹಿನಿ ಚಿತ್ರ

ಹಂಚಿನಾಳ ಮಾತನಾಡಿ .ಕಣ್ಣು ಮನುಷ್ಯನ ಅತ್ಯಂತ ಪ್ರಮುಖ ಅಂಗವಾಗಿದೆ ಕಣ್ಣಿನ ರಕ್ಷಣೆಗೆ ಮುಂಜಾಗ್ರತೆ ಕ್ರಮ ವಹಿಸಿ ಕಣ್ಣಿನ ಸಮಸ್ಯೆ ಕಂಡಲ್ಲಿ ವೈದ್ಯರ ಸಲಹೆ ಪಡೆದು ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವಂತೆ ಹೇಳಿದರು. ಈ ಸಂದರ್ಭದಲ್ಲಿ ಡಾ. ಭವಾನಿ, ಬಸವರಾಜ್ ಸಜ್ಜನ್, ಸಕ್ರೆಪ್ಪ ಬಸವಂತಪುರ, ಆರಿಫ್ ಕಳ್ಳಳ್ಳಿ, ಸಿಬ್ಬಂದಿ ವರ್ಗದವರು ಹಾಗೂ ಇನ್ನಿತರರು ಉಪಸ್ಥಿತರಿದ್ದರು ಈ ಕಾರ್ಯಕ್ರಮವನ್ನು ವೆಂಕಟೇಶ್ ನಿರೂಪಿಸಿ ವಂದಿಸಿದರು.


---

## ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜನಜಾಗೃತಿ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಯವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ಬಳಕೆಯಿಂದಾಗುವ ದುಷ್ಪರಿಣಾಮಗಳ ಕುರಿತು ಕಿರುನಾಟಕ ಹಾಗೂ ಜಾಗೃತಿ ಗೀತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯು ಮದ್ಯ ಮತ್ತು ಮಾದಕ ವಸ್ತುಗಳ ಬಳಕೆಯಿಂದಾಗುವ ದುಷ್ಪರಿಣಾಮಗಳ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ಕಿರುನಾಟಕ, ಜಾಗೃತಿಗೀತೆಗಳು, ವಿಚಾರ ಸಂಕಿರಣ ಕಾರ್ಯಕ್ರಮಗಳನ್ನು


ಉದಯವಾಹಿನಿ ಚಿತ್ರ

ಹಮ್ಮಿಕೊಳ್ಳುತ್ತಿದ್ದು, ಈ ನಿಟ್ಟಿನಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಬಿ.ಜಿ.ಕೆರೆ, ಕೊಂಡ್ಲಹಳ್ಳಿ, ಕೋನಸಾಗರ, ಚಿಕ್ಕೋಬನಹಳ್ಳಿ, ಹಾನಗಲ್, ಯರ್ರನಹಳ್ಳಿ, ಮರ್ಲಹಳ್ಳಿ, ಹಿರೇಕೆರೆಹಳ್ಳಿ ಗ್ರಾಮದಲ್ಲಿ ಕಿರಿ ನಾಟಕ ಪ್ರದರ್ಶಿಸಿ ಜಾಗೃತಿ ಮೂಡಿಸಲಾಯಿತು. ಮೊಳಕಾಲ್ಮೂರು ತಾಲ್ಲೂಕು ಚಿಕ್ಕೋಬನಹಳ್ಳಿಯ ಸಿ. ಬಾಬು ಅವರ ನೇತೃತ್ವದ ಬೀದಿ ನಾಟಕ ತಂಡವು ಗ್ರಾಮಗಳಲ್ಲಿ ಕಿರು ನಾಟಕಗಳನ್ನು ಪ್ರದರ್ಶಿಸಿ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಿದರು.

ತಾಲ್ಲೂಕಿನ ಆಯಿತೋಳು ಗ್ರಾಮದ ಕಲಾವಿದ ಜಿ.ಎನ್. ವಿರುಪಾಕ್ಷಪ್ಪ ಅವರ ನೇತೃತ್ವದ ಕಲಾ ತಂಡವು ಚಿತ್ರದುರ್ಗ ತಾಲ್ಲೂಕಿನ ಚಿಕ್ಕಪುರ, ರಿಮ್ಮಾಗಟ್ಟೆ, ಗೊಡಬನಹಾಳ್, ಪಂಡರಹಳ್ಳಿ, ಐನಹಳ್ಳಿ, ವಡ್ಡನಹಳ್ಳಿ, ನಾಯಕರ ಸೊಲ್ಲಾಪುರ, ಕ್ಯಾಸಾಪುರ ಗ್ರಾಮಗಳಲ್ಲಿ ಸಂಚರಿಸಿ, ಜಾಗೃತಿ ಗೀತೆಗಳ ಮೂಲಕ ಮದ್ಯ ಮತ್ತು ಮಾದಕ ವಸ್ತುಗಳ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದರು ಎಂದು ಜಿಲ್ಲಾ ವಾರ್ತಾಧಿಕಾರಿ ತುಕಾರಾಂರಾವ್ ಅವರು ತಿಳಿಸಿದ್ದಾರೆ.

---

#### ಜಿಲ್ಲೆಯಲ್ಲಿ ಮಾ. 21ರಿಂದ ಏ. 4ರವರೆಗೆ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ

## ಪರೀಕ್ಷೆಗಳು ಶಾಂತಿಯುತವಾಗಿ ನಡೆಯುವಂತೆ ಕ್ರಮ ವಹಿಸಿ

• ಉದಯವಾಹಿನಿ ಗದಗ

ಜಿಲ್ಲೆಯಲ್ಲಿ ಮಾರ್ಚ 21 ರಿಂದ ಏಪ್ರಿಲ್ 4 ರವರೆಗೆ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಜರುಗಲಿದ್ದು ಪರೀಕ್ಷೆಗಳು ಶಾಂತಿಯುತವಾಗಿ, ಪಾರದರ್ಶಕವಾಗಿ ನಡೆಯುವಂತೆ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗಲಿದ್ದು ಪರೀಕ್ಷಾ ಕೇಂದ್ರಗಳಲ್ಲಿ ಗೋಡೆಗಡಿಯಾರಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅಗತ್ಯವಿರುವ ಗಾಳಿ , ಬೆಳಕು ನೀರಿನ ವ್ಯವಸ್ಥೆ ಕಲ್ಪಿಸಬೇಕು. ಪರೀಕ್ಷಾರ್ಥಿಗಳಿಗೆ ಪರೀಕ್ಷೆ ಬರೆಯಲು ಸೂಕ್ತ ಆಸನದ ಸೌಲಭ್ಯ ಕಲ್ಪಿಸಬೇಕು. ಪರೀಕ್ಷಾ ಸಮಯದಲ್ಲಿ ಯಾವುದೇ ಅಕ್ರಮ, ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸಬೇಕು. ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಸಂಬಂಧಿತ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕೆಂದರು.


ಉದಯವಾಹಿನಿ ಚಿತ್ರ

**ಮಾರ್ಚ 21 ರಿಂದ ಏಪ್ರಿಲ್ 4 ರವರೆಗೆ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿವೆ. ಜಿಲ್ಲೆಯಲ್ಲಿ ಒಟ್ಟು 16458 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷೆಗಳು ಶಾಂತಿಯುತವಾಗಿ ಹಾಗೂ ಸುಗಮವಾಗಿ ಜರುಗಲು ಕ್ರಮ ವಹಿಸಲಾಗಿದೆ**

**-ಆರ್.ಎಸ್.ಬುರುಡಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ**

ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ಹಾಗೂ ಅನಧಿಕೃತ ವ್ಯಕ್ತಿಗಳಿಗೆ ಪರೀಕ್ಷಾ ಕೇಂದ್ರಗಳ ಪ್ರವೇಶವನ್ನು ನಿರ್ಬಂಧಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಬುಕ್‌ಸ್ಟಾಲ್, ಫೋಟೊ ಕಾಪಿಯರ್‌ಗಳನ್ನು ಬಂದು ಮಾಡಲು ಆದೇಶಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರಹೋಗುವ ಸಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಕ್ಯಾಮರಾ ಹೊಂದಿರದ ಸಾಮಾನ್ಯ ಮೊಬೈಲ್ ಇರಿಸಿಕೊಳ್ಳಲು ಅವಕಾಶವಿದ್ದು, ಉಳಿದ ಎಲ್ಲಾ ಪರೀಕ್ಷಾ ಸಿಬ್ಬಂದಿ/ ವಿದ್ಯಾರ್ಥಿಗಳು ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು/ ಉಪಯೋಗಿಸುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು. ಡಯಟ್‌ನ ಉಪನಿರ್ದೇಶಕ ಜಿ.ಎಲ್. ಬಾರಾಟಕ್ಕೆ ಸೇರಿದಂತೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

### ಸೂಕ್ತ ಬಂದೋಬಸ್ತ್

**ಜಿ.ಪಂ.ಮುಖ್ಯಕಾರ್ಯನಿರ್ವಹಣಾಧಿಕಾರಿ ಭರತ್ ಎಸ್ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಪಾರದರ್ಶಕವಾಗಿ ಹಾಗೂ ವ್ಯವಸ್ಥಿತವಾಗಿ ಜರುಗುವಂತೆ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಸೂಚಿಸಿದರು. ಸಭೆಯಲ್ಲಿ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಲು ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಬಸ್‌ಸೌಲಭ್ಯ ಕಲ್ಪಿಸುವುದು, ಪರೀಕ್ಷಾ ಕೇಂದ್ರಗಳ ಸ್ವಚ್ಚತೆ, ಸೂಕ್ತ ಬಂದೋಬಸ್ತ್, ಸಿ.ಸಿ.ಟಿವಿ ಅಳವಡಿಕೆ ಕುರಿತು ಚರ್ಚಿಸಲಾಯಿತು.**

---

## ಶ್ರೀ ರೇಣುಕಾಚಾರ್ಯರ ಜಯಂತಿ

• ಉದಯವಾಹಿನಿ ಬಾಗಲಕೋಟ

ಶ್ರೀ ಜಗದ್ಗುರು ರೇಣುಕಾಚಾರ್ಯರು ಕೊಲ್ಲನಪಾಕಿ ಸೋಮೇಶ್ವರ ಲಿಂಗದಿಂದ ಅನುರ್ಭವಿಸಿ ಭೂಮಿಯ ಮೇಲಿರುವ ಎಲ್ಲರಿಗೂ ಕೂಡ ಧರ್ಮದ ಮಾರ್ಗವನ್ನು ಬೋಧಿಸುತ್ತಾ ಅಗಸ್ತ್ಯ ಮಹಾಮುನಿಗೆ ಧರ್ಮ ಮಾರ್ಗವನ್ನು ಬೋಧಿಸುತ್ತಾರೆ. ಅದುವೇ ಸಿದ್ಧಾಂತ ಶಿಖಾಮಣಿಯಾಗುತ್ತದೆ ಎಂದು ಶ್ರೀ ಸಿದ್ದಲಿಂಗಯ್ಯ ಹಿರೇಮಠ ಅವರು ಹೇಳಿದರು.

ಗದ್ದನಕೇರಿ ಗ್ರಾಮ ಪಂಚಾಯತ ಕಾರ್ಯಲಯದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆಯ ವೇಳೆ ಅವರು ಹೇಳಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಎಂದರೆ ಯಾವ ಸಮಯಕ್ಕೆ ಭೂಮಿಯ ಮೇಲೆ ಅನ್ಯಾಯ ಅಧರ್ಮ, ಅನೀತಿ, ಅಸತ್ಯಗಳು ತಾಂಡವನ್ನು ಆಡುತ್ತಿದ್ದವು ಶಿವನು ಚಿಂತಿತನಾಗಿ ಧರ್ಮ ಮಾರ್ಗವನ್ನು ಜನರಿಗೆ ಬೋಧಿಸಬೇಕೆಂತೇಳಿ ತನ್ನ 5 ಮುಖಗಳಿಂದ ಐದು ಜನರನ್ನು ಅನರರ್ಭವಿಸುತ್ತಾನೆ.

ಅದರಲ್ಲಿ ಮೊದಲನೆಯದಾಗಿ ಶ್ರೀ ರೇಣುಕಾಚಾರ್ಯರು ಈ ರೀತಿಯಾಗಿ ವೀರಶೈವ ಧರ್ಮವನ್ನು ಸ್ಥಾಪಿಸಿದಂತ ರೇಣುಕಾಚಾರ್ಯರು ಇಡೀ ಭೂಮಿಯ ಮೇಲೆ ಧರ್ಮ ಉಳಿಯುವಂತೆ ನೋಡಿಕೊಳ್ಳುತ್ತಾರೆ. ಭದ್ರಾನದಿ ದಂಡೆಯ ಮೇಲೆ ರಂಭಾಪುರಿ ಪೀಠ ಆರಂಭಿಸುವ ಮೂಲಕ ಪ್ರಥಮ ಜಗದ್ಗುರುಗಳು ಆಗುತ್ತಾರೆ. ಈ ರೀತಿಯಾಗಿ ರೇಣುಕಾಚಾರ್ಯರು ಇಡೀ ಜಗತ್ತಿನ ತುಂಬಾ ಧರ್ಮ ಮಾರ್ಗವನ್ನು ಬೋಧಿಸುತ್ತಾರೆ. ಅವರೇ ವೀರಶೈವ ಮತ ಸ್ಥಾಪಕರಾಗಿರುತ್ತಾರೆ ಎಂದು ಹೇಳಿದರು.

---

## ವಡಗೇರಾ ಬಸ್ ನಿಲ್ದಾಣದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಒತ್ತಾಯ

• ಉದಯವಾಹಿನಿ ವಡಗೇರಾ

ತಾಲ್ಲೂಕು ಕೇಂದ್ರದಲ್ಲಿರುವ ಬಸ್ ನಿಲ್ದಾಣವು ಸಮಸ್ಯೆಗಳ ತಾಣವಾಗಿ ಮಾರ್ಪಟ್ಟಿದೆ ಎಂದು ರಾಜ್ಯ ರೈತ ಸಂಘ ಹಸಿರು ಸೇನೆ ತಾಲ್ಲೂಕು ಅಧ್ಯಕ್ಷ ವಿದ್ಯಾಧರ್ ಜಾಕ ಆರೋಪಿಸಿದ್ದಾರೆ. ಬಸ್ ನಿಲ್ದಾಣ ನಿರ್ಮಾಣವಾಗಿ ಸುಮಾರು ವರ್ಷಗಳೇ ಕಳೆದಿವೆ ಆದರೆ ಇಲ್ಲಿ ಯಾವುದೇ ರೀತಿಯಾದ ಮೂಲ ಸೌಕರ್ಯವಿಲ್ಲ ಇದು ಹೆಸರಿಗೆ ಮಾತ್ರ ಬಸ್ ನಿಲ್ದಾಣ ಪ್ರಯಾಣಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಮತ್ತು ಶೌಚಾಲಯವಂತೂ ಇದ್ದು ಇಲ್ಲದಂತಾಗಿ ಪಾಳು ಬಿದ್ದಿದೆ ಬಸ್ ನಿಲ್ದಾಣದ ಆವರಣದ ತುಂಬೆಲ್ಲ ಜಾಲಿ ಮುಳ್ಳುಕಂಟಿಗಳು ಬೆಳೆದು ನಿಂತಿವೆ ಎಲ್ಲೆಂದರಲ್ಲಿ ಕಸ ಕಡ್ಡಿಗಳ ರಾಶಿ ಪ್ರಯಾಣಿಕರನ್ನು ಸ್ವಾಗತಿಸುತ್ತದೆ ಸಂಬಂಧಿಸಿದ ಅಧಿಕಾರಿಗಳು ಮಾತ್ರ ಕಣ್ಮುಚ್ಚಿ ಕುಳಿತಿದ್ದಾರೆ. ಎಂದು ಅವರು ಕಿಡಿ ಕಾರಿದ್ದಾರೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬಸ್ ನಿಲ್ದಾಣದಲ್ಲಿ ಮೂಲಭೂತ ಸೌಕರ್ಯ ಹಾಗೂ ಸ್ವಚ್ಛತೆಗೆ ಮುಂದಾಗಬೇಕು ಒಂದು ವೇಳೆ ನಿರ್ಲಕ್ಷ್ಯ ವಹಿಸಿದ್ದಲ್ಲಿ ರಾಜ್ಯ ರೈತ ಸಂಘ ತಾಲ್ಲೂಕು ಘಟಕದ ವತಿಯಿಂದ ಉಗ್ರ ಹೋರಾಟ ಮಾಡುವುದಾಗಿ ತಾಲ್ಲೂಕು ಅಧ್ಯಕ್ಷ ವಿದ್ಯಾಧರ್ ಜಾಕ ,ಶರಣು ಜಡಿ , ಸತೀಶ್ ಪೂಜಾರಿ, ಹಳ್ಳೆಪ್ಪ ತೇಜೇರ, ಎಚ್ಚರಿಕೆ ನೀಡಿದ್ದಾರೆ


ಉದಯವಾಹಿನಿ ಚಿತ್ರ

---

## ಮಟಕಾ: ಇಬ್ಬರ ಬಂಧನ

• ಉದಯವಾಹಿನಿ ಕಲಬುರಗಿ

ನಗರದ ಕೇಂದ್ರ ಬಸ್ ನಿಲ್ದಾಣ ಪಕ್ಕದ ಜಿಡಿಎ ಲೇಔಟ್‌ನಲ್ಲಿರುವ ಎಲ್‌ಐಸಿ ಆಫೀಸ್ ಹತ್ತಿರದ ಖುಲ್ಲಾ ಜಾಗದಲ್ಲಿ ಮಟಕಾ ನಂಬರ್ ಬರೆದುಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇಲೆ ಅಶೋಕನಗರ ಪೊಲೀಸ್ ಠಾಣೆಯ ಪಿಐ ಅರುಣಕುಮಾರ, ಅಪರಾಧ ವಿಭಾಗದ ಸಿಬ್ಬಂದಿ ಶಿವಲಿಂಗ, ಚಂದ್ರಶೇಖರ ಅವರು ದಾಳಿ ನಡೆಸಿ ಹೀರಾಪುರ ಹೀರಾ ನಗರದ ಅಂಬ್ರೀಷ್ ಬಾಬುರಾವ ಹಡಪದ (44) ಎಂಬಾತನನ್ನು ಬಂಧಿಸಿ 2,660 ರೂ.ನಗದು, ಮಟಕಾ ಚೀಟಿ ಜಪ್ತಿ ಮಾಡಿದ್ದಾರೆ. ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಡಣಿ ಗ್ರಾಮದ ಶಂಕರಲಿಂಗ ಗುಡಿಯ ಹತ್ತಿರ ಮಟಕಾ ನಂಬರ್ ಬರೆದುಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇಲೆ ಫರಹತಾಬಾದ ಪೊಲೀಸ್ ಠಾಣೆಯ ಮುಖ್ಯಪೇದೆ ರಾಜಕುಮಾರ, ಮಂಜುನಾಥ ಅವರು ದಾಳಿ ನಡೆಸಿ ಕಡಣಿ ಗ್ರಾಮದ ಶರಣಬಸಪ್ಪ ಕುಂಬಾರ (38) ಎಂಬಾತನನ್ನು ಬಂಧಿಸಿ 2450 ರೂ.ನಗದು ಮಟಕಾ ಚೀಟಿ ಜಪ್ತಿ ಮಾಡಿದ್ದಾರೆ. ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

## ಬೆಂಬಲ ಬೆಲೆಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಆರಂಭಕ್ಕೆ ರೈತ ಸಂಘ ಒತ್ತಾಯ

• ಉದಯವಾಹಿನಿ, ಬಳ್ಳಾರಿ

ಒಂದು ವಾರದಲ್ಲಿ ಬಳ್ಳಾರಿಯಲ್ಲಿ ಒಣ ಮೆಣಸಿನಕಾಯಿಗೆ ಬೆಂಬಲ ಘೋಷಿಸಿ ಖರೀದಿಸಲು ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಮಾಡಲಿದೆಂದು ರಾಜ್ಯ ರೈತ ಸಂಘ ಹೇಳಿದೆ. ಸಂಘದ ಅಧ್ಯಕ್ಷ ಕರೂರು ಮಾಧವರೆಡ್ಡಿ ಸುದ್ಧಿಗೋಷ್ಠಿ ನಡೆಸಿ. ಈಗಾಗಲೇ ಆಂದ್ರ ಪ್ರದೇಶದಲ್ಲಿ ಬೆಂಬಲ ಬೆಲೆ ಅಡಿಯಲ್ಲಿ ಕ್ವಿಂಟಲ್ ಗೆ 11781 ರೂ ಗಳಂತೆ ಒಣಮೆಣಸಿನಕಾಯಿಯನ್ನು ಖರೀದಿ ಪ್ರಕ್ರಿಯೆ ನಡೆದಿದೆ. ಅದರಂತೆ 13500 ಧರದಲ್ಲಿ ಖರೀದಿ ಕೇಂದ್ರಗಳನ್ನು ಬಳ್ಳಾರಿ ಸೇರಿದಂತೆ ರಾಜ್ಯದ


ಉದಯವಾಹಿನಿ ಚಿತ್ರ

ಹತ್ತು ಜಿಲ್ಲೆಗಳಲ್ಲಿ ತೆರೆಯಬೇಕು ಎಂದರು.

ಈ ವಿಷಯದಲ್ಲಿ ರಾಜ್ಯದಲ್ಲಿನ ಸಂಸದರು ರೈತರ ನೆರವಿಗೆ ನಿಲ್ಲುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಡ ತರುತ್ತಿಲ್ಲ. ರಾಜ್ಯದವರೇ ಕೇಂದ್ರ ಸಚಿವರಾದಂತಹ ಪ್ರಹ್ಲಾದ್ ಜೋಶಿಯವರು ಈ ಕೂಡಲೆ ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತಂದು ಮಾರುಕಟ್ಟೆ ಮಧ್ಯಸ್ಥಿಕ ಯೋಜನೆ ಅಡಿಯಲ್ಲಿ ಈ ವಾರದಲ್ಲಿ ಒಣ ಮೆಣಸಿನಕಾಯಿಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ ಖರೀದಿ ಕೇಂದ್ರಗಳನ್ನು ತೆರೆಯುವ ವ್ಯವಸ್ಥೆಯನ್ನು ತುರ್ತಾಗಿ ಮಾಡಬೇಕಿದೆಂದರು.

### ಕಾಣೆಯಾದ ಜಮೀರ್

**ನಾವು ಬರೆದ ಪತ್ರಕ್ಕೆ ಉತ್ತರ ಇಲ್ಲ, ಫೋನ್ ಕರೆ ಮಾಡಿದರೆ ಸ್ವೀಕರಿಸಲ್ಲ. ಜಿಲ್ಲೆಯ ಉಸ್ತುವಾರಿ ಸಚಿವ ಜಮೀರ್ ಅಹಮ್ಮದ್ ಇವರಿಗೆ ಜವಾಬ್ದಾರಿ ಇಲ್ವಾ, ಕಾಣೆಯಾಗಿದ್ದಾನೆಂದು ದೂರು ನೀಡಬೇಕಿದೆ.**

---

#### ವಿವಿಧ ಯೋಜನೆಗಳ ಕುರಿತು ಪ್ರಗತಿ ಪರಿಶೀಲನೆ ಹಾಗೂ ಸಮಾಲೋಚನಾ ಸಭೆ

## ನಿವೇಶನ ರಹಿತರಿಗೆ ನಿವೇಶನ ಸೌಲಭ್ಯ ಕಲ್ಪಿಸಲು ಸೂಚನೆ


• ಉದಯವಾಹಿನಿ, ಬಳ್ಳಾರಿ

ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ನಿವೇಶನ ರಹಿತರಿಗೆ ನಿವೇಶನ, ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ.ಜಿ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಜಾರಿಯಾದ ವಿವಿಧ ಯೋಜನೆಗಳ ಕುರಿತು ಪ್ರಗತಿ ಪರಿಶೀಲನೆ ಹಾಗೂ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಲೆಮಾರಿ ಸಮುದಾಯದವರು ಹೊಟ್ಟೆಪಾಡಿಗಾಗಿ ಅಲೆದಾಟ ನಡೆಸಿ ತಮ್ಮ ಜೀವನ ಸಾಗಿಸುತ್ತಾರೆ. ಮುಖ್ಯವಾಗಿ ಅವರಿಗೆ ನೆಲೆ ಇರುವುದಿಲ್ಲ. ಹಾಗಾಗಿ ಅವರಿಗೆ ಸೂರು ಕಲ್ಪಿಸುವುದು ಅಧಿಕಾರಿಗಳು ಆದ್ಯತೆಯಾಗಿ ಪರಿಗಣಿಸಬೇಕು ಎಂದು ತಿಳಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದ ನಿವೇಶನ ರಹಿತರಿಗೆ ನಿವೇಶನ ದೊರಕಿಸಿಕೊಡಲು ಜಾಗ ಇಲ್ಲದಿದ್ದಲ್ಲಿ ಜಿಲ್ಲಾಧಿಕಾರಿಯವರಿಂದ ಸೂಕ್ತ ಜಾಗ ಗುರುತಿಸಿ ನಿವೇಶನ ಹಂಚಿಕೆ ಮಾಡುವ ಕುರಿತು 2016 ರಲ್ಲಿ ಸರ್ಕಾರದ ಆದೇಶವಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲೆಯಲ್ಲಿರುವ ವಿವಿಧ ಅಲೆಮಾರಿ ಸಮುದಾಯದವರ ಜಾತಿ ವಿವರಗಳನ್ನು ಸಮಾಜ ಕಲ್ಯಾಣ ಇಲಾಖೆ, ಆಯಾ ತಾಲ್ಲೂಕು ತಹಶೀಲ್ದಾರರು ಮತ್ತು ಇತರೆ ಇಲಾಖೆಗಳ ಜಂಟಿ ಸಹಯೋಗದಲ್ಲಿ ತಾಲ್ಲೂಕು ವಾರು ಜಂಟಿ ಸರ್ವೇ ಕಾರ್ಯ ನಡೆಸಬೇಕು ಎಂದು ತಿಳಿಸಿದರು. ಅಧಿಕಾರಿಗಳು ಮತ್ತು ನಾಮ ನಿರ್ದೇಶಿತ ಸದಸ್ಯರ ಮಧ್ಯ ಸಮನ್ವಯತೆ ಇರಬೇಕು. ಈ ಸಮುದಾಯಗಳಿಗೆ ಸರ್ಕಾರದ ಯೋಜನೆಗಳಡಿ ಸೌಲಭ್ಯಗಳು ದೊರಕಿಸಬೇಕು ಎಂಬ ಉದ್ದೇಶದೊಂದಿಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅನುಷ್ಠಾನ ಸಮಿತಿ ಇದ್ದು, ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಸಭೆ ನಡೆಸಿ ಯೋಜನೆಗಳ ಲಾಭ ದೊರಕಿಸಲು ಮತ್ತು ಅರ್ಹ ಫಲಾನುಭವಿಗಳ ಆಯ್ಕೆಗೆ ನೆರವಾಗುವಂತೆ ಅವರು ಸಲಹೆ ನೀಡಿದರು.


ಉದಯವಾಹಿನಿ ಚಿತ್ರ

### ಜಾಗೃತಿ ಕಾರ್ಯಕ್ರಮ ಆಯೋಜಿಸಿ

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಲೆಮಾರಿ ಜನಾಂಗದ ಮಕ್ಕಳು ಮುಖ್ಯ ವಾಹಿನಿಗೆ ಬರಬೇಕು. ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಶಿಕ್ಷಣದಿಂದಲೇ ಅಭಿವೃದ್ಧಿ ಸಾಧ್ಯ. ಹಾಗಾಗಿ ಅವರಿರುವ ಜಾಗಗಳಲ್ಲಿ ಶಿಕ್ಷಣ ಕುರಿತು ಅರಿವು ಮೂಡಿಸುವ ಕೆಲವಾಗಬೇಕು ಎಂದು ಹೇಳಿದರು. ಅಲೆಮಾರಿ ಸಮುದಾಯದವರಿಗೆ ಭೂಮಿ, ನೆಲೆ, ಸೂರು ಮುಖ್ಯವಾಗಿ ಶಿಕ್ಷಣದಿಂದ ವಂಚಿತರಾಗಿ ಮೌಢ್ಯತೆಯಿಂದ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಶಿಕ್ಷಣದ ಅರಿವು ಮೂಡಿಸುವುದರ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಲು ಅಧಿಕಾರಿಗಳು ಕಾಳಜಿ ವಹಿಸಬೇಕು. ಬಾಲ್ಯ ವಿವಾಹ ಪದ್ಧತಿಯಿಂದಾಗುವ ದುಷ್ಪರಿಣಾಮ ಕುರಿತು ತಿಳಿಸಬೇಕು. ಅಲೆಮಾರಿ ಸಮುದಾಯದವರಿಗಾಗಿಯೇ ಇರುವ ಸರ್ಕಾರಿ ಸೌಲಭ್ಯಗಳ ಕುರಿತು ತಿಳಿಸುವ ಕೆಲಸ ಮಾಡಬೇಕು ಎಂದರು.**

### ಅಹವಾಲು ಸ್ವೀಕಾರ

**ಬಳಿಕ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ಸಂಘ ಸಂಸ್ಥೆಗಳ ಮತ್ತು ಅಲೆಮಾರಿ ಸಮುದಾಯದ ಸಾಮಾನ್ಯ ಜನರಿಂದ ಕುಂದುಕೊರತೆಗಳ ಬಗ್ಗೆ ಅಹವಾಲು ಸ್ವೀಕಾರ ಮಾಡಿದರು. ಮೂಲ ಜನಾಂಗದವರಿಗೆ ವಸತಿ ರಹಿತರಿಗೆ ವಸತಿ ಸೌಲಭ್ಯ, ನಿವೇಶನ ರಹಿತರಿಗೆ ನಿವೇಶನ ಸೌಲಭ್ಯ, ಸಮುದಾಯ ಭವನ, ಸ್ಮಶಾನಕ್ಕೆ ದಾರಿ ಕಲ್ಪಿಸುವ ಕುರಿತು, ಭೂಮಿ ಹಂಚಿಕೆ ಸೇರಿದಂತೆ ಹಲವಾರು ಸಮಸ್ಯೆಗಳ ಬಗ್ಗೆ ಅಹವಾಲು ಸಲ್ಲಿಕೆಯಾದವು. ಇದೇ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.**

ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಗಳಡಿ ಇರುವ ಗುರಿಗಳನ್ನು ನಿಗದಿತ ಅವಧಿಯೊಳಗೆ ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದರು. ಈ ವೇಳೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮ್ಮೈರ್, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಬಿ.ಎಸ್.ಆನಂದ್ ಕುಮಾರ್ ಉಪಸ್ಥಿತರಿದ್ದರು.

---

## ಶ್ರೀ ರೇಣುಕಾಚಾರ್ಯರ ಜಯಂತಿ

• ಉದಯವಾಹಿನಿ, ಗುಳೇದಗುಡ್ಡ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ತಾಲ್ಲೂಕು ಆಡಳಿತ ವತಿಯಿಂದ ರೇಣುಕಾಚಾರ್ಯರ ಭಾವಚಿತ್ರಕ್ಕೆ ತಹಶೀಲ್ದಾರ ಮಂಗಳ ಎಂ ಪೂಜೆಯನ್ನು ಸಲ್ಲಿರುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಂಗಮ ಸಮಾಜದ ಹಿರಿಯರಾದ ವಿಶ್ವನಾಥ್ ಹಿರೇಮಠ ಮಾತನಾಡಿದರು. ಈ ಸಂದರ್ಭದಲ್ಲಿ ಜಂಗಮ ಸಮಾಜದ ಅಧ್ಯಕ್ಷ ಶಿವನಯ್ಯ ಮಳ್ಳಿಮಠ, ಪ್ರಭು ತಟ್ಟಿಮಠ ಬಸವರಾಜ ಸಿಂದಗಿಮಠ, ಪಡೆದಯ್ಯ ಕಕ್ಕಯ್ಯನಮಠ, ಈರಯ್ಯ ಚನ್ನಸಂಗಯ್ಯನಮಠ, ಭುವನೇಶ ಪೂಜಾರಿ, ಸಂಗಯ್ಯ ಮತ್ತಿತರರು ಇದ್ದರು.

---

## ಅದ್ದೂರಿ ಮಹಿಳಾ ದಿನಾಚರಣೆ

• ಉದಯವಾಹಿನಿ, ಚನ್ನಮ್ಮನ ಕಿತ್ತೂರು

ಸಮೀಪದ ಭೂರಣಕಿ ಗ್ರಾಪಂ ಸಭಾಭವನದಲ್ಲಿ ಮಹಿಳಾ ದಿನಾಚರಣೆ ಅದ್ದೂರಿಯಿಂದ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಗ್ರಾಪಂ ಅಧ್ಯಕ್ಷೆ ಗೀತಾ. ಗ. ಶಿಂದೋಳ್ಕರ ವಹಿಸಿಕೊಂಡು ದೀಪ ಬೆಳಗಿಸಿ ಸಭೆ ಉದ್ಘಾಟಿಸಿದರು.

ಅಭಿವೃದ್ಧಿ ಅಧಿಕಾರಿ ಬಿ.ಬಿ. ಅಮ್ಮಿನಭಾವಿಯವರು ಮಾತನಾಡಿ ಮಹಿಳೆಯರಿಗೆ ಧಾರ್ಮಿಕ ಹಕ್ಕು ಕೊಟ್ಟು ಎತ್ತರವಾದ ಸ್ಥಾನ ನೀಡಿದವರು ಬಸವಾದಿ ಶರಣರು ಇಂದಿನ ಮಹಿಳೆಯರು ಬಲಿಷ್ಠ ಜಗತ್ತನ್ನು ಕಟ್ಟುತ್ತಿದ್ದಾರೆ. ಉದಾಹರಣೆಗೆ ರಾಣಿ ಚನ್ನಮ್ಮ ಸೇರಿದಂತೆ ಹಲವಾರು ವೀರ ಮಹಿಳೆಯರು ಇದ್ದಾರೆ. ಸಹನೆ, ಕರುಣೆ, ಮಮತೆ, ಸ್ತ್ರೀ ಸಮಾಜ, ಕುಟುಂಬದ ಕಣ್ಣು ಪ್ರತಿಯೊಂದು ಕ್ಷೇತ್ರದಲ್ಲಿ ತನ್ನದೇ ಆದ ವಿಶೇಷ ಸ್ಥಾನಮಾನ ಹೊಂದಿದ್ದಾಳೆಂದರು.


ಉದಯವಾಹಿನಿ ಚಿತ್ರ

ಉದಯ ವಾಹಿನಿ
ದೇಶ/ವಿದೇಶ
ಶುಕ್ರವಾರ 14 ಮಾರ್ಚ್ 2025
07

# ಸ್ಪೇಸ್ ಎಕ್ಸ್ ಉಡಾವಣೆ ವಿಳಂಬ, ಸುನಿತಾ ವಿಲಿಯಮ್ಸ್ ಕರೆತರುವ ಕಾರ್ಯಾಚರಣೆಗೆ ಮತ್ತೆ ಹಿನ್ನಡೆ



**ಕೇಪ್ ಕ್ಯಾನವೆರಲ್:** ಲಾಂಚ್ ಪ್ಯಾಡ್ ಸಮಸ್ಯೆಯಿಂದಾಗಿ ಸ್ಪೇಸ್‌ಎಕ್ಸ್ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೊರಟಿದ್ದ ವಾಹಕ ಹಾರಾಟ ವಿಳಂಭಗೊಳಿಸಿದೆ. ಒಂಬತ್ತು ತಿಂಗಳ ಕಕ್ಷೆಯಲ್ಲಿ ಸಿಲುಕಿರುವ ನಾಸಾದ ಇಬ್ಬರು ಗಗನಯಾತ್ರಿಗಳಾದ ಬುಚ್ ವಿಲ್ಮೋರ್ ಮತ್ತು ಸುನಿತ ವಿಲಿಯಮ್ಸ್ ಅವರನ್ನು ಕರೆತರುವ ಕಾರ್ಯಾಚರಣೆಗೆ ಮತ್ತೆ ಹಿನ್ನಡೆಯಾಗಿದೆ. ಇಬ್ಬರೂ ಭೂಮಿಗೆ ಕರೆತಂದು ಹೊಸ ಗಗನ ಯಾತ್ರಿಗಳನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳಿಸುವ ಯೋಜನೆ ನಾಸಾ ಮುಂದಾಗಿದೆ. ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಫಾಲ್ಕನ್ ರಾಕೆಟ್ ಅನ್ನು ಸಂಜೆ ಉಡಾವಣೆಗೆ ನಿರ್ಧರಿಸಲಾಗಿತ್ತು ಆದರೆ ನಾಲ್ಕು ಗಂಟೆ ಮುನ ನಿರ್ಣಾಯಕ ಹೈಡ್ರಾಲಿಕ್ ವ್ಯವಸ್ಥೆಯಲ್ಲಿ ಸಮಸ್ಯೆ ಕಾಣಿಸಿಕೊಂಡು ಕಳವಳಗಳು ಹುಟ್ಟಿಕೊಂಡವು ಎಂದು ವರದಿಯಾಗಿದೆ.

ಕೌಂಟ್ ಡೌನ್ ಗಡಿಯಾರ ಶುರುವಾಗುತ್ತಿದಂತೆ ಎಂಜಿನಿಯರ್‌ಗಳು ರಾಕೆಟ್ ಅನ್ನು ಅದರ ಬೆಂಬಲ ರಚನೆಗೆ ಜೋಡಿಸುವ ಎರಡು ತೋಳುಗಳಲ್ಲಿ ಒಂದನ್ನು ಬಿಡುಗಡೆ ಮಾಡಲು ಬಳಸುವ ಹೈಡ್ರಾಲಿಕ್‌ಗಳ ಪರಿಶೀಲನೆ ವೇಳೆ ಈ ರಚನೆಯು ಲಿಫ್ಟ್ ಆಫ್‌ಗೆ ಸಮಸ್ಯೆ ತೋರಿಸಿತ್ತು. ಈಗಾಗಲೇ ತಮ್ಮ ಕ್ಯಾಪ್ಸುಲ್‌ನಲ್ಲಿ ಕಟ್ಟಲ್ಪಟ್ಟಿರುವ ನಾಲ್ವರು ಗಗನಯಾತ್ರಿಗಳು ಅಂತಿಮ ನಿರ್ಧಾರಕ್ಕಾಗಿ ಕಾಯುತ್ತಿದ್ದರು, ಅದು ಕೌಂಟ್‌ಡೌನ್‌ನಲ್ಲಿ ಒಂದು ಗಂಟೆಗಿಂತ ಕಡಿಮೆ ಸಮಯ ಉಳಿದಿರುವಾಗ ಕೆಳಗಿಳಿಯಿತು.

ಸ್ಪೇಸ್ ಎಕ್ಸ್ ಆ ದಿನಕ್ಕೆ ರದ್ದುಗೊಂಡಿತು. ಅಧಿಕಾರಿಗಳು ನಂತರ ಉಡಾವಣೆಯು ಶುಕ್ರವಾರದವರೆಗೆ ಆಫ್ ಆಗಿದೆ ಎಂದು ಹೇಳಿದರು. ಜೂನ್‌ನಿಂದ ಅಲ್ಲೇ ಇರುವ ವಿಲ್ಮೋರ್, ವಿಲಿಯಮ್ಸ್ ಅವರನ್ನು ಅಮೆರಿಕ, ಜಪಾನ್, ರಷ್ಯಾದ ಸಿಬ್ಬಂದಿ ಬದಲಾಯಿಸಲಿದ್ದಾರೆ. ಬೋಯಿಂಗ್ ಹೊಸ ಸ್ಟಾರ್‌ಲೈನರ್ ಕ್ಯಾಪ್ಸುಲ್ ಸಾಗಣೆಯಲ್ಲಿ ಪ್ರಮುಖ ವೈಫಲ್ಯಗಳನ್ನು ಎದುರಿಸಿದ ನಂತರ ಇಬ್ಬರು ಪರೀಕ್ಷಾ ಪೈಲಟ್ ಗಳು ದೀರ್ಘಾವಧಿಯ ವಾಸ್ತವ್ಯಕ್ಕಾಗಿ ಬಾಹ್ಯಾಕಾಶ ನಿಲ್ದಾಣಕ್ಕೆ ಸ್ಥಳಾಂತರಗೊಳ್ಳಬೇಕಾಯಿತು.

# ಗುಣಮಟ್ಟ ಪರೀಕ್ಷೆಯಲ್ಲಿ 23 ಕಡೆ ಯಮುನಾ ನದಿ ನೀರು ವಿಫಲ

**ನವದೆಹಲಿ:** ರಾಜಧಾನಿ ದೆಹಲಿ ಸುತ್ತಮುತ್ತ ಪ್ರದೇಶ ದಲ್ಲಿ ಯಮುನಾ ನದಿಯು ಜೀವಿಗಳು ಬದುಕಲು ಹೊಂದಿರುವ ಸಾಮರ್ಥ್ಯ ಬಹುತೇಕ ಕಳೆದುಹೋಗಿದೆ ಎಂದು ಸಂಸದೀಯ ಸಮಿತಿ ಹೇಳಿದೆ, ಮೇಲ್ವಿಚಾರಣೆ ಮಾಡಲಾದ 33 ಸ್ಥಳಗಳಲ್ಲಿ 23 ಸ್ಥಳಗಳು ಪ್ರಾಥಮಿಕ ನೀರಿನ ಗುಣಮಟ್ಟದ ಮಾನದಂಡಗಳನ್ನು ಪೂರೈಸುವಲ್ಲಿ ವಿಫಲವಾಗಿವೆ, ಇದರಲ್ಲಿ ರಾಷ್ಟ್ರ ರಾಜಧಾನಿಯ ಆರು ಪ್ರದೇಶಗಳು ಒಳಗೊಂಡಿವೆ.

ಯಮುನಾ ನದಿಯು ದೆಹಲಿ ಮೂಲಕ 40 ಕಿ.ಮೀ ಪ್ರದೇಶದಲ್ಲಿ ಹರಿಯುತ್ತದೆ, ಹರಿಯಾಣ ದಿಂದ ಪಲ್ಲಾದಲ್ಲಿ ಪ್ರವೇಶಿಸಿ ಅಸ್ಗರ್‌ಪುರ ಮೂಲಕ ಉತ್ತರ ಪ್ರದೇಶಕ್ಕೆ ನಿರ್ಗಮಿಸುತ್ತದೆ. ನದಿಯ ಜೀವ ಉಳಿಸುವ ಸಾಮರ್ಥ್ಯವನ್ನು ಪ್ರತಿಬಿಂಬಿಸುವ ಕರಗಿದ ಆಮ್ಲಜನಕ ಮಟ್ಟಗಳು ದೆಹಲಿ ಪ್ರದೇಶದಲ್ಲಿ ಬಹುತೇಕ ಇಲ್ಲವಾಗಿದೆ ಎಂದು ಜಲಸಂಪನ್ಮೂಲಗಳ ಕುರಿತಾದ ಸಂಸದೀಯ ಸ್ಥಾಯಿ ಸಮಿತಿ ಕಳೆದ ಸಂಸತ್ತಿನಲ್ಲಿ ಮಂಡಿಸಿದ ತನ್ನ ವರದಿಯಲ್ಲಿ ತಿಳಿಸಿದೆ. ಯಮುನಾ ನದಿಯ ಮೇಲ್ಭಾಗದ ಸ್ವಚ್ಛತಾ ಯೋಜನೆ, ನದಿಪಾತ್ರ ನಿರ್ವಹಣೆಯ ಕುರಿತಾದ ತನ್ನ ವರದಿಯಲ್ಲಿ, ದೆಹಲಿ ಮತ್ತು ಉತ್ತರ ಪ್ರದೇಶದಲ್ಲಿ ಒಳಚರಂಡಿ ಸಂಸ್ಕರಣಾ ಘಟಕಗಳ ನಿರ್ಮಾಣ, ನವೀಕರಣದ ಹೊರತಾಗಿಯೂ, ಮಾಲಿನ್ಯದ ಮಟ್ಟಗಳು ಆತಂಕಕಾರಿಯಾಗಿ ಹೆಚ್ಚಿವೆ ಎಂದು ಸಮಿತಿ ಎಚ್ಚರಿಸಿದೆ. ಮಾಲಿನ್ಯವನ್ನು ನಿಭಾಯಿಸಲು, ನಿಯಂತ್ರಿಸಲು, ನದಿಯ ಆರೋಗ್ಯವನ್ನು ಮರುಸ್ಥಾಪಿಸಲು ಎಲ್ಲಾ ಸಂಬಂಧಪಟ್ಟವರ ಸಂಘಟಿತ ಪ್ರತಿಕ್ರಿಯೆಗೆ ಸಮಿತಿ ಕರೆ ನೀಡಿದೆ. ಮೇಲ್ವಿಚಾರಣೆ ಮಾಡಲಾದ 33 ಸ್ಥಳಗಳಲ್ಲಿ ಉತ್ತರಾಖಂಡದಲ್ಲಿ ನಾಲ್ಕು ಮತ್ತು ಹಿಮಾಚಲ ಪ್ರದೇಶದಲ್ಲಿ ನಾಲ್ಕು ಮಾತ್ರ ಪ್ರಾಥಮಿಕ ನೀರಿನ ಗುಣಮಟ್ಟದ ಮಾನದಂಡಗಳನ್ನು ಪೂರೈಸಿವೆ ಎಂದು ಅದು ಹೇಳಿದೆ.



ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಜ. 2021, ಮೇ 2023 ರ ನಡುವೆ 33 ಸ್ಥಳಗಳಲ್ಲಿ ನೀರಿನ ಗುಣಮಟ್ಟವನ್ನು ನಿರ್ಣಯಿಸಿತು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳೊಂದಿಗೆ.

**ಉತ್ತರಾಖಂಡ, ಹಿಮಾಚಲ ಪ್ರದೇಶದಲ್ಲಿ ಮೇಲ್ವಿಚಾರಣೆ ಮಾಡಲಾದ ಎಲ್ಲಾ ನಾಲ್ಕು ಸ್ಥಳಗಳು ಅಗತ್ಯ ಮಾನದಂಡಗಳನ್ನು ಪೂರೈಸಿವೆ ಎಂದು ವಿಶ್ಲೇಷಣೆ ತೋರಿಸಿದೆ, ಆದರೆ ಹರಿಯಾಣದ ಎಲ್ಲಾ ಆರು ಸ್ಥಳಗಳು ವಿಫಲವಾಗಿವೆ. ದೆಹಲಿಯಲ್ಲಿ, 2022 ಮತ್ತು 2023 ರಲ್ಲಿ ಪಲ್ಲಾ ತಾಣವು ಸುಧಾರಣೆಯನ್ನು ತೋರಿಸಿದರೂ, 2021ರಲ್ಲಿ ಏಳು ತಾಣಗಳಲ್ಲಿ ಯಾವುದೂ ಮಾನದಂಡಗಳನ್ನು ಅನುಸರಿಸಲಿಲ್ಲ.**

ಈ ಮೌಲ್ಯಮಾಪನವು ಕರಗಿದ ಆಮ್ಲ ಜನಕ, ಪಿಹೆಚ್, ಜೀವರಾಸಾಯನಿಕ ಆಮ್ಲಜನಕ ಬೇಡಿಕೆ, ಫೆಕಲ್ ಕೋಲಿಫಾರ್ಮ್‌ನ ನಾಲ್ಕು ಪ್ರಮುಖ ನಿಯತಾಂಕಗಳನ್ನು ಒಳಗೊಂಡಿದೆ.

ಯಮುನಾ ಪ್ರವಾಹ ಪ್ರದೇಶಗಳ ಉದ್ದಕ್ಕೂ ಅತಿಕ್ರಮಣದ ಬಗ್ಗೆ ಸಮಿತಿಯು ಕಳವಳ ವ್ಯಕ್ತಪಡಿಸಿದೆ. ದೆಹಲಿ ಮತ್ತು ಹರಿಯಾಣ ಅತಿಕ್ರಮಣಗಳ ಬಗ್ಗೆ ಮಾಹಿತಿಯನ್ನು ಒದಗಿಸಿದ್ದರೂ, ಉತ್ತರ ಪ್ರದೇಶ, ಉತ್ತರಾಖಂಡಗಳು ಇನ್ನೂ ಸಂಪೂರ್ಣ ವಿವರಗಳನ್ನು ನೀಡಿಲ್ಲ.

## ಮಿನಿ ನ್ಯೂಸ್

### 18 ಕೋಟಿಗೆ ಕನ್ಯತ್ವ ಮಾರಿಕೊಂಡ ವಿದ್ಯಾರ್ಥಿನಿ..!

**ಲಂಡನ್:** ಕಿಡ್ನಿ ಮಾರಾಟದ ದಂಧೆ ಬಗ್ಗೆ ಕೇಳಿರಬಹುದು ಆದರೆ, ನಿಮಗೆ ಕನ್ಯತ್ವ ಮಾರಾಟದ ವಿಷಯ ತಿಳಿದಿದೆಯೇ ಇಲ್ಲ ಎಂದಾದರೆ ಈ ಸುದ್ದಿ ನೋಡಿ. ಇಲ್ಲೊಬ್ಬ ವಿದ್ಯಾರ್ಥಿನಿ ತನ್ನ ಭವಿಷ್ಯ ರೂಪಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಬರೊಬ್ಬರಿ 18 ಕೋಟಿ ರೂ.ಗಳಿಗೆ ತನ್ನ ಕನ್ಯತ್ವ ಮಾರಿಕೊಂಡಿದ್ದಾರೆ. ಅಷ್ಟು ದೊಡ್ಡ ಮೊತ್ತಕ್ಕೆ ಕನ್ಯತ್ವ ಖರೀದಿಸಿರುವು ಹಾಲಿವುಡ್ ಸ್ಟಾರ್ ಅಂತೆ ಆದರೆ, ಸ್ಟಾರ್ ಹೆಸರನ್ನು ಇದುವರೆಗೂ ಯಾರು ಬಹಿರಂಗಪಡಿಸಿಲ್ಲ. ಇತ್ತೀಚೆಗೆ ನಡೆದ ಬಿಡ್ಡಿಂಗ್‌ನಲ್ಲಿ ಲಂಡನ್ ಮೂಲದ ಲೌರಾ ಎಂಬ ವಿದ್ಯಾರ್ಥಿನಿ ಜೀವನದಲ್ಲಿ ಸೆಟಲ್ ಆಗಬೇಕು ಎಂಬ ಆಸೆಯಿಂದ ಇಂತಹ ಗಟ್ಟಿ ತೀರ್ಮಾನ ಕೈಗೊಂಡಿದ್ದಾರೆ. ಆಕೆಗಿನ್ನೂ 22 ವರ್ಷ ಅವಳು ತನ್ನ ಕನ್ಯತ್ವವನ್ನು ವೆಬ್ ಸೈಟ್ ಮೂಲಕ ಹರಾಜಿಗೆ ಇಟ್ಟಿದ್ದಳು.

ಈ ಹರಾಜಿನಲ್ಲಿ ಜನಸಾಮಾನ್ಯರು, ಉದ್ಯಮಿಗಳು, ಸೆಲೆಬ್ರಿಟಿಗಳು, ರಾಜಕಾರಣಿಗಳು ಭಾಗಿ ಆಗಿದ್ದರು. ಈಗ ಈ ಹುಡುಗಿಯ ಕನ್ಯತ್ವ ಹಾಲಿವುಡ್ ಹೀರೋಗೆ ಮಾರಾಟ ಆಗಿದೆ. ಅವಳಿಗೆ ತನ್ನ ನಿರ್ಧಾರದ ಬಗ್ಗೆ ಯಾವುದೇ ಬೇಸರ ಇಲ್ಲ. ತನ್ನ ಜೀವನ ಸೆಟಲ್ ಮಾಡಿಕೊಳ್ಳಲು ಇದು ಒಳ್ಳೆಯ ಆಯ್ಕೆ ಎಂದು ಆಕೆ ಹೇಳಿದ್ದಾಳೆ.

ನನಗೆ ಆ ಬಗ್ಗೆ ಬೇಸರ ಇಲ್ಲ. ಪ್ರತಿಯಾಗಿ ಏನೂ ಸಿಗದೇ ಕೆಲವರು ಕನ್ಯತ್ವ ಕಳೆದುಕೊಳ್ಳುತ್ತಾರೆ. ನನಗೆ ಭವಿಷ್ಯವೇ ಸೆಟಲ್ ಆಗುತ್ತಿದೆ ಎಂದು ಅವಳು ಹೇಳಿದ್ದಾಗಿ ವರದಿ ಆಗಿದೆ. ಲೌರಾಳ ಕನ್ಯತ್ವ ಪಡೆದುಕೊಳ್ಳಲು ಹಾಲಿವುಡ್ ನ ಹೀರೋ ಜೊತೆ ಅನೇಕ ರಾಜಕಾರಣಿಗಳು, ಉದ್ಯಮಿಗಳು ರೇಸ್‌ನಲ್ಲಿ ಇದ್ದರು. ಅಂತಿಮವಾಗಿ 18 ಕೋಟಿ ರೂಪಾಯಿ ಕೊಡಲು ರೆಡಿ ಆದ ಹೀರೋಗೆ ಲೌರಾ ಸಿಕ್ಕಿದ್ದಾಳೆ.

ಲೌರಾ ಇನ್ನೂ ಶಿಕ್ಷಣ ಪಡೆಯುತ್ತಿದ್ದಾಳೆ. ಈ ರೀತಿ ಬಂದ ಹಣವನ್ನು ಓದಿಗೆ ಬಳಕೆ ಮಾಡೋದಾಗಿ ಹೇಳಿದ್ದಾಳೆ. ಅಲ್ಲದೆ, ಭವಿಷ್ಯದಲ್ಲಿ ಹಣಕ್ಕಾಗಿ ಸುಗರ್ ಡ್ಯಾಡಿನ ಹುಡುಕಿಕೊಳ್ಳೋದಾಗಿ ಹೇಳಿದ್ದಾಳೆ. ಲೌರಾ ಕನ್ಯ ಹೌದೋ ಅಥವಾ ಇಲ್ಲವೋ ಎಂಬುದನ್ನು ಖಚಿತಪಡಿಸಲು ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಲಾಗಿದೆ. ಆಕೆ ಕನ್ಯತ್ವ ಹೊಂದಿದ್ದಾಳೆ ಎಂಬ ವರದಿ ಬಂದ ಬಳಿಕವೇ ಅವಳನ್ನು ಹರಾಜಿಗೆ ಇಡಲಾಗಿತ್ತು. ಸದ್ಯ ಈ ವಿಚಾರ ಸಾಕಷ್ಟು ಚರ್ಚೆಗಳನ್ನು ಹುಟ್ಟುಹಾಕಿದೆ. ಕೆಲವರು ಇದನ್ನು ಟೀಕಿಸಿದ್ದಾರೆ. ಆದರೆ, ಇದಕ್ಕೆ ಲೌರಾ ತಲೆಕೆಡಿಸಿಕೊಂಡಿಲ್ಲ.

### ದೆಹಲಿಯಲ್ಲಿ ಬ್ರಿಟಿಷ್ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮತ್ತೊಂದು ಸಾಮೂಹಿಕ ಅತ್ಯಾಚಾರ ಪ್ರಕರಣ ವರದಿಯಾಗಿದೆ. ದೆಹಲಿಯ ಮಹಿಪಾಲ್ಪುರ ಪ್ರದೇಶದ ಹೋಟೆಲ್ ಒಂದರಲ್ಲಿ ಬ್ರಿಟಿಷ್ ಮಹಿಳೆ ಮೇಲೆ ಇಬ್ಬರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪರಿಚಿತರಾಗಿದ್ದ ಬ್ರಿಟಿಷ್ ಮಹಿಳೆಯ ಸ್ನೇಹವನ್ನು ದುರುಪಯೋಗಪಡಿಸಿಕೊಂಡು ಇಬ್ಬರು ಅತ್ಯಾಚಾರ ನಡೆಸಿದ್ದಾರೆ. ಅತ್ಯಾಚಾರಿಗಳಿಬ್ಬರನ್ನು ಬಂಧಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬ್ರಿಟಿಷ್ ಪ್ರಜೆಯನ್ನು ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ಆರೋಪಿಗಳಲ್ಲಿ ಒಬ್ಬರು ಸ್ನೇಹ ಬೆಳೆಸಿದ್ದರು.

ಆತನನ್ನು ಭೇಟಿಯಾಗಲು ಮಹಿಳೆ ಯುಕೆಯಿಂದ ದೆಹಲಿಗೆ ಪ್ರಯಾಣಿಸಿದ್ದರು. ಭಾರತಕ್ಕೆ ಬಂದ ಬ್ರಿಟಿಷ್ ಮಹಿಳೆಯನ್ನು ಆತ ಮಹಿಪಾಲ್ಪುರ ಪ್ರದೇಶದ ಹೋಟೆಲ್‌ಗೆ ಕರೆದೊಯ್ದು ಅತ್ಯಾಚಾರ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಆತನ ಜತೆಗಿದ್ದ ಸ್ನೇಹಿತನೂ ಬ್ರಿಟಿಷ್ ಮಹಿಳೆ ಮೇಲೆ ಅತ್ಯಾಚಾರ ನಡೆಸಿದ್ದಾನೆ. ಈ ಕುರಿತಂತೆ ಮಹಿಳೆ ನೀಡಿರುವ ದೂರಿನ ಆಧಾರದ ಮೇಲೆ ಕಾಮುಕರಿಬ್ಬರನ್ನು ಬಂಧಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ.

### ಪಾರ್ಕಿಂಗ್ ಗಲಾಟೆಗೆ ವಿಜ್ಞಾನಿ ಬಲಿ

**ಮೊಹಾಲಿ:** ಮೊಹಾಲಿಯ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ ನಲ್ಲಿ ಕೆಲಸ ಮಾಡುತ್ತಿದ್ದ 39 ವರ್ಷದ ವಿಜ್ಞಾನಿ ಯೊಬ್ಬರು ಪಾರ್ಕಿಂಗ್ ಗಲಾಟೆಗೆ ಬಲಿಯಾಗಿರುವ ಘಟನೆ ನಡೆದಿದೆ. ಇಲ್ಲಿನ ಸೆಕ್ಟರ್ 67 ರಲ್ಲಿರುವ ತಮ್ಮ ಬಾಡಿಗೆ ಮನೆಯ ಬಳಿ ಪಾರ್ಕಿಂಗ್ ವಿವಾದವು ಹಿಂಸಾತ್ಮಕವಾಗಿ ಮಾರ್ಪಟ್ಟ ನಂತರ ವಿಜ್ಞಾನಿ ಡಾ.ಅಭಿಷೇಕ್ ಸ್ವರ್ಣಕರ್ ಸಾವನ್ನಪ್ಪಿದ್ದಾರೆ. ನೆರೆಮನೆಯ ಮಾಂಟಿಯೊಂದಿಗೆ ವಾಗ್ವಾದ ನಡೆಸಿದರು ಮತ್ತು ನಂತರ ಅವರನ್ನು ನೆಲಕ್ಕೆ ತಳ್ಳಿ ಗುದ್ದಿದ್ದಾರೆ ಎಂದು ಆರೋಪಿಸಲಾಗಿದೆ. ಮೂಲತಃ ಜಾರ್ಖಂಡ್‌ನ ಧನ್‌ಬಾದ್ ನವರಾದ ಡಾ.ಸ್ವರ್ಣಕರ್ ಅವರು ಖ್ಯಾತ ವಿಜ್ಞಾನಿಯಾಗಿದ್ದು, ಅವರ ಕೆಲಸವು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಕಾಣಿಸಿಕೊಂಡಿದೆ. ಅವರು ಸ್ವಿಟ್ಸರ್ಲೆಂಡ್‌ನಲ್ಲಿ ಕೆಲಸ ಮಾಡುತ್ತಿದ್ದರು, ಇತ್ತೀಚೆಗೆ ಭಾರತಕ್ಕೆ ಮರಳಿದ್ದರು, ಐಐಎಸ್ ಇಆರ್‌ಗೆ ಯೋಜನಾ ವಿಜ್ಞಾನಿಯಾಗಿ ಸೇರಿದ್ದರು. ವಿಜ್ಞಾನಿ ಇತ್ತೀಚೆಗೆ ಮೂತ್ರಪಿಂಡ ಕಸಿಗೆ ಒಳಗಾಗಿದ್ದರು, ಅವರ ಸಹೋದರಿ ತನ್ನ ಮೂತ್ರಪಿಂಡಗಳಲ್ಲಿ ಒಂದನ್ನು ದಾನ ಮಾಡಿದ್ದರು.

ಅವರು ಡಯಾಲಿಸಿಸ್ ನಲ್ಲಿದ್ದರು. ಹಲ್ಲೆಯ ನಂತರ, ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ಅವರು ನಿಧನರಾಗಿದ್ದಾರೆ.

# ಮ್ಯಾನ್ಮಾರ್ ಪ್ರಜೆ ಬಂಧನ, ಕೋಟ್ಯಂತರ ಮೌಲ್ಯದ ಯಾಬಾ ಮಾತ್ರೆ ವಶ

**ಇಂಫಾಲ್:** ಮಣಿಪುರದ ತೆಂಗೌಪಾಲ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಮ್ಯಾನ್ಮಾರ್ ಪ್ರಜೆಯನ್ನು ಬಂಧಿಸಿದ್ದು, ಆತನಿಂದ 4.4 ಕೆಜಿ ಯಾಬಾ ಮಾತ್ರೆಗಳನ್ನು ವಶಪಡಿಸಿಕೊಂಡಿವೆ. ಹೌಲೆನ್ಫೈಯಿಂದ ನ್ಯೂ ಶಿಜಾಂಗ್ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ಮ್ಯಾನ್ಮಾರ್‌ನ ತಮು ನಿವಾಸಿ 32 ವರ್ಷದ ಹೆರಿ ಅವರನ್ನು ಭದ್ರತಾ ಪಡೆಗಳು ಬಂಧಿಸಿವೆ. ಆತನಿಂದ ನಾಲ್ಕು ಪ್ಯಾಕೆಟ್ ಯಾಬಾ ಮಾತ್ರೆಗಳನ್ನು (ಅಂದಾಜು 4.4 ಕೆಜಿ ತೂಕ) ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕ್ರೇಜಿ ಡ್ರಗ್ ಎಂದೂ ಕರೆಯಲ್ಪಡುವ ಮೆಥಾಂಫೆಟಮೈನ್ ಮತ್ತು ಕೆಫೀನ್ ಮಿಶ್ರಣವನ್ನು ಹೊಂದಿರುವ ಯಾಬಾ ಮಾತ್ರೆಗಳನ್ನು ಭಾರತದಲ್ಲಿ ನಿಷೇಧಿಸಲಾಗಿದೆ. ಮತ್ತೊಂದು ಕಾರ್ಯಾಚರಣೆಯಲ್ಲಿ, ತೌಬಲ್ ಜಿಲ್ಲೆಯ ಹಿರೋಕ್ ಪಾರ್ಟ್ –3 ರಿಂದ ಕೆಸಿಪಿ (ಪಿಡಬ್ಲ್ಯುಜಿ) ಕೇಡರ್ ಅನ್ನು ಭದ್ರತಾ ಪಡೆಗಳು ಬಂಧಿಸಿವೆ. ಆತನಿಂದ ಒಂದು 303 ಎಲ್‌ಎಂಜಿ, ಎರಡು ನಿಯತಕಾಲಿಕೆಗಳು, ಒಂದು ಎಸ್‌ಎಲ್ ಆರ್ ಮ್ಯಾಗಜೀನ್, ನಲವತ್ತಾರು 303 ಲೈವ್ ರೌಂಡ್‌ಗಳು, ಇಪ್ಪತ್ತು ಎಸ್‌ಎಲ್‌ಆರ್ ಲೈವ್ ರೌಂಡ್‌ಗಳು ಮತ್ತು ಎರಡು ಹ್ಯಾಂಡ್ ಗ್ರೆನೆಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಂಫಾಲ್ ಕಣಿವೆಯಲ್ಲಿ, ಇಂಫಾಲ್ ಪಶ್ಚಿಮದ ಲಂಗೋಲ್ ಗೇಮ್ ವಿಲೇಜ್ ವಲಯ 3 ರಿಂದ ಪ್ರೆಪಾಕ್ (ಪ್ರೊ) ಸಂಘಟನೆಯ ಸಕ್ರಿಯ ಸದಸ್ಯೆ ಒಬ್ಬ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ.

## ಜಾದವ್‌ಪುರ ವಿವಿ ಕ್ಯಾಂಪಸ್ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ಬಂಧನ

**ಕೋಲ್ಕತಾ:** ಜಾದವ್‌ಪುರ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಮಾ. 1ರಂದು ನಡೆದ ಅಶಾಂತಿ, ವಿಧ್ವಂಸಕ ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ವಿದ್ಯಾರ್ಥಿಯೊಬ್ಬನನ್ನು ಬಂಧಿಸಿದ್ದಾರೆ. ಟಿಎಂಸಿಯ ಪಶ್ಚಿಮ ಬಂಗಾಳ ಕಾಲೇಜು, ವಿಶ್ವವಿದ್ಯಾಲಯ ಪ್ರಾಧ್ಯಾಪಕರ ಸಂಘದ ಎಜಿಎಂ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ತತ್ವಶಾಸ್ತ್ರದ ವಿದ್ಯಾರ್ಥಿ ಸೌಮ್ಯದೀಪ್ ಮಹತಾ ಅವರನ್ನು ಜಾದವ್‌ಪುರ ಪೊಲೀಸ್ ಠಾಣೆಗೆ ಕರೆಸಲಾಗಿದೆ ಎಂದು ಜೆಯು ಎಸ್‌ಎಫ್‌ಐ ಘಟಕದ ಮುಖಂಡರೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಗುಂಪು ಬಸು ಅವರ ಕಾರಿನ ಸುತ್ತಲೂ ಮಾನವ ಸರಪಳಿ ರಚಿಸಿ, ಅವರು ಹೊರಹೋಗದಂತೆ ತಡೆಯಲು ಪ್ರಯತ್ನಿಸಿತು, ಬಾಕಿ ಇರುವ ವಿದ್ಯಾರ್ಥಿ ಸಂಘದ ಚುನಾವಣೆಯ ಬಗ್ಗೆ ತಕ್ಷಣ ಚರ್ಚೆ ನಡೆಸಬೇಕೆಂದು ಒತ್ತಾಯಿಸಿದರು. ಸಚಿವರ ಕಾರು ಮಾನವ ಸರಪಳಿ ದಾಟಿ ಕ್ಯಾಂಪಸ್ ನಿಂದ ಹೊರಟಾಗ ಇಬ್ಬರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ನಂತರದ ಪ್ರತಿಭಟನೆಯಲ್ಲಿ, ಟಿಎಂಸಿ ಬೋಧಕೇತರ ಸಿಬ್ಬಂದಿಯ ಶಿಕ್ಷಣ ವಿಭಾಗದ ಕಚೇರಿಗೆ ಬೆಂಕಿ ಹಚ್ಚಲಾಯಿತು, ಕ್ಯಾಂಪಸ್‌ನಲ್ಲಿ ಹಲವಾರು ಹೋರ್ಡಿಂಗ್‌ಗಳು ಹಾಕಿ ಪ್ರತಿಭಟನೆ ನಡೆಸಲಾಗಿತ್ತು.

## ಮಧ್ಯಪ್ರದೇಶ : ಗ್ಯಾಸ್ ಟ್ಯಾಂಕರ್ ಡಿಕ್ಕಿಯಾಗಿ 7 ಜನರ ಸಾವು

**ಧಾರ್:** ಗ್ಯಾಸ್ ಟ್ಯಾಂಕರ್ ವಾಹನ ಚಾಲಕ ನಿಯಂತ್ರಣ ತಪ್ಪಿ ಎದುರಿಗೆ ಬರುತ್ತಿದ್ದ ವಾಹನಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಏಳು ಜನರು ಸಾವನ್ನಪ್ಪಿರುವ ಘಟನೆ ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿ ನಡೆದಿದೆ. ಕಳೆದ ರಾತ್ರಿ 11 ಗಂಟೆ ಸುಮಾರಿಗೆ ಬದ್ನಾವರ್ ಉಜ್ಜಯಿನಿ ಹೆದ್ದಾರಿಯ ಬಮನ್‌ಸುತಾ ಗ್ರಾಮದ ಬಳಿ ಈ ಘಟನೆ ಸಂಭವಿಸಿದೆ. ಕಾರು ಮತ್ತು ಜೀಪ್‌ನಲ್ಲಿದ್ದ ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ಧಾರ್ ಎಸ್‌ಪಿ ಮನೋಜ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದರೆ, ಇತರ ಮೂವರು ಗಾಯಗೊಂಡು ನಂತರ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದರು.ಹಿರಿಯ ಅಧಿಕಾರಿಗಳು ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಕ್ರೇನ್ ಬಳಸಿ ವಾಹನಗಳಿಂದ ಸಿಕ್ಕಿಬಿದ್ದ ಜನರನ್ನು ಹೊರತೆಗೆಯುವ ಕಾರ್ಯಾಚರಣೆಯಲ್ಲಿ ಸ್ಥಳೀಯ ನಿವಾಸಿಗಳು ಸಹಾಯ ಮಾಡಿದರು ಎಂದು ಎಸ್‌ಪಿ ಹೇಳಿದರು.

ಮೂವರು ಗಾಯಾಳುಗಳನ್ನು ನೆರೆಯ ರತ್ನಂ ಜಿಲ್ಲೆಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅವರು ಹೇಳಿದರು. ಮೃತರನ್ನು ಮಧ್ಯಪ್ರದೇಶ ರತ್ನಂ, ಮಂದೌರ್, ಮತ್ತು ರಾಜಸ್ಥಾನದ ಜೋಧಪುರ್ ಜಿಲ್ಲೆಯವರು ಅಪಘಾತದ ನಂತರ ಟ್ಯಾಂಕರ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಎಸ್ಪಿ ತಿಳಿಸಿದ್ದಾರೆ.

# ಓವಲ್ ಆಫೀಸ್‌ನಲ್ಲಿ ನಡೆಯಿತು ಹೀಗೊಂದು ತಿಳಿ ಹಾಸ್ಯ ಪ್ರಸಂಗ

## ವೈಸ್ ಪ್ರೆಸಿಡೆಂಟ್ ಸಾಕ್ಸ್ ನೋಡಿ ಗಂಭೀರ ಮಾತೇ ಮರೆತ ಯುಎಸ್ ಪ್ರೆಸಿಡೆಂಟ್


**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ ಜಾಗತಿಕ ನಾಯಕರೊಂದಿಗೆ ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ. ಒಬ್ಬರಾದ ಮೇಲೊಬ್ಬರಂತೆ ವಿದೇಶಿ ನಾಯಕರನ್ನು ವಾಷಿಂಗ್ಟನ್‌ಗೆ ಕರೆಸಿಕೊಳ್ಳುತ್ತಿರುವ ಡೊನಾಲ್ಡ್ ಟ್ರಂಪ್, ಸತತ ಸಭೆಗಳನ್ನು ನಡೆಸುತ್ತಾ ಗಮನ ಸೆಳೆಯುತ್ತಿದ್ದಾರೆ. ಅದರಂತೆ ಐರ್ಲೆಂಡ್ ಪ್ರಧಾನಿ ಮೈಕೆಲ್ ಮಾರ್ಟಿನ್ ಅವರೊಂದಿಗೆ ಓವಲ್ ಆಫೀಸ್‌ನಲ್ಲಿ ಸಭೆ ನಡೆಸುತ್ತಿದ್ದ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅವರು ಧರಿಸಿದ್ದ ಸಾಕ್ಸ್ ನೋಡಿದ್ದೇ ತಡ ಗಂಭೀರ ಚರ್ಚೆಯನ್ನು ಮರೆತು ಆ ಸಾಕ್ಸ್ ಬಗ್ಗೆ ಕೇಳಿದ ಪ್ರಸಂಗ ನಡೆದಿದೆ.

- ಅಮೆರಿಕ ಉಪಾಧ್ಯಕ್ಷರ ಸಾಕ್ಸ್ ಕಂಡು ದಂಗಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್
- ಜೆಡಿ ವ್ಯಾನ್ಸ್ ಧರಿಸಿದ್ದ ಶ್ಯಾಮ್ ರೂಕ್ ಸಾಕ್ಸ್‌ಗಳನ್ನು ಮೆಚ್ಚಿದ ಡೊನಾಲ್ಡ್ ಟ್ರಂಪ್
- ಐ ಲವ್ ದೀಸ್ ಸಾಕ್ಸ್ ಎಂಬ ಡೊನಾಲ್ಡ್ ಟ್ರಂಪ್ ಮಾತಿಗೆ ನಕ್ಕ ಸಭಿಕರು

ಹೌದು, ಐರ್ಲೆಂಡ್ ಪ್ರಧಾನಿ ಮೈಕೆಲ್ ಮಾರ್ಟಿನ್ ಅವರೊಂದಿಗೆ ಚರ್ಚೆ ನಡೆಸುತ್ತಿದ್ದ ಸಂದರ್ಭದಲ್ಲಿ, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅವರು ಧರಿಸಿದ್ದ ಶ್ಯಾಮ್‌ರಾಕ್ ಸಾಕ್ಸ್‌ಗಳತ್ತ ಡೊನಾಲ್ಡ್ ಟ್ರಂಪ್ ದೃಷ್ಟಿ ಹರಿಸಿದರು. ಕೂಡಲೇ ತಮ್ಮ ಮಾತನ್ನು ನಿಲ್ಲಿಸಿದ ಡೊನಾಲ್ಡ್ ಟ್ರಂಪ್, ಐ ಲವ್ ದೀಸ್ ಸಾಕ್ಸ್..(ನನಗೆ ಈ ಸಾಕ್ಸ್‌ಗಳು ತುಂಬ ಇಷ್ಟ ಆದವು) ಎಂದು ಹೇಳಿದರು.

ಡೊನಾಲ್ಡ್ ಟ್ರಂಪ್ ಅವರ ಈ ಮಾತುಗಳನ್ನು ಕೇಳುತ್ತಲೇ ಜೆಡಿ ವ್ಯಾನ್ಸ್ ಆದಿಯಾಗಿ ಸಭೆಯಲ್ಲಿದ್ದ ಎಲ್ಲರೂ ಜೋರಾಗಿ ನಕ್ಕರು. ಈ ರೀತಿ ಗಂಭೀರ ಚರ್ಚೆಯೊಂದು ಕ್ಷಣಾರ್ಧದಲ್ಲಿ ಹಾಸ್ಯ ಚಟಾಕಿಯಾಗಿ ಬದಲಾಯಿತು. ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅವರು ಹಸಿರು–ಬಿಳಿ ಬಣ್ಣದ ಶ್ಯಾಮ್ ರಾಕ್ ಸಾಕ್ಸ್ ಗಳನ್ನು ಧರಿಸಿದ್ದರು. ಸಭೆಗೂ ಮುನ್ನ ಸೇಂಟ್ ಪ್ಯಾಟ್ರಿಕ್ಸ್ ನಲ್ಲಿ ನಡೆದ ಉಪಾಹಾರ ಕೂಟಕ್ಕೆ, ಐರ್ಲೆಂಡ್ ಪ್ರಧಾನಿ ಮೈಕೆಲ್ ಮಾರ್ಟಿನ್ ಅವರನ್ನು ಸ್ವಾಗತಿಸಲು ಜೆಡಿ ವ್ಯಾನ್ಸ್ ಈ ಸಾಕ್ಸ್‌ಗಳನ್ನು ಧರಿಸಿದ್ದರು. ನಿಮ್ಮ ಗೌರವಾರ್ಥವಾಗಿ ನಾನು ಈ ಶ್ಯಾಮ್‌ರಾಕ್ ಸಾಕ್ಸ್‌ಗಳನ್ನು ಧರಿಸಿದ್ದೇನೆ. ಅಧ್ಯಕ್ಷರು ಸಾಂಪ್ರದಾಯಿಕ ಉಡುಪುಗಳನ್ನು ಇಷ್ಟಪಡುತ್ತಾರೆ. ಶ್ಯಾಮ್ ರೂಕ್ ಸಾಕ್ಸ್‌ಗಳು ಐರಿಷ್–ಅಮೆರಿಕನ್ ಸಂಬಂಧವನ್ನು ಪ್ರತಿನಿಧಿಸುತ್ತವೆ ಎಂದು ಜೆಡಿ ವ್ಯಾನ್ಸ್ ಈ ವೇಳೆ ಹೇಳಿದ್ದರು. ನಂತರ ಓವಲ್ ಆಫೀಸ್‌ನಲ್ಲಿ ನಡದ ಸಭೆಯ ವೇಳೆ, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಧರಿಸಿದ್ದ ಸಾಕ್ಸ್‌ಗಳತ್ತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದೃಷ್ಟಿ ನೆಟ್ಟಿತು. ಕೂಡಲೇ ಈ ಸಾಕ್ಸ್‌ಗಳ ಬಗ್ಗೆ ವಿಚಾರಿಸಿದ ಡೊನಾಲ್ಡ್ ಟ್ರಂಪ್, ನಾನು ಹಣದುಬ್ಬರದ ಬಗ್ಗೆ ಮಾತನಾಡಬೇಕು ಎಂದುಕೊಂಡರೆ, ಉಪಾಧ್ಯಕ್ಷರು ಧರಿಸಿರುವ ಸುಂದರ ಸಾಕ್ಸ್‌ಗಳು ನನ್ನ ಏಕಾಗ್ರತೆಯನ್ನು ಹಾಳು ಮಾಡುತ್ತಿದೆ ಎಂದು ಹಾಸ್ಯ ಚಟಾಕಿ ಹಾರಿಸಿದರು. ಸಭೆಯ ಬಳಿಕ ಈ ಬಗ್ಗೆ ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಟ್ವೀಟ್ ಮಾಡಿರುವ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ನಾನು ಧರಿಸಿರುವ ಶ್ಯಾಮ್‌ರೂಕ್ ಸಾಕ್ಸ್‌ಗಳತ್ತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಮನಹರಿಸಲಿದ್ದಾರೆ ಎಂಬುದು ನನಗೆ ಮೊದಲೇ ತಿಳಿದಿತ್ತು. ನನ್ನ ನಿರೀಕ್ಷೆಯಂತೆಯೇ ಅವರು ನನ್ನ ಸಾಕ್ಸ್‌ಗಳನ್ನು ನೋಡಿ ಮೆಚ್ಚಿಕೊಂಡರು. ನನಗೆ ನಮ್ಮ ಅಧ್ಯಕ್ಷರ ಬಗ್ಗೆ ಚೆನ್ನಾಗಿ ಗೊತ್ತು ಎಂದು ಹೇಳಿದ್ದಾರೆ.

ಒಟ್ಟಿನಲ್ಲಿ ಓವಲ್ ಆಫೀಸ್‌ನಲ್ಲಿ ನಡೆದ ಈ ತಿಳಿ ಹಾಸ್ಯದ ಪ್ರಸಂಗವು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಸದ್ದು ಮಾಡುತ್ತಿದ್ದು, ಡೊನಾಲ್ಡ್ ಟ್ರಂಪ್ ಅವರ ಹಾಸ್ಯಪ್ರವೃತ್ತಿಗೆ ಎಲ್ಲಾರೂ ಮೆಚ್ಚುಗೆ ಸೂಚಿಸುತ್ತಿದ್ದಾರೆ.



**ಐ ಲವ್ ದೀಸ್ ಸಾಕ್ಸ್..**

**ಐರ್ಲೆಂಡ್ ಪ್ರಧಾನಿ ಮೈಕೆಲ್ ಮಾರ್ಟಿನ್ ಅವರೊಂದಿಗೆ ಓವಲ್ ಆಫೀಸ್‌ನಲ್ಲಿ ಸಭೆ ನಡೆಸುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅವರು ಧರಿಸಿದ್ದ ಸಾಕ್ಸ್ ನೋಡಿದ್ದೇ ತಡ ಗಂಭೀರ ಚರ್ಚೆಯನ್ನು ಮರೆತು ಆ ಸಾಕ್ಸ್ ಬಗ್ಗೆ ಕೇಳಿದ ಪ್ರಸಂಗ ನಡೆದಿದೆ. ಜೆಡಿ ವ್ಯಾನ್ಸ್ ಧರಿಸಿದ್ದ ಸಾಕ್ಸ್‌ಗಳನ್ನು ನೋಡಿ, ಐ ಲವ್ ದೀಸ್ ಸಾಕ್ಸ್.. ಎಂದು ಡೊನಾಲ್ಡ್ ಟ್ರಂಪ್ ಹೇಳಿದಾಗ ಸಭೆಯಲ್ಲಿದ್ದ ಎಲ್ಲಾರೂ ಜೋರಾಗಿ ನಕ್ಕರು.**

**ಓವಲ್ ಆಫೀಸ್‌ನಲ್ಲಿ ನಡೆದಿದ್ದೇನು?**

## ಫ್ರಾನ್ಸ್‌ನಲ್ಲಿ ಮತ್ತೆ ಸದ್ದು ಮಾಡಿದ ಹಿಜಾಬ್ ವಿವಾದ

**ಪ್ಯಾರಿಸ್:** ಐತಿಹಾಸಿಕ ಐಫೆಲ್ ಟವರ್‌ಗೆ ಹಿಜಾಬ್ ಹೊದಿಸುವ ರೀತಿಯ ಜಾಹೀರಾತೊಂದು ಇದೀಗ ಫ್ರಾನ್ಸ್‌ನಲ್ಲಿ ಪರ ವಿರೋಧ ಚರ್ಚೆ ಹುಟ್ಟುಹಾಕಿದೆ. ಡಚ್ ಮೂಲದ ಫ್ಯಾಷನ್ ಕಂಪನಿ 'ಮೆರಾಚಿ' ಈ ಜಾಹೀರಾತನ್ನು ಬಿಡುಗಡೆ ಮಾಡಿದ್ದು, ಇಸ್ಲಾಮಿಕ್ ಧಾರ್ಮಿಕ ಸಂಸ್ಕೃತಿಯ ಭಾಗವಾದ ಹಿಜಾಬ್ ಧರಿಸುವ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಗುರಿಯನ್ನು ಹೊಂದಿ ರುವುದಾಗಿ ತಿಳಿಸಿದೆ.




ಇನ್‌ಸ್ಟಾಗ್ರಾಂನಲ್ಲಿ ವೀಡಿಯೋ ಹಂಚಿಕೊಂಡಿರುವ ಕಂಪನಿ, ಐಫೆಲ್ ಟವರ್ ಹಿಜಾಬ್ ಧರಿಸಿರುವುದನ್ನು ನೋಡಿ. ಈಗಷ್ಟೇ ಫ್ಯಾಷನ್ ಸಮುದಾಯವನ್ನು ಸೇರಿರುವಂತೆ ಅವಳು ಕಾಣುತ್ತಿದ್ದಾಳೆ ಎಂದು ಬರೆದುಕೊಂಡಿದೆ.

ಈ ಜಾಹೀರಾತನ್ನು ವಿರೋಧಿಸಿ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ನ್ಯಾಷನಲ್ ರ‍್ಯಾಲಿ (ಬಲಪಂಥ) ಪಕ್ಷದ ಸಂಸದೆ ಲಿಸೆಟ್ ಪೊಲೆಟ್, 'ಫ್ರಾನ್ಸ್‌ನ ಪ್ರಜಾಪ್ರಭುತ್ವ ಮೌಲ್ಯಗಳು ಮತ್ತು ಪರಂಪರೆಗೆ ಈ ಜಾಹೀರಾತು ಧಕ್ಕೆ ಉಂಟು ಮಾಡಿದೆ. ಇದು ಸ್ವೀಕಾರಾರ್ಹವಲ್ಲ' ಎಂದು ಹೇಳಿದ್ದಾರೆ. ಸಿಟಿಜನ್ಸ್ ಪೊಲಿಟಿಕಲ್ ಮೂವ್‌ಮೆಂಟ್‌ನ ಸಹ–ಸಂಸ್ಥಾಪಕ, ಅರ್ಥಶಾಸ್ತ್ರಜ್ಞ ಫಿಲಿಪ್ ಮುರರ್ ಅವರು ಫ್ರಾನ್ಸ್‌ನಲ್ಲಿರುವ ಮೆರಾಚಿಯ ಅಂಗಡಿಗಳನ್ನು ಮುಚ್ಚಬೇಕು, ಅದರ ವೆಬ್‌ಸೈಟ್ ಅನ್ನು ನಿರ್ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ. ಏತನ್ಮಧ್ಯೆ, ಜಾಹೀರಾತಿಗೆ ಬೆಂಬಲ ವ್ಯಕ್ತಪಡಿಸಿರುವ ಕೆಲವರು, ಮುಸ್ಲಿಂ ಮಹಿಳೆಯರ ಧಾರ್ಮಿಕ ಆಚರಣೆಗಳ ಕುರಿತ ಫ್ರಾನ್ಸ್ ನೀತಿಗಳ ಬಗ್ಗೆ ಈ ಜಾಹೀರಾತು ಚರ್ಚೆ ಹುಟ್ಟುಹಾಕಲಿದ್ದು, ಪ್ರಮುಖ ವಿಷಯದ ಬಗ್ಗೆ ಗಮನ ಸೆಳೆಯುತ್ತಿದೆ ಎಂದಿದ್ದಾರೆ.

## ಎಲ್ಲಾರಿಗೂ ನಷ್ಟವಾಗಲಿದೆ: ವಿಶ್ವಸಂಸ್ಥೆ


**ವಿಶ್ವಸಂಸ್ಥೆ:** ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಸುಂಕ ಸಮರದಿಂದಾಗಿ ಎಲ್ಲಾ ದೇಶಗಳಿಗೂ ನಷ್ಟವಾಗಲಿದೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಎಚ್ಚರಿಸಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕ ಸುಂಕ ವಿಧಿಸುವ ನೀತಿಯ ಬೆನ್ನಲ್ಲೇ ಹಲವು ರಾಷ್ಟ್ರಗಳು ಪ್ರತಿ ಸುಂಕ ವಿಧಿಸುವುದಾಗಿ ಪ್ರಕಟಿಸಿದೆ. ಇದರಿಂದಾಗಿ ಜಾಗತಿಕವಾಗಿ ವಾಣಿಜ್ಯ ಬಿಕ್ಕಟ್ಟು ತಲೆದೋರಿದೆ.

ಜಾಗತಿಕ ಸುಂಕ ಸಮರದ ಕುರಿತು ಪ್ರತಿಕ್ರಿಯಿಸಿದ ಅವರು, ಜಾಗತಿಕ ಆರ್ಥಿಕತೆಯಲ್ಲಿ ನಾವಿದ್ದೇವೆ ಎಂದು ನಾನು ಭಾವಿಸುತ್ತೇನೆ. ಎಲ್ಲಾವೂ ಪರಸ್ಪರ ಸಂಬಂಧ ಹೊಂದಿವೆ. ಮುಕ್ತ ವ್ಯಾಪಾರ ನೀತಿ ಹೊಂದುವ ಅನುಕೂಲವೆಂದರೆ ಎಲ್ಲಾ ದೇಶಗಳಿಗೆ ಪ್ರಯೋಜನ ಸಿಗಲಿವೆ. ಆದರೆ ಸುಂಕ ಸಮರಕ್ಕೆ ಅಡಿಯಿಟ್ಟಾಗ ಎಲ್ಲಾರಿಗೂ ನಷ್ಟವಾಗಲಿದೆ ಎಂದು ಗುಟೆರಸ್ ಹೇಳಿದ್ದಾರೆ. ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್, ಅಮೆರಿಕದ ಮೇಲೆ ಅಧಿಕ ಸುಂಕ ವಿಧಿಸುವ ರಾಷ್ಟ್ರಗಳ ಮೇಲೆ ಅಮೆರಿಕ ಪ್ರತಿ ಸುಂಕ ವಿಧಿಸುವುದಾಗಿ ಘೋಷಿಸಿದ್ದರು. ಇದಕ್ಕೆ ಪ್ರತಿಯಾಗಿ ಅಮೆರಿಕದಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಪ್ರತಿ ಸುಂಕ ವಿಧಿಸುವುದಾಗಿ ಯುರೋಪಿಯನ್ ಒಕ್ಕೂಟ (ಇಯು) ಹಾಗೂ ಕೆನಡಾ ಘೋಷಿಸಿದೆ. ಭಾರತ ಕೂಡ ಹೆಚ್ಚಿನ ಸುಂಕ ವಿಧಿಸುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದರು.

## ಬಲೂಚಿಸ್ತಾನಕ್ಕೆ ಪ್ರಧಾನಿ ಶೆಹಬಾಜ್ ಷರೀಫ್ ಭೇಟಿ

**ಕರಾಚಿ:** ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರು ಗುರುವಾರ ಬಲೂಚಿಸ್ತಾನ ಪ್ರಾಂತ್ಯಕ್ಕೆ ಭೇಟಿ ನೀಡಿದ್ದಾರೆ. ಬಲೂಚಿಸ್ತಾನ ಪ್ರಾಂತ್ಯದಲ್ಲಿ ಜಾಫರ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ದಾಳಿ ನಡೆಸಿದ್ದ ಉಗ್ರರು ಒಟ್ಟು 21 ಮಂದಿ ಪ್ರಯಾಣಿಕರನ್ನು ಹಾಗೂ ಅರೆಸೇನಾ ಪಡೆಯ ನಾಲ್ಕು ಮಂದಿಯನ್ನು ಹತ್ಯೆ ಮಾಡಿದ್ದರು.

ಘಟನೆ ನಡೆದ ಒಂದು ದಿನದ ಬಳಿಕ ಬಲೂಚಿಸ್ತಾನ ಪ್ರಾಂತ್ಯಕ್ಕೆ ಭೇಟಿ ನೀಡಿದ ಪ್ರಧಾನಿ, ಕಾನೂನು ಸುವ್ಯವಸ್ಥೆಯನ್ನು ಪರಿಶೀಲಿಸಿದ್ದಾರೆ. ಅವರೊಂದಿಗೆ ಉಪ ಪ್ರಧಾನಿ ಮುಹಮ್ಮದ್ ಇಶಾಕ್ ದಾರ್, ಸಚಿವರಾದ ಅತಾವುಲ್ಲಾ ತರಾರ್, ಅಹ್ಸಾನ್ ಇಕ್ಬಾಲ್ ಇತರರು ಇದ್ದರು. ಜಾಫರ್ ಎಕ್ಸ್‌ಪ್ರೆಸ್ ಹೆಸರಿನ ರೈಲು ಕ್ವೆಟ್ಟಾದಿಂದ ಪೆಶಾವರ ಕಡೆ ತೆರಳುತ್ತಿತ್ತು. ಆಗ ಸ್ಫೋಟಕ ಬಳಸಿ ರೈಲಿನ ಹಳಿ ತಪ್ಪಿಸಿದ್ದ ಉಗ್ರರು ಪ್ರಯಾಣಿಕರನ್ನು ಒತ್ತೆಯಾಳುಗಳನ್ನಾಗಿ ರಿಸಿಕೊಂಡಿದ್ದರು. ರೈಲಿನ ಮೇಲೆ ದಾಳಿ ನಡೆಸಿದ್ದು ತಾನು ಎಂದು ಬಲೂಚಿಸ್ತಾನ ಮುಕ್ತಿ ಸೇನೆ (ಬಿಎಲ್‌ಎ) ಹೇಳಿಕೊಂಡಿತ್ತು. ರೈಲಿನಲ್ಲಿ ಒಟ್ಟು 440 ಮಂದಿ ಪ್ರಯಾಣಿಕರಿದ್ದರು.



**33 ಮಂದಿ ಉಗ್ರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ**

**ರೈಲು ಪ್ರಯಾಣಿಕರನ್ನು ರಕ್ಷಿಸುವ ಉದ್ದೇಶದಿಂದ ನಡೆಸಿದ ಸೇನಾ ಕಾರ್ಯಾಚರಣೆ ಪೂರ್ಣಗೊಂಡಿದೆ. ಸ್ಥಳದಲ್ಲಿ ಇದ್ದ 33 ಮಂದಿ ಉಗ್ರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ ಎಂದು ಪಾಕಿಸ್ತಾನ ಸೇನೆಯ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಶರೀಫ್ ಅವರು ಸುದ್ದಿವಾಹಿನಿಯೊಂದಕ್ಕೆ ತಿಳಿಸಿದ್ದರು.**

ರಕ್ಷಣಾ ಕಾರ್ಯಾಚರಣೆಯನ್ನು ಪಾಕಿಸ್ತಾನದ ಭದ್ರತಾ ಪಡೆಗಳು ಅಪಾರ ಕೌಶಲದೊಂದಿಗೆ ನಡೆಸಿವೆ' ಎಂದು ಪಾಕಿಸ್ತಾನದ ಸಚಿವ ಅತಾವುಲ್ಲಾ ತರಾರ್ ಹೇಳಿದ್ದಾರೆ.

## ಡೊನಾಲ್ಡ್ ಟ್ರಂಪ್ ಯಾರನ್ನೂ ಸುರಕ್ಷಿತವಾಗಿ ಇರಲು ಬಿಡಲ್ಲ; ಜಿ–7 ರಾಷ್ಟ್ರಗಳಿಗೆ ಕೆನಡಾ ವಾರ್ನ್!

# ಜಿ–7 ವಿದೇಶಾಂಗ ಸಚಿವರ ಸಭೆಗೆ ಆತಿಥ್ಯ ವಹಿಸಲು ಸಜ್ಜಾದ ಕೆನಡಾ

**ಒಟ್ಟಾವೋ:** ಡೊನಾಲ್ಡ್ ಟ್ರಂಪ್ ಅವರ ವಾಣಿಜ್ಯ ಸಮರಕ್ಕೆ ತೀವ್ರ ಪ್ರತಿರೋಧ ತೋರುತ್ತಿರುವ ಕೆನಡಾ, ಈ ಯುದ್ಧದಲ್ಲಿ ಅಮೆರಿಕದ ಮುಂದೆ ಮಂಡಿಯೂರುವ ಪ್ರಶ್ನೆಯೇ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಅಲ್ಲದೇ ಟ್ರಂಪ್ ಅವರ ಸುಂಕ ನೀತಿಗೆ ಸಡ್ಡು ಹೊಡೆಯಲು, ಜಾಗತಿಕ ಸಾಂಘಿಕ ಪ್ರಯತ್ನಗಳಿಗೆ ಚಾಲನೆ ನೀಡಿದೆ.

**ಮುಂದುವರೆದು, ಕೆನಡಾ ತನ್ನ ಸಾರ್ವಭೌಮತ್ವವನ್ನು ರಕ್ಷಿಸಿ ಕೊಳ್ಳಲು, ಮಿಲಿಟರಿ ವ್ಯಾಯಾಮ, ರಕ್ಷಣಾ ಸಲಕರಣೆಗಳಲ್ಲಿ ಯುರೋಪ್ ಜೊತೆ ಸಹಕರಿಸುವ ಅಗತ್ಯವನ್ನು ಮೆಲಾನಿ ಜೋಲಿ ಒತ್ತಿ ಹೇಳಿದ್ದಾರೆ.**

ಡೊನಾಲ್ಡ್ ಟ್ರಂಪ್ ಅವರ ವಾಣಿಜ್ಯ ಯುದ್ಧ ಜಾಗತಿಕ ಪರಿಣಾಮಗಳನ್ನು ಬೀರಲಿದೆ ಎಂದು ಎಚ್ಚರಿಸುವ ಪ್ರಯತ್ನ ಆರಂಭಿಸಿರುವ ಕೆನಡಾ, ಅಮೆರಿಕದ ವಿರುದ್ಧ ಜಾಗತಿಕ ಧ್ವನಿಯನ್ನು ಗಟ್ಟಿಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಿದೆ. ಕೆನಡಾದ ಈ ಆಕ್ರಮಣಕಾರಿ ವರ್ತನೆ ಕಂಡು ಖುದ್ದು ಡೊನಾಲ್ಡ್ ಟ್ರಂಪ್ ದಂಗಾಗಿದ್ದಾರೆ. ತಮ್ಮ ಸುಂಕ ನೀತಿಗೆ ಬೆದರಿ ಕೆನಡಾ ತಮ್ಮ ಮುಂದೆ ಮಂಡಿಯೂರಲಿದೆ ಎಂದು ಭಾವಿಸಿದ್ದ ಅಮೆರಿಕದ ಅಧ್ಯಕ್ಷ, ಇದೀಗ ಅದರ ತಿರುಗಿ ಬೀಳುವ ನಿರ್ಣಯಕ್ಕೆ ಪೆಚ್ಚಾಗಿದ್ದಾರೆ. ಕೆನಡಾ ಇದೀಗ ಜಿ–7 ವಿದೇಶಾಂಗ ಸಚಿವರ ಸಭೆಗೆ ಆತಿಥ್ಯ ವಹಿಸಲು ಸಜ್ಜಾಗಿದೆ. ಅಮೆರಿಕದೊಂದಿಗಿನ ವ್ಯಾಪಾರ ಯುದ್ಧದ ಬಗ್ಗೆ ಕೆನಡಾದ ವಿದೇಶಾಂಗ ಸಚಿವೆ ಮೆಲಾನಿ ಜೋಲಿ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಯುರೋಪ್ ಮತ್ತು ಬ್ರಿಟನ್‌ನ ತಮ್ಮ ಸಹವರ್ತಿಗಳಿಗೆ ಅಮೆರಿಕದ ಕ್ರಮಗಳ ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿದ್ದಾರೆ.

ಅಮೆರಿಕ ತನ್ನ ಮಿತ್ರ ರಾಷ್ಟ್ರಗಳೊಂದಿಗೆ ಏಕಾಏಕಿ ಆಕ್ರಮಣಕಾರಿಯಾಗಿ ವರ್ತಿಸಲು ಆರಂಭಿಸಿದೆ. ಡೊನಾಲ್ಡ್ ಟ್ರಂಪ್ ಅವರ ಆರ್ಥಿಕ ನೀತಿಗಳು ಅವರ ಆಡಳಿತಾವಧಿಯಲ್ಲಿ ಯಾರೂ ಸುರಕ್ಷಿತರಲ್ಲ ಎಂಬ ಸಂದೇಶವನ್ನು ರವಾನಿಸಿವೆ. ಅಸಲಿಗೆ ಡೊನಾಲ್ಡ್ ಟ್ರಂಪ್ ಅವರು ಅಮೆರಿಕವನ್ನೂ ಒಳಗೊಂಡಂತೆ ಯಾರನ್ನೂ ಸುರಕ್ಷಿತವಾಗಿ ಇಡಲು ಬಿಡಬಾರದು ಎಂಬ ತೀರ್ಮಾನ ಮಾಡಿದ್ದಾರೆ. ನಾವು ಎಚ್ಚೆತ್ತುಕೊಳ್ಳದಿದ್ದರೆ ಭಾರೀ ನಷ್ಟವನ್ನು ಅನುಭವಿಸಬೇಕಾಗುತ್ತದೆ ಎಂದು ಕೆನಡಾ ವಿದೇಶಾಂಗ ಸಚಿವೆ ಮೆಲಾನಿ ಜೋಲಿ ಜಿ–7 ರಾಷ್ಟ್ರಗಳನ್ನು ಎಚ್ಚರಿಸಿದ್ದಾರೆ.

ವಾಸ್ತವವಾಗಿ ಕೆನಡಾ ಆತಿಥ್ಯವಹಿಸಲಿರುವ ಜಿ–7 ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ, ಉಕ್ರೇನ್, ಮಧ್ಯಪ್ರಾಚ್ಯ, ಹೈಟಿ ಮತ್ತು ವೆನೆಜುವೆಲಾ ಕುರಿತಾದ ಚರ್ಚೆಗಳು ಅಧಿಕೃತ ಕಾರ್ಯಸೂಚಿಯಲ್ಲಿವೆ. ಆದರೆ ಅಮೆರಿಕದ ಸುಂಕಗಳು ಮತ್ತು ಸಾರ್ವಭೌಮತ್ವದ ಬೆದರಿಕೆಗಳನ್ನು ಈ ಸಭೆಯಲ್ಲಿ ಪ್ರಸ್ತಾಪಿಸಲು ಕೆನಡಾ ನಿರ್ಧರಿಸಿದೆ. ಅಮೆರಿಕದ ವ್ಯಾಪಾರ ನೀತಿಗಳ ವಿರುದ್ಧ ಸಾಮೂಹಿಕ ಕ್ರಮಕ್ಕಾಗಿ ಬೆಂಬಲವನ್ನು ಕೋರುವ ಪ್ರಯತ್ನ ಇದಾಗಿದೆ. ಕೆನಡಾ ಕಲ್ಲಿದ್ದಲು ಗಣಿಯಲ್ಲಿನ ಕ್ಯಾನರಿ ಪಕ್ಷಿ ಇದ್ದಂತೆ ಎಂಬ ಕೆನಡಾ ವಿದೇಶಾಂಗ ಸಚಿವೆ ಮೆಲಾನಿ ಜೋಲಿ ಅವರ ಹೇಳಿಕೆ, ಡೊನಾಲ್ಡ್ ಟ್ರಂಪ್ ಅವರ ವಾಣಿಜ್ಯ ಸಮರದಿಂದ ಕೆನಡಾ ಅದೆಷ್ಟು ಕುಪಿತವಾಗಿದೆ ಎಂಬುದರತ್ತ ಬೊಟ್ಟು ಮಾಡುತ್ತದೆ.



**ಆಕ್ರಮಣಕಾರಿ ವರ್ತನೆಗೆ ಆಶ್ಚರ್ಯ**

ಅಮೆರಿಕದ ಸುಂಕಗಳಿಂದ ಕೆನಡಾ ಅಕ್ಷರಶ: ತತ್ತರಿಸಿದೆ. ಟ್ರಂಪ್ ಕೆನಡಾದ ಉಕ್ಕು ಮತ್ತು ಅಲ್ಯೂಮಿನಿಯಂ ಮೇಲೆ ಶೇ. 25ರಷ್ಟು ಸುಂಕ ವಿಧಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಕೆನಡಾ ಕೂಡ ಸುಮಾರು 20 ಶತಕೋಟಿ ಅಮೆರಿಕನ್ ಡಾಲರ್ ಮೌಲ್ಯದ ಅಮೆ ರಿಕನ್ ಸರಕುಗಳ ಮೇಲೆ ಪ್ರತೀಕಾರದ ಸುಂಕಗಳನ್ನು ವಿಧಿಸಿದೆ.

**ವಾಣಿಜ್ಯ ಸಮರಕ್ಕೆ ತೀವ್ರ ಪ್ರತಿರೋಧ**

**ಡೊನಾಲ್ಡ್ ಟ್ರಂಪ್ ಅವರ ವಾಣಿಜ್ಯ ಸಮರಕ್ಕೆ ತೀವ್ರ ಪ್ರತಿರೋಧ ತೋರುತ್ತಿರುವ ಕೆನಡಾ, ಡೊನಾಲ್ಡ್ ಟ್ರಂಪ್ ಅವರ ವಾಣಿಜ್ಯ ಯುದ್ಧ ಜಾಗತಿಕ ಪರಿಣಾಮಗಳನ್ನು ಬೀರಲಿದೆ ಎಂದು ಎಚ್ಚರಿಸುವ ಪ್ರಯತ್ನ ಆರಂಭಿಸಿದೆ. ಕೆನಡಾ ಇದೀಗ ಜಿ–7 ವಿದೇಶಾಂಗ ಸಚಿವರ ಸಭೆಗೆ ಆತಿಥ್ಯ ವಹಿಸಲು ಸಜ್ಜಾಗಿದ್ದು, ಈ ಸಭೆಯಲ್ಲಿ ಕೆನಡಾದ ವಿದೇಶಾಂಗ ಸಚಿವೆ ಮೆಲಾನಿ ಜೋಲಿ ಅವರು, ಅಮೆರಿಕದ ಸುಂಕಗಳು, ಸಾರ್ವಭೌಮತ್ವದ ಬೆದರಿಕೆಗಳನ್ನು ಪ್ರಸ್ತಾಪಿಸಲು ಸಿದ್ಧತೆ ಆರಂಭಿಸಿದ್ದಾರೆ.**

ಕೆನಡಾದ ಸಾರ್ವಭೌಮತ್ವ ಈ ಸಮಸ್ಯೆಯ ಕೇಂದ್ರಬಿಂದುವಾಗಿದೆ. ಡೊನಾಲ್ಡ್ ಟ್ರಂಪ್ ಪದೇ ಪದೇ ಕೆನಡಾವನ್ನು ಸ್ವಾಧೀನಪಡಿಸಿಕೊಳ್ಳುವ ಬೆದರಿಕೆ ಹಾಕಿದ್ದಾರೆ.

ಈ ಕುರಿತು ಮಾತನಾಡಿರುವ ಮೆಲಾನಿ ಜೋಲಿ, ಟ್ರಂಪ್ ಅವರ ಹೇಳಿಕೆಗಳು ಕೆನಡಾದ ಸಾರ್ವಭವಮತ್ವವನ್ನು ಅಣಕಿಸುವಂತಿವೆ. ಅಮೆರಿಕದ ಇಂತಹ ಗೊಡ್ಡು ಬೆದರಿಕೆ ಗಳಿಗೆ ಕೆನಡಾ ಮಣಿಯುವುದಿಲ್ಲ ಎಂದು ಗುಡುಗಿದ್ದಾರೆ.


ಕೆನಡಾದ ನೂತನ ಪ್ರಧಾನಿ ಮಾರ್ಕ್ ಕಾರ್ನಿ ಕೂಡ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯನ್ನು ಕೆನಡಾದ ಸಾರ್ವಭೌಮತ್ವಕ್ಕೆ ಬೆದರಿಕೆ ಎಂದು ವಿಶ್ಲೇಷಿಸಿದ್ದು, ಅಮೆರಿಕನ್ನರು ನಮ್ಮ ಸಂಪನ್ಮೂಲಗಳು, ನಮ್ಮ ನೀರು, ನಮ್ಮ ಭೂಮಿ, ನಮ್ಮ ದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಬಯಸುತ್ತಾರೆ. ಆದರೆ ಕೆನಡಿ ಯನ್ನರು ಇದಕ್ಕೆ ಎಂದಿಗೂ ಅವಕಾಶ ನೀಡುವುದಿಲ್ಲ ಎಂದು ಮಾರ್ಕ್ ಕಾರ್ನಿ ಗುಡುಗಿದ್ದಾರೆ.

ಅತ್ತ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು, ಡೊನಾಲ್ಡ್ ಟ್ರಂಪ್ ಅವರ ಕೆನಡಾ ಸ್ವಾಧೀನ ಹೇಳಿಕೆಗಳನ್ನು ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ. ಆರ್ಥಿಕ ದೃಷ್ಟಿಕೋನದಿಂದ ಕೆನಡಾ ಅಮೆರಿಕದ 51ನೇ ರಾಜ್ಯವಾದರೆ ಉತ್ತಮ ಎಂದು ಅಧ್ಯಕ್ಷರು ನಂಬುತ್ತಾರೆ. ಆದರೆ ಇದರರ್ಥ ನಾವು ಕೆನಡಾವನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುತ್ತೇವೆ ಎಂದು ಖಂಡಿತ ಅಲ್ಲ.. ಎಂದು ಮಾರ್ಕೊ ರುಬಿಯೊ ಸ್ಪಷ್ಟಪಡಿಸಿದ್ದಾರೆ.

ಒಟ್ಟಿನಲ್ಲಿ ತಮ್ಮ ಸುಂಕ ಬೆದರಿಕೆಗಳಿಗೆ ಕೆನಡಾ ಮಂಡಿಯೂರಲಿದೆ ಎಂದು ನಿರೀಕ್ಷಿಸಿದ್ದ ಡೊನಾಲ್ಡ್ ಟ್ರಂಪ್, ಇದೀಗ ಅದರ ಆಕ್ರಮಣಕಾರಿ ವರ್ತನೆಗೆ ಆಶ್ಚರ್ಯಚಕಿತರಾಗಿದ್ದಾರೆ ಎಂದು ಹೇಳಬಹುದು.

# ಟಾಕ್ಸಿಕ್ ಅದ್ಭುತವಾಗಿದೆ

## ಜೆಜೆ ಪೆರ್ರಿ ಆಕ್ಷನ್ ಡೈರೆಕ್ಷನ್



ನ್ಯಾಷನಲ್ ಸ್ಟಾರ್ ಯಶ್ ನಟನೆಯ 'ಟಾಕ್ಸಿಕ್' ಸಿನಿಮಾಗೆ ಹಾಲಿವುಡ್‌ನ ಜೆಜೆ ಪೆರ್ರಿ ಆಕ್ಷನ್ ಸೀಕ್ವೆನ್ಸ್‌ಗೆ ಡೈರೆಕ್ಷನ್ ಮಾಡಿ ತಾಯ್ನಾಡಿಗೆ ಮರಳಿದ್ದಾರೆ. ಈ ಬೆನ್ನಲ್ಲೇ, ಯಶ್ ಕುರಿತು ಜೆಜೆ ಪೆರ್ರಿ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. 'ಟಾಕ್ಸಿಕ್' ಚಿತ್ರ ಅದ್ಭುತವಾಗಿದೆ ಎನ್ನುತ್ತಾ ಯಶ್ ಬಗ್ಗೆ ಗುಣಗಾನ ಮಾಡಿದ್ದಾರೆ. ಕನ್ನಡದ ಸಿನಿಮಾದಲ್ಲಿ ಕೆಲಸ ಮಾಡಿದ ಅನುಭವ ಬಿಚ್ಚಿಟ್ಟಿದ್ದಾರೆ. 'ಟಾಕ್ಸಿಕ್' ಚಿತ್ರದಲ್ಲಿ ನನ್ನ ಸ್ನೇಹಿತ ಯಶ್ ಜೊತೆ ಕೆಲಸ ಮಾಡಿದ್ದು ತುಂಬಾ ಖುಷಿ ಕೊಟ್ಟಿದೆ. ಭಾರತದಲ್ಲಿ ಇದ್ದಿದ್ದು ಖುಷಿ ಕೊಟ್ಟಿತು. ಯುರೋಪ್‌ನ ನನ್ನ ಅನೇಕ ಆತ್ಮೀಯ ಸ್ನೇಹಿತರೊಂದಿಗೆ ಕೆಲಸ ಮಾಡಲು ಅವಕಾಶ ಸಿಕ್ಕಿತು. ಇದನ್ನು ನೋಡಲು ಕಾದಿದ್ದೇನೆ. ಟಾಕ್ಸಿಕ್ ಸಿನಿಮಾ ನಿಜಕ್ಕೂ ಅದ್ಭುತ. ನಾವು ಏನನ್ನು ಮಾಡಿದ್ದೇವೋ ಆ ಬಗ್ಗೆ ಹೆಮ್ಮೆ ಇದೆ ಎಂದು ಇನ್ಸ್ಟಾಗ್ರಾಂ ಖಾತೆಯಲ್ಲಿ ಯಶ್ ಜೊತೆಗಿನ ಫೋಟೋ ಶೇರ್ ಮಾಡಿ ಜೆಜೆ ಪೆರ್ರಿ ಬರೆದುಕೊಂಡಿದ್ದಾರೆ.

# ರನ್ಯಾಗೆ ಮಾತ್ರ ಸಿನಿಮಾ ನಂಟಿಲ್ಲ

## ನಾಯಕ ನಟನಾಗಿ ತರುಣ್ ರಾಜ್



ಚಿನ್ನದ ಕಳ್ಳಸಾಗಾಣೆ ಪ್ರಕರಣದಲ್ಲಿ ರನ್ಯಾ ರಾವ್ ಜೊತೆಗೆ ಬಂಧನಕ್ಕೆ ಒಳಗಾಗಿರುವ ಮತ್ತೊಬ್ಬ ಆರೋಪಿ ತರುಣ್ ರಾಜ್‌ಗೆ ಕೂಡ ಸಿನಿಮಾ ನಂಟಿರುವುದು ಬೆಳಕಿಗೆ ಬಂದಿದೆ. ರನ್ಯಾ ಅಪ್ತ ಸ್ನೇಹಿತನಾಗಿದ್ದ ತರುಣ್ ರಾಜ್ ತೆಲುಗು ಸಿನಿಮಾದಲ್ಲಿ ಸಕ್ರಿಯನಾಗಿದ್ದ. ತೆಲುಗಿನ ಮೂರಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಾಯಕ ನಟನಾಗಿ ತರುಣ್ ರಾಜ್ ಅಭಿನಯಿಸಿದ್ದಾನೆ. ಸಿನಿಮಾ ನಟನೆಗೆಂದೇ ತರುಣ್ ಕೊಂಡೂರು ರಾಜ್ ಹೆಸರನ್ನು ವಿರಾಟ್ ಕೊಂಡೂರು ರಾಜ್ ಎಂದು ಬದಲಾಯಿಸಿಕೊಂಡಿದ್ದ. ಎಲ್ಲರ ಜೊತೆಗೂ ವಿರಾಟ್ ಎಂದೇ ಗುರುತಿಸಿಕೊಂಡಿದ್ದ. ಪರಿಚಯಂ ಸಿನಿಮಾದಲ್ಲಿ ನಾಯಕನಟನಾಗಿ ಅಭಿನಯಿಸಿದ್ದ. 2018 ರಲ್ಲಿ ತೆರೆ ಕಂಡಿದ್ದ ತೆಲುಗಿನ ಪರಿಚಯಂ ಸಿನಿಮಾದ ನಾಯಕ ನಟನಾಗಿದ್ದ ತರುಣ್‌ಗೆ ಸಿನಿಮಾ ಮೂಲಕವೇ ರನ್ಯಾ ಜೊತೆ ಸ್ನೇಹ ಬೆಳೆಸಿದ್ದ ಮಾಹಿತಿ ಸಿಕ್ಕಿದೆ. ಬಳಿಕ ರನ್ಯಾ ಗೋಲ್ಡ್ ಸ್ಮಗ್ಲಿಂಗ್ ಸಿಂಡಿಕೇಟ್‌ನಲ್ಲಿ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ. ಸದ್ಯ ಡಿಆರ್‌ಐ ಕಸ್ಟಡಿಯಲ್ಲಿರುವ ತರುಣ್ ರಾಜ್ ತೀವ್ರ ವಿಚಾರಣೆ ಮುಂದುವರೆದಿದೆ. ದುಬೈನಲ್ಲಿ ಚಿನ್ನ ಸಂಗ್ರಹಿಸುವ ಕುರಿತು ನಟಿ ರನ್ಯಾಗೆ ಸ್ನೇಹಿತ ಹಾಗೂ ಹೋಟೆಲ್ ಉದ್ಯಮಿ ಪುತ್ರ ತರುಣ್ ರಾಜ್ ಮಾಹಿತಿ ನೀಡುತ್ತಿದ್ದ ಎಂದು ಮೂಲಗಳು ಹೇಳಿವೆ. ದುಬೈನಲ್ಲಿ ಯಾರಿಂದ ಚಿನ್ನ ಪಡೆದು ಅನಂತರ ಹೇಗೆ ಬೆಂಗಳೂರಿಗೆ ಸಾಗಿಸಬೇಕು ಎಂಬ ನೀಲನಕ್ಷೆಯನ್ನು ರನ್ಯಾಗೆ ತರುಣ್ ರವಾನಿಸುತ್ತಿದ್ದ. ದುಬೈ ಪಯಣದಲ್ಲಿ ಗೆಳತಿ ಜೊತೆ ನಿರಂತರವಾಗಿ ಆತ ಸಂಪರ್ಕದಲ್ಲಿದ್ದು ಸೂಚನೆ ಕೊಡುತ್ತಿದ್ದ. ತನ್ನ ಗೆಳೆಯನ ಸೂಚನೆ ಅನುಸಾರ ರನ್ಯಾ ನಡೆದುಕೊಳ್ಳುತ್ತಿದ್ದಳು ಎಂಬ ವಿಚಾರ ಪ್ರಾಥಮಿಕ ತನಿಖೆ ವೇಳೆ ಬೆಳಕಿಗೆ ಬಂದಿದೆ.

# ಕನ್ನಡಕ್ಕೆ ಬಂದ 'ಹನುಮಾನ್' ಖ್ಯಾತಿಯ ಅಮೃತಾ ಅಯ್ಯರ್



ಬಿಜಿಲ್, ಹನುಮಾನ್ ಸಿನಿಮಾಗಳ ಮೂಲಕ ಗಮನ ಸೆಳೆದಿರುವ ಸೌತ್ ನಟಿ ಅಮೃತಾ ಅಯ್ಯರ್ ಕನ್ನಡಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಗೋಲ್ಡನ್ ಸ್ಟಾರ್ ಗಣೇಶ್‌ಗೆ ನಾಯಕಿಯಾಗುವ ಮೂಲಕ ಸ್ಯಾಂಡಲ್‌ವುಡ್‌ಗೆ ಪ್ರವೇಶಿಸುತ್ತಿದ್ದಾರೆ. ಬೆಂಗಳೂರಿನಲ್ಲೇ ಓದಿ ಬೆಳೆದಿರುವ ಅಮೃತಾ ಅಯ್ಯರ್ ತೆಲುಗು, ತಮಿಳಿನಲ್ಲಿ ಸ್ಟಾರ್ ನಟರ ಸಿನಿಮಾಗಳಲ್ಲಿ ನಟಿಸುವ ಮೂಲಕ ಹೈಪ್ ಕ್ರಿಯೆಟ್ ಮಾಡಿದ್ದಾರೆ. ಈಗ ಗಣೇಶ್‌ಗೆ ನಾಯಕಿಯಾಗಿ ಕನ್ನಡದ ಸಿನಿಮಾಗೆ ಅವರು ಪಾದಾರ್ಪಣೆ ಮಾಡ್ತಿದ್ದಾರೆ. 'ಲವ್ ಇನ್ ಮಂಡ್ಯ' ಖ್ಯಾತಿಯ ನಿರ್ದೇಶಕ ಅರಸು ಅಂತಾರೆ ಈ ಚಿತ್ರಕ್ಕೆ ಆಯಕ್ಷನ್ ಕಟ್ ಹೇಳ್ತಿದ್ದಾರೆ. ಇನ್ನೂ ಗೋಲ್ಡನ್ ಸ್ಟಾರ್ ಗಣೇಶ್ ಕೈಯಲ್ಲೂ ಬಿಗ್ ಬಜೆಟ್ ಸಿನಿಮಾಗಳಿವೆ. ಸಾಲು ಸಾಲು ಸಿನಿಮಾಗಳು ಅವರು ಬ್ಯುಸಿಯಾಗಿದ್ದಾರೆ. ಇದರ ನಡುವೆ ಅರಸು ಅಂತಾರೆ ನಿರ್ದೇಶಕನ ಕಥೆ ಇಷ್ಟವಾಗಿ ಈ ಸಿನಿಮಾಗೂ ಅವರು ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಫ್ಯಾಮಿಲಿ ಓರಿಯೆಂಟೆಡ್ ಕಥಾಹಂದರವಿರುವ ಚಿತ್ರವಾಗಿದೆ. ಇನ್ನೂ ಏ.6ರಂದು ಬೆಂಗಳೂರಿನಲ್ಲಿ ಈ ಚಿತ್ರದ ಮುಹೂರ್ತ ಸಮಾರಂಭ ನಡೆಯಲಿದೆ. ಏ.7ರಿಂದ ಮೊದಲ ಹಂತದ ಶೂಟಿಂಗ್ ಶುರುವಾಗಿದೆ. ಬೆಂಗಳೂರು, ಮೈಸೂರು ಸೇರಿದಂತೆ ಹಲವೆಡೆ ಈ ಸಿನಿಮಾದ ಚಿತ್ರೀಕರಣಕ್ಕೆ ಪ್ಲ್ಯಾನ್ ಮಾಡಲಾಗಿದೆ. ದಕ್ಷಿಣದ ಸಿನಿಮಾಗಳಲ್ಲಿ ಮನೆ ಮಾತಾಗಿರುವ ಅಮೃತಾ ಅವರು ಕನ್ನಡದ ಮೊದಲ ಸಿನಿಮಾದಲ್ಲೇ ಗಣೇಶ್‌ಗೆ ಜೋಡಿಯಾಗಿ ಬರುತ್ತಿರೋದು, ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ. ಇಬ್ಬರ ಕಾಂಬಿನೇಷನ್ ಸಿನಿಮಾ ನೋಡಲು ಎದುರು ನೋಡ್ತಿದ್ದಾರೆ.

ಸಿನಿ ವಾಹಿನಿ

# ರಶ್ಮಿಕಾಗೆ ರವಿ ಟೀಕೆ



ನಟಿ ರಶ್ಮಿಕಾ ಮಂದಣ್ಣಗೆ ಶಾಸಕ ರವಿ ಗಣಿಗ ಟೀಕಿಸಿದ್ದರ ಹಿನ್ನೆಲೆ ಅವರ ವಿರುದ್ಧ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ನೀಡಲಾಗಿದೆ. ರಶ್ಮಿಕಾ ಮಂದಣ್ಣಗೆ ಭಯ ಹುಟ್ಟಿಸಲಾಗಿದೆ ಎಂದು ರವಿ ಗಣಿಗ ವಿರುದ್ಧ ಮಹಿಳಾ ಆಯೋಗಕ್ಕೆ ಕೊಡವ ಸಂಘಟನೆಯಿಂದ ಪತ್ರ ಬರೆಯಲಾಗಿದೆ. ಮತ್ತೆ ರಶ್ಮಿಕಾ ವಿರುದ್ಧ ರವಿ ಗಣಿಗ ನಾಲಿಗೆ ಹರಿಬಿಟ್ಟಿದ್ದಕ್ಕೆ ಕೊಡವ ಸಂಘಟನೆ ನಟಿಯ ಬೆನ್ನಿಗೆ ನಿಂತಿದೆ. ರಶ್ಮಿಕಾ ಅವರನ್ನು ಬೆದರಿಸಿ ಭಯ ಹುಟ್ಟಿಸಲಾಗಿದೆ. ಅವರು ಅತಿಸೂಕ್ಷ್ಮ ಬುಡಕಟ್ಟು ಸಮುದಾಯದವರಾಗಿದ್ದಾರೆ. ಅವರನ್ನು ಬೆದರಿಸುವುದು ಸಂವಿಧಾನ ವಿರೋಧಿ ಕೃತ್ಯವಾಗಿದೆ. ಹಾಗಾಗಿ ಶಾಸಕನ ವಿರುದ್ಧ ಸುಮೊಟೊ ಕೇಸ್ ದಾಖಲಿಸಿ ಎಂದು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ನಾಚಪ್ಪ ಆಗ್ರಹಿಸಿದ್ದಾರೆ. ಇತ್ತೀಚೆಗೆ ಚಿತ್ರೋತ್ಸವಕ್ಕೆ ಕರೆದರೆ ರಶ್ಮಿಕಾ ಟೈಮ್ ಇಲ್ಲ ಅಂತಾರೆ ಎಂದು ನಟಿಯ ವಿರುದ್ಧ ರವಿ ಗಣಿಗ ಕೆಂಡಕಾರಿದ್ದರು. ಈ ಬೆನ್ನಲ್ಲೇ ನಟಿಗೆ ಭದ್ರತೆ ಬೇಕು ಅಂತ ಕೊಡವ ಕೌನ್ಸಿಲ್ ಅಧ್ಯಕ್ಷ ಎನ್.ಯು ನಾಚಪ್ಪ ಗೃಹ ಸಚಿವರಿಗೆ ಪತ್ರ ಬರೆದಿದ್ದರು. ಈ ವಿಚಾರವಾಗಿ ರವಿ ಗಣಿಗ ಮತ್ತೆ ಪತ್ರಿಕ್ರಿಯೆ ನೀಡಿದ್ದರು. ಇನ್ನೂ ಪ್ರಚಾರಕೋಸ್ಕರ ನಾಚಪ್ಪ ಪತ್ರ ಬರೆದಿರಬಹುದು. ಅದಕ್ಕೆ ಜಾಸ್ತಿ ಮನ್ನಣೆ ಕೊಡೋ ಅವಶ್ಯಕತೆಯಿಲ್ಲ ಎಂದು ವಿಧಾನಸೌಧದಲ್ಲಿ ಶಾಸಕ ಹೇಳಿಕೆ ನೀಡಿದ್ದರು. ಆವತ್ತು ನಾನು ಆಡಿದ ಮಾತಿಗೆ ಈಗಲೂ ಬದ್ಧನಿದ್ದೇನೆ. ನಮ್ಮ ಜಲ, ನಮ್ಮ ಭಾಷೆ, ನಮ್ಮ ರಾಜ್ಯವೇ ಮುಖ್ಯ. ನಮ್ಮ ವೈಯಕ್ತಿಕ ಹಿತಾಸ್ತಿ ಅಲ್ಲ. ಕಳೆದ ಬಾರಿ ಚಲನಚಿತ್ರೋತ್ಸವಕ್ಕೆ ಕರೆದಾಗ ಅವರು ನಿರಾಕರಿಸಿದ್ದು, ಹಲವಾರು ವೇದಿಕೆಯಲ್ಲಿ ಕನ್ನಡ ಮತ್ತು ಕರ್ನಾಟಕವನ್ನು ಅವಮಾನಕಾರಿಯಾಗಿ ರಶ್ಮಿಕಾ ಮಾತನಾಡಿರೋದು ಇಂದಿಗೂ ಖಂಡಿಸುತ್ತೇನೆ. ಇವತ್ತಿಗೂ ಕರ್ನಾಟಕದ ಪರ ನಾನಿದ್ದೇನೆ ಅಂತ ಹೇಳಲಿ, ಆ ಬಗ್ಗೆ ನಾನು ತುಟಿಕ್ ಪುಟಿಕ್ ಎನ್ನಲ್ಲ ಎಂದಿದ್ದರು. ಹಾಗಾಗಿ ಈ ಹೇಳಿಕೆಯ ಬೆನ್ನಲ್ಲೇ ರವಿ ಗಣಿಗ ವಿರುದ್ಧ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ನೀಡಲಾಗಿದೆ.

# ರೀ ರಿಲೀಸ್ ಆಗ್ತಿದೆ ಅಪ್ಪು ಸಿನಿಮಾ

## ಗಣ್ಯರು ಒಂದುಗೂಡುವ ಹಬ್ಬ



ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಟನೆಯ 'ಅಪ್ಪು' ಸಿನಿಮಾ ಮಾ.14ರಂದು ರೀ ರಿಲೀಸ್‌ಗೆ ಸಿದ್ಧವಾಗಿದೆ. ಮಾ.17ರಂದು ಪುನೀತ್ ಹುಟ್ಟುಹಬ್ಬದ ಹಿನ್ನೆಲೆ ಮತ್ತೆ 'ಅಪ್ಪು' ಸಿನಿಮಾ ರೀ ರಿಲೀಸ್ ಮಾಡಲಾಗುತ್ತಿದೆ. ಹಾಗಾಗಿ 'ಅಪ್ಪು' ಸಿನಿಮಾ ಸಕ್ಸಸ್‌ನ ವಿಶೇಷ ವಿಡಿಯೋವೊಂದನ್ನು ಪುನೀತ್ ಪತ್ನಿ ಹಂಚಿಕೊಂಡಿದ್ದಾರೆ. 'ಅಪ್ಪು' 100ನೇ ದಿನದ ಸಂಭ್ರಮದ ವಿಡಿಯೋವನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಶೇರ್ ಮಾಡಿ, 'ಅಪ್ಪು' ಚಿತ್ರದ ಐತಿಹಾಸಿಕ ಶತದಿನೋತ್ಸವ ಸಮಾರಂಭದ ಯಶಸ್ಸನ್ನು ಹರ್ಷದಿಂದ ಹಾರೈಸಲು ಕನ್ನಡ ಚಿತ್ರರಂಗದ ಗಣ್ಯರು ಒಂದುಗೂಡುವ ಹಬ್ಬದ ಅಪರೂಪದ ಕ್ಷಣಗಳು ಎಂದು ಬರೆದುಕೊಂಡಿದ್ದಾರೆ. ಜೊತೆಗೆ ಮಾ.14ರಂದು ರೀ ರಿಲೀಸ್ ಆಗುತ್ತಿರುವ 'ಅಪ್ಪು' ಚಿತ್ರದ ಬಗ್ಗೆ ಅಪ್‌ಡೇಟ್ ಕೊಟ್ಟಿದ್ದಾರೆ. ಇನ್ನೂ 'ಅಪ್ಪು' ಚಿತ್ರದ ಸಕ್ಸಸ್ ಕಾರ್ಯಕ್ರಮವು ಅಣ್ಣಾವ್ರು, ರಜನಿಕಾಂತ್ ಸಮ್ಮುಖದಲ್ಲಿ ನಡೆದಿತ್ತು. ಸಿನಿಮಾ ಗೆದ್ದ ಖುಷಿಯಲ್ಲಿ ಶಿವಣ್ಣ, ರಾಘಣ್ಣ ಮತ್ತು ಅಪ್ಪು ಜೊತೆಯಾಗಿ ಹೆಜ್ಜೆ ಹಾಕಿದ್ದರು. ಇನ್ನೂ ಪೂರಿ ಜಗನ್ನಾಥ್ ನಿರ್ದೇಶನದ 'ಅಪ್ಪು' ಸಿನಿಮಾದಲ್ಲಿ ಪುನೀತ್‌ಗೆ ನಾಯಕಿಯಾಗಿ ರಕ್ಷಿತಾ ನಟಿಸಿದ್ದರು. ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣ ಮಾಡಿದ್ದರು.

# ರೋಹಿತ್ ನಿವೃತ್ತಿಯ ಬಗ್ಗೆ ಎಬಿಡಿ ಏನಂದ್ರು




ಚಾಂಪಿಯನ್ಸ್ ಟ್ರೋಫಿ ಬಳಿಕ ರೋಹಿತ್ ಶರ್ಮಾ ನಿವೃತ್ತಿಯಾಗುವ ಬಗ್ಗೆ ಊಹಾಪೋಹಗಳು ಹಬ್ಬಿದ್ದವು. ಆದರೆ, ರೋಹಿತ್ ತಾನು ನಿವೃತ್ತಿಯಾಗುತ್ತಿಲ್ಲ ಎಂದು ಖಚಿತಪಡಿಸಿದ್ದಾರೆ. ಇದೀಗ ರೋಹಿತ್ ಬೆನ್ನಿಗೆ ನಿಂತಿರುವ ಎಬಿ ಡಿವಿಲಿಯರ್ಸ್, ರೋಹಿತ್ ಅವರ ಗೆಲುವಿನ ಶೇಕಡಾವಾರು ಹಾಗೂ ಅವರ ಬ್ಯಾಟಿಂಗ್ ದಾಖಲೆಯನ್ನು ಶ್ಲಾಘಿಸುತ್ತಾ, ನಿವೃತ್ತಿ ಹೊಂದಲು ಯಾವುದೇ ಕಾರಣವಿಲ್ಲ ಎಂದು ಹೇಳಿದ್ದಾರೆ. ರೋಹಿತ್ ಭವಿಷ್ಯದಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ಸಾರ್ವಕಾಲಿಕ ಶ್ರೇಷ್ಠ ನಾಯಕರಲ್ಲಿ ಒಬ್ಬರೆಂದು ನೆನಪಾಗುವರು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಗೆದ್ದಿರುವ ಟೀಂ ಇಂಡಿಯಾ ಪ್ರಸ್ತುತ ವಿಶ್ರಾಂತಿಯಲ್ಲಿದೆ. ಆದಾಗ್ಯೂ, ಟೀಂ ಇಂಡಿಯಾವನ್ನು ಚಾಂಪಿಯನ್ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದ ನಾಯಕ ರೋಹಿತ್ ಶರ್ಮಾವರ ನಿವೃತ್ತಿ ಬಗ್ಗೆಗಿನ ಚರ್ಚೆಗಳಿಗೆ ಕೊನೆ ಸಿಕ್ಕಿಲ್ಲ. ವಾಸ್ತವವಾಗಿ ಫೈನಲ್ ಪಂದ್ಯ ಮುಗಿದ ಬಳಿಕ ಮಾತನಾಡಿದ್ದ ರೋಹಿತ್, ನಾನು ಸದ್ಯಕ್ಕೆ ನಿವೃತ್ತಿಯಾಗುತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಇದೀಗ ರೋಹಿತ್ ಬೆನ್ನಿಗೆ ನಿಂತಿರುವ ದಕ್ಷಿಣ ಆಫ್ರಿಕಾದ ಮಾಜಿ ನಾಯಕ ಹಾಗೂ ಆರ್‌ಸಿಬಿಯ ಆಪತ್ಬಾಂಧವ ಖ್ಯಾತಿಯ ಎಬಿ ಡಿವಿಲಿಯರ್ಸ್, 'ರೋಹಿತ್ ಶರ್ಮಾ ನಿವೃತ್ತಿ ಹೊಂದಲು ಯಾವುದೇ ಕಾರಣವಿಲ್ಲ. ಭವಿಷ್ಯದಲ್ಲಿ ಅವರನ್ನು ಸಾರ್ವಕಾಲಿಕ ಶ್ರೇಷ್ಠ ಏಕದಿನ ನಾಯಕರಲ್ಲಿ ಒಬ್ಬರೆಂದು ನೆನಪಿಸಿಕೊಳ್ಳಲಾಗುತ್ತದೆ ಎಂದು ಡಿವಿಲಿಯರ್ಸ್ ಅಭಿಪ್ರಾಯಪಟ್ಟಿದ್ದಾರೆ.

ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ರೋಹಿತ್ ನಿವೃತ್ತಿಯ ಬಗ್ಗೆ ಮಾತನಾಡಿರುವ ಡಿವಿಲಿಯರ್ಸ್, 'ಇತರ ನಾಯಕರಿಗೆ ಹೋಲಿಸಿದರೆ ರೋಹಿತ್ ಅವರ ಗೆಲುವಿನ ಶೇಕಡಾವಾರು ಪ್ರಮಾಣವನ್ನು ನೋಡಿದರೆ, ಅದು ಸುಮಾರು 74 ಪ್ರತಿಶತದಷ್ಟಿದೆ, ಇದು ಹಿಂದಿನ ಯಾವುದೇ ನಾಯಕನಿಗೆ ಹೋಲಿಸಿದರು ಅತ್ಯುತ್ತಮವಾಗಿದೆ. ರೋಹಿತ್ ಹೀಗೆಯೇ ಮುಂದುವರಿದರೆ, ಅವರು ಸಾರ್ವಕಾಲಿಕ ಶ್ರೇಷ್ಠ ಏಕದಿನ ನಾಯಕರಲ್ಲಿ ಒಬ್ಬರಾಗಿ ಸ್ಮರಣೀಯರಾಗುತ್ತಾರೆ.

# ಭಾರಿ ನಷ್ಟದ ಸುಳಿಗೆ ಸಿಲುಕಿಕೊಂಡ ಆಯೋಜಕರು

## ಫೈನಲ್‌ಗೆ ಅರ್ಹತೆ ಪಡೆಯದ ಭಾರತ

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಭಾರತದ ಅನುಪಸ್ಥಿತಿಯಿಂದಾಗಿ ಲಾರ್ಡ್ಸ್ ಕ್ರಿಕೆಟ್ ಮೈದಾನವು ಭಾರೀ ಆರ್ಥಿಕ ನಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ಟೀಂ ಇಂಡಿಯಾ ಫೈನಲ್‌ಗೆ ಅರ್ಹತೆ ಪಡೆಯುವ ನಿರೀಕ್ಷೆಯಿಂದ ಟಿಕೆಟ್ ಬೆಲೆಗಳನ್ನು ಹೆಚ್ಚಿಸಲಾಗಿತ್ತು. ಆದರೆ ಭಾರತದ ಸೋಲಿನಿಂದಾಗಿ ಟಿಕೆಟ್ ಬೆಲೆಗಳನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ, ಇದರಿಂದ ಆಯೋಜಕರಿಗೆ ನಷ್ಟ ಉಂಟಾಗಿದೆ. ಲಾರ್ಡ್ಸ್ ಕ್ಲಬ್ ಸುಮಾರು 45 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುವ ಸಾಧ್ಯತೆಯಿದೆ ಚಾಂಪಿಯನ್ಸ್ ಟ್ರೋಫಿಯ ಅಂತ್ಯದೊಂದಿಗೆ ಸದ್ಯಕ್ಕೆ ಐಸಿಸಿ ಈವೆಂಟ್‌ಗಳಿಗೆ ಬ್ರೇಕ್ ಬಿದ್ದಿದೆ. ಮುಂದಿನ ಜೂನ್ ತಿಂಗಳಲ್ಲಿ ನಡೆಯುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಐಸಿಸಿ ನಡೆಸುವ ಪ್ರಮುಖ ಈವೆಂಟ್ ಆಗಿದೆ. ಆದರೆ ಈ ಫೈನಲ್ ಪಂದ್ಯ ನಷ್ಟದ ಸುಳಿಗೆ ಸಿಲುಕಿದ್ದು, ಆಯೋಜಕರು ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವಂತ್ತಾಗಿದೆ. ಇದಕ್ಕೆ ಪ್ರಮುಖ ಕಾರಣ, ಪ್ರಸ್ತುತ ಕ್ರಿಕೆಟ್ ಲೋಕವನ್ನು ಅಕ್ಷರಶಃ ಆಳುತ್ತಿರುವ ಟೀಂ ಇಂಡಿಯಾ ಡಬ್ಲ್ಯುಟಿಸಿ ಫೈನಲ್‌ಗೆ ಅರ್ಹತೆ ಪಡೆಯಲು ವಿಫಲವಾಗಿರುವುದು. ಟೀಂ ಇಂಡಿಯಾ ಡಬ್ಲ್ಯುಟಿಸಿ ಫೈನಲ್‌ಗೆ ಅರ್ಹತೆ ಪಡೆಯುತ್ತದೆ ಎಂಬ ನಂಬಿಕೆಯ ಮೇಲೆ ಫೈನಲ್ ಪಂದ್ಯದ ಟಿಕೆಟ್‌ಗಳ ಬೆಲೆಯಲ್ಲಿ ಹೆಚ್ಚಳ ಮಾಡಿದ ಆಯೋಜಕರು ಇದೀಗ ಫೈನಲ್ ಪಂದ್ಯದ ಟಿಕೆಟ್‌ಗಳ ಬೆಲೆಯನ್ನು ಇಳಿಸಿದ್ದಾರೆ ಎಂದು ವರದಿಯಾಗಿದೆ.

**ಫೈನಲ್ ರೇಸ್‌ನಿಂದ ಹೊರಬಿದ್ದ ಭಾರತ:** ವಾಸ್ತವವಾಗಿ ನ್ಯೂಜಿಲೆಂಡ್ ಹಾಗೂ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಗಳು ನಡೆಯುವುದಕ್ಕೂ ಮುನ್ನ ಡಬ್ಲ್ಯುಟಿಸಿ ಫೈನಲ್ ರೇಸ್‌ನಲ್ಲಿ ಟೀಂ ಇಂಡಿಯಾ ಅಗ್ರಸ್ಥಾನದಲ್ಲಿತ್ತು.

ಅಲ್ಲದೆ ಕಿವೀಸ್ ತಂಡವನ್ನು ತವರಿನಲ್ಲೇ ಎದುರಿಸುತ್ತಿದ್ದ ಟೀಂ ಇಂಡಿಯಾ ಸುಲಭವಾಗಿ ಸರಣಿ ಗೆದ್ದು ಡಬ್ಲ್ಯುಟಿಸಿ ಫೈನಲ್‌ಗೆ ಅರ್ಹತೆ ಪಡೆಯುತ್ತದೆ ಎಂದು ಆಯೋಜಕರು ಭರವಸೆ ಹೊಂದಿದ್ದರು. ಆದರೆ ಕಿವೀಸ್ ವಿರುದ್ಧ ಟೆಸ್ಟ್ ಸರಣಿ ಸೋತ್ತಿದ್ದ ಭಾರತ, ಆ ಬಳಿಕ ಆಸ್ಟ್ರೇಲಿಯಾದಲ್ಲೂ ಸೋಲಿಗೆ ಸುಳಿಗೆ ಸಿಲುಕಿತು. ಅಂತಿಮವಾಗಿ ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನ ಪಡೆದ ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾ ಫೈನಲ್ ಪಂದ್ಯವನ್ನಾಡಲು ಟಿಕೆಟ್ ಪಡೆದುಕೊಂಡವು.

**45 ಕೋಟಿ ರೂ. ನಷ್ಟ:** ಇದೀಗ ಮೊದಲೇ ನಿರ್ಧರಿಸಿದಂತೆ ಡಬ್ಲ್ಯುಟಿಸಿ ಮೂರನೇ ಆವೃತ್ತಿಯ ಫೈನಲ್ ಪಂದ್ಯಕ್ಕೆ ಕ್ರಿಕೆಟ್ ಕಾಶಿ ಲಾರ್ಡ್ಸ್ ಮೈದಾನ ಆತಿಥ್ಯವಹಿಸಲು ಸಜ್ಜಾಗಿ ನಿಂತಿದೆ. ಆದರೆ ಸತತ ಮೂರನೇ ಬಾರಿಗೆ ಭಾರಿ ಲಾಭಗಳಿಸುವ ನಿರೀಕ್ಷೆಯಲ್ಲಿದ್ದ ಮೇರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಮಾತ್ರ ನಷ್ಟದ ಸುಳಿಗೆ ಸಿಲುಕುವ ಆತಂಕದಲ್ಲಿದೆ.

ದಿ ಟೈಮ್ಸ್ ವರದಿಯ ಪ್ರಕಾರ, ಭಾರತ ಅರ್ಹತೆ ಪಡೆಯುವಲ್ಲಿ ವಿಫಲವಾದ ಕಾರಣ ಡಬ್ಲ್ಯುಟಿಸಿ ಫೈನಲ್ ಪಂದ್ಯವನ್ನು ಲಾರ್ಡ್ಸ್ ಮೈದಾನದಲ್ಲಿ ಆಯೋಜಿಸುತ್ತಿರುವ ಮೇರಿಲ್‌ಬೋನ್ ಕ್ರಿಕೆಟ್ ಕ್ಲಬ್, ಸರಿ ಸುಮಾರು ನಾಲ್ಕು ಮಿಲಿಯನ್ ಪೌಂಡ್‌ಗಳು ಅಂದರೆ ಭಾರತೀಯ ರೂಪಾಯಿಗಳಲ್ಲಿ 45 ಕೋಟಿ ರೂಗಳಷ್ಟು ಕಡಿಮೆ ಆದಾಯವನ್ನು / ನಷ್ಟವನ್ನು ಅನುಭವಿಸಲಿದೆ ಎಂದು ವರದಿ ಮಾಡಿದೆ.



2025ರ ದಿ ಹಂಡ್ರೆಡ್ ಲೀಗ್‌ನ ಆಟಗಾರರ ಡ್ರಾಫ್ಟ್‌ನಲ್ಲಿ ಯಾವುದೇ ಪಾಕಿಸ್ತಾನಿ ಆಟಗಾರ ಆಯ್ಕೆಯಾಗಿಲ್ಲ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ನೋಂದಾಯಿಸಿಕೊಂಡಿದ್ದ 45ಕ್ಕೂ ಹೆಚ್ಚು ಪಾಕಿಸ್ತಾನಿ ಆಟಗಾರರು ಯಾವುದೇ ತಂಡದಿಂದ ಆಯ್ಕೆಯಾಗದೆ ಉಳಿದಿದ್ದಾರೆ. ಐಪಿಎಲ್ ಫ್ರಾಂಚೈಸಿಗಳ ಹೂಡಿಕೆಯಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂಬ ಅನುಮಾನವಿದೆ. ಟಿ20 ಲೀಗ್‌ನಲ್ಲೂ ಇದೇ ರೀತಿಯ ಪರಿಸ್ಥಿತಿ ಇದೆ. ಈ ಘಟನೆಯು ಪಾಕಿಸ್ತಾನ ಕ್ರಿಕೆಟ್ ಅಭಿಮಾನಿಗಳಲ್ಲಿ ನಿರಾಶೆಯನ್ನುಂಟು ಮಾಡಿದೆ. ದಿ ಹಂಡ್ರೆಡ್ ಲೀಗ್‌ನ ಡ್ರಾಫ್ಟ್ ಸಿದ್ಧವಾಗಿದೆ. ಅಚ್ಚರಿಯ ಸಂಗತಿಯೆಂದರೆ ಈ ಇಂಗ್ಲಿಷ್ ಲೀಗ್‌ನಲ್ಲಿ ಒಬ್ಬನೇ ಒಬ್ಬ ಪಾಕಿಸ್ತಾನಿ ಆಟಗಾರನೂ ಮಾರಾಟವಾಗಿಲ್ಲ. ದಿ ಹಂಡ್ರೆಡ್ ಲೀಗ್‌ಗೆ 45 ಆಟಗಾರರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದರು. ಆದರೆ ಒಂದೇ ಒಂದು ತಂಡವೂ ಅವರನ್ನು ಖರೀದಿಸುವ ಮನಸು ಮಾಡಿಲ್ಲ. ನಸೀಮ್ ಶಾ, ಶಾದಾಬ್ ಖಾನ್, ಹಸನ್ ಅಲಿ, ಶಾನ್ ಮಸೂದ್, ಸೈಮ್ ಅಯೂಬ್ ಅವರಂತಹ ಆಟಗಾರರು ದಿ ಹಂಡ್ರೆಡ್‌ನಲ್ಲಿ ಆಡಲು ಬಯಸಿದ್ದರು. ಆದರೆ ಯಾವ ಫ್ರಾಂಚೈಸಿಯೂ ಅವರನ್ನು ಖರೀದಿಸಿಲ್ಲ. ಪುರುಷ ಕ್ರಿಕೆಟಿಗರು ಮಾತ್ರವಲ್ಲ, ಮಹಿಳೆಯರ ದಿ ಹಂಡ್ರೆಡ್ ಲೀಗ್‌ನ ಡ್ರಾಫ್ಟ್‌ನಲ್ಲಿದ್ದ ಐವರು ಪಾಕಿಸ್ತಾನಿ ಮಹಿಳಾ ಆಟಗಾರ್ತಿಯರು ಸಹ ಖರೀದಿಯಾಗಿಲ್ಲ. ಈ ಸುದ್ದಿ ಪಾಕಿಸ್ತಾನ ಕ್ರಿಕೆಟ್ ಅಭಿಮಾನಿಗಳಿಗೆ ತುಂಬಾ ನಿರಾಶೆಯನ್ನುಂಟು ಮಾಡಿದೆ.

# ದಿ ಹಂಡ್ರೆಡ್ ಲೀಗ್‌ನಲ್ಲಿ ಪಾಕ್ ಆಟಗಾರರು ಅನ್‌ಸೋಲ್ಡ್

## ಐಪಿಎಲ್ ಫ್ರಾಂಚೈಸಿಗಳ ಮೇಲೆ ಕೇಳಿಬಂತು ಆರೋಪ



### ಒಬ್ಬ ಆಟಗಾರನು ಮಾರಾಟವಾಗಲಿಲ್ಲ

2025 ರ 'ದಿ ಹಂಡ್ರೆಡ್' ಸೀಸನ್‌ನ ಆಟಗಾರರ ಡ್ರಾಫ್ಟ್‌ನಲ್ಲಿ ಯಾವುದೇ ಪಾಕಿಸ್ತಾನಿ ಆಟಗಾರನಿಗೆ ಸ್ಥಾನ ಸಿಕ್ಕಿಲ್ಲ. ಪುರುಷರ ಡ್ರಾಫ್ಟ್‌ನಲ್ಲಿ ಪಾಕಿಸ್ತಾನದ 45 ಆಟಗಾರರು ನೋಂದಾಯಿಸಿಕೊಂಡಿದ್ದರು, ಆದರೆ ಅವರಲ್ಲಿ ಯಾರನ್ನೂ ತಂಡಗಳು ಆಯ್ಕೆ ಮಾಡಿಲ್ಲ. ಈ ನಿರ್ಧಾರ ಸ್ವಲ್ಪ ಆಶ್ಚರ್ಯಕರವಾಗಿದೆ, ಏಕೆಂದರೆ ಕಳೆದ ಆವೃತ್ತಿಯ 'ದಿ ಹಂಡ್ರೆಡ್' ನಲ್ಲಿ ಪಾಕಿಸ್ತಾನಿ ಆಟಗಾರರು ಉತ್ತಮ ಪ್ರದರ್ಶನ ನೀಡಿದ್ದರು. ಒಸಾಮಾ ಮಿರ್, ಹರಿಸ್ ರೌಫ್, ಇಮಾದ್ ವಾಸಿಮ್ ಮತ್ತು ಶಾಹೀನ್ ಅಫ್ರಿದಿಯಂತಹ ಆಟಗಾರರು ಈ ಲೀಗ್‌ನಲ್ಲಿ ಆಡಿದ್ದರು.

### ಐಪಿಎಲ್ ಫ್ರಾಂಚೈಸಿಗಳ ಪ್ರಭಾವ

ವಾಸ್ತವವಾಗಿ ಈ ವರ್ಷ 'ದಿ ಹಂಡ್ರೆಡ್' ನಲ್ಲಿ ದೊಡ್ಡ ಬದಲಾವಣೆಯಾಗಿದೆ. ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಫ್ರಾಂಚೈಸಿಗಳಲ್ಲಿ ಹೂಡಿಕೆ ಮಾಡಲು ಹೊರಗಿನವರಿಗೆ ಆಹ್ವಾನ ನೀಡಿತ್ತು. ಆ ಪ್ರಕಾರ, ಲೀಗ್‌ನಲ್ಲಿ ಆಡುತ್ತಿರುವ 8 ತಂಡಗಳ ಪೈಕಿ, ನಾಲ್ಕು ತಂಡಗಳಲ್ಲಿ ಐಪಿಎಲ್ ಫ್ರಾಂಚೈಸಿಗಳು ಹೂಡಿಕೆ ಮಾಡಿವೆ. ಹೀಗಾಗಿ ಐಪಿಎಲ್ ಫ್ರಾಂಚೈಸಿಗಳು ಪಾಕಿಸ್ತಾನ ಆಟಗಾರರನ್ನು ಖರೀದಿಸದಂತೆ ತಡೆದಿವೆ ಎಂಬ ಆರೋಪ ಕೇಳಿಬರುತ್ತಿದೆ. ಆದರೆ ಇಲ್ಲಿರುವ ದೊಡ್ಡ ಪ್ರಶ್ನೆಯೆಂದರೆ, ಐಪಿಎಲ್ ತಂಡಗಳ ಒಡೆತನದಲ್ಲಿಲ್ಲದ ಇತರ ನಾಲ್ಕು ತಂಡಗಳು ಪಾಕಿಸ್ತಾನಿ ಆಟಗಾರರನ್ನು ಏಕೆ ಖರೀದಿಸಲಿಲ್ಲ ಎಂಬುದು.

### ಟಿ20 ಲೀಗ್‌ನಲ್ಲೂ ಇದೆ ಕತೆ

ದಕ್ಷಿಣ ಆಫ್ರಿಕಾದ ಖ20 ಲೀಗ್‌ನಲ್ಲಿರುವ ಎಲ್ಲಾ ಆರು ತಂಡಗಳು ಸಹ ಐಪಿಎಲ್ ಫ್ರಾಂಚೈಸಿಗಳ ಒಡೆತನದಲ್ಲಿವೆ. ಈ ಲೀಗ್‌ನಲ್ಲೂ ಇಲ್ಲಿಯವರೆಗೆ ಒಬ್ಬ ಪಾಕಿಸ್ತಾನಿ ಆಟಗಾರನೂ ಈ ಲೀಗ್‌ನಲ್ಲಿ ಸ್ಥಾನ ಪಡೆದಿಲ್ಲ. 'ದಿ ಹಂಡ್ರೆಡ್' ನಲ್ಲಿ ಐಪಿಎಲ್ ಫ್ರಾಂಚೈಸಿಗಳು ಹೂಡಿಕೆ ಮಾಡಿದ ನಂತರ, ಪಾಕಿಸ್ತಾನಿ ಆಟಗಾರರ ಮೇಲೆ ನಿಷೇಧ ಹೇರಬಹುದೆಂಬ ಭಯವಿತ್ತು. ಆದಾಗ್ಯೂ, ಪಾಕಿಸ್ತಾನಿ ಆಟಗಾರರ ಭಾಗವಹಿಸುವಿಕೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಇಸಿಬಿ ಅಧ್ಯಕ್ಷ ರಿಚರ್ಡ್ ಗೌಲ್ಡ್ ಕಳೆದ ತಿಂಗಳು ಸ್ಪಷ್ಟಪಡಿಸಿದ್ದರು. ಆದರೆ ಡ್ರಾಫ್ಟ್ ನಂತರ, ಈಗ ಪಾಕಿಸ್ತಾನಿ ಅಭಿಮಾನಿಗಳು ಈ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ.

# ಚಹಲ್-ಮಹ್ವಾಶ್ ವಿಡಿಯೋ ವೈರಲ್



ಭಾರತ ತಂಡದ ಸ್ಪಿನ್ನರ್ ಯುಜ್ವೇಂದ್ರ ಚಹಲ್ ಚಾಂಪಿಯನ್ಸ್ ಟ್ರೋಫಿಯ ಫೈನಲ್ ಪಂದ್ಯದ ವೇಳೆ ಸ್ಟೇಡಿಯಂನಲ್ಲಿ ಕಾಣಿಸಿಕೊಂಡಿದ್ದರು. ಅದು ಸಹ ಚೆಂದುಳ್ಳಿ ಚೆಲುವೆ ಮಹ್ವಾಶ್ ಅವರೊಂದಿಗೆ. ಈ ಫೋಟೋಗಳು ಸೋಷಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿತ್ತು. ಇದೀಗ ಇಬ್ಬರ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದ ವೇಳೆ ಸ್ಟೇಡಿಯಂನಲ್ಲಿ ಟೀಮ್ ಇಂಡಿಯಾ ಸ್ಪಿನ್ನರ್ ಯುಜ್ವೇಂದ್ರ ಚಹಲ್ ಹಾಗೂ ಆರ್‌ಜೆ ಮಹ್ವಾಶ್ ಜೊತೆಯಾಗಿ ಕಾಣಿಸಿಕೊಂಡಿದ್ದರು. ಈ ಫೋಟೋ ಹಾಗೂ ವಿಡಿಯೋಗಳು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡಿತ್ತು. ಇದೀಗ ಚಹಲ್ ಹಾಗೂ ಮಹ್ವಾಶ್ ಅವರ ಮತ್ತೊಂದು ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಸ್ಟೇಡಿಯಂನಲ್ಲಿ ಚಹಲ್ ಹಾಗೂ ಮಹ್ವಾಶ್ ಪರಸ್ಪರ ಚುಂಬಿಸುತ್ತಿರುವ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ. ಈ ವಿಡಿಯೋ ಸಿಕ್ಕಾಪಟ್ಟೆ ವೈರಲ್ ಆಗಿದೆ. ಆದರೆ ಈ ವಿಡಿಯೋ ಅಸಲಿಯತ್ತೇ ಬೇರೆ. ಯುಜ್ವೇಂದ್ರ ಚಹಲ್ ಜೊತೆ ಕಾಣಿಸಿಕೊಂಡಿರುವ ಮಹ್ವಾಶ್ ರೆಡಿಯೋ ಜಾಕಿಯೋ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಹಿಂದೆ 'ಸೆಕ್ಷನ್ 108' ಹೆಸರಿನ ಸಿನಿಮಾ ನಿರ್ಮಾಣ ಸಹ ಮಾಡಿದ್ದಾರೆ. ಹಾಗೆಯೇ ವೆಬ್ ಸೀರಿಸ್ ಒಂದರಲ್ಲಿ ನಾಯಕಿ ಆಗಿಯೂ ನಟಿಸುತ್ತಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966